

ಸಂಪುಟ 22 ಸಂಚಿಕೆ 50
ಡಿಸೆಂಬರ್ 3, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ



# ಗುಲ್ಬರ್ಗ ಜಿಲ್ಲೆಯ ಗೂಂಡಾ ರಾಜಕೀಯ



# ಅಮೆರಿಕಾ ಚುನಾವಣೆಗಳು ರಂಗು ರಂಗಿನ ನಾಟಕ

# ಸಂಘ ಪರಿವಾರದ ಡಾಲರ್ ಲೀಲೆ!




## 'ಮುನ್ನುಡಿ' ಸಿನಿಮಾ

ಕರ್ನಾಟಕ ವಿಶ್ವ ವಿದ್ಯಾಲಯ ಮಸೂದೆ-200

**ಕಳೆದ ಸಂಚಿಕೆಯಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಸಂಯುಕ್ತ ರಂಗ ರಚನೆ, ಗಣಶಕ್ತಿ ಸಂಜೆ ದೈನಿಕ ಉದಯದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ 1967 ರ ಸಾರ್ವತ್ರಿಕ ಚುನಾವಣೆಯಲ್ಲಿ ಮೊದಲಬಾರಿಗೆ ಅಲ್ಪಮತಕ್ಕಿಳಿದ ಪ.ಬಂಗಾಳ ಕಾಂಗ್ರೆಸ್‌ನಲ್ಲಿ ಆತಂಕದ ಛಾಯೆ ಮೂಡತೊಡಗಿದ್ದು, ಕೇರಳದಲ್ಲಿಯೂ ಕಾಂಗ್ರೆಸ್ ಮಣ್ಣು ಮುಕ್ಕಿದ್ದು ಮತ್ತು ಮೊದಲ ಬಾರಿಗೆ ಪ.ಬಂಗಾಳದಲ್ಲಿ ಕಾಂಗ್ರೆಸ್ಸೇತರ ಸರ್ಕಾರವೊಂದು ರಚನೆಯಾಗಿ ಸಂಯುಕ್ತ ರಂಗ ಅಧಿಕಾರಕ್ಕೆ ಬಂತು. ಹೊಸ ಸರ್ಕಾರದ ಎಲ್ಲಾ ಕೆಲಸಗಳನ್ನು ಶೂನ್ಯದಿಂದಲೇ ಪ್ರಾರಂಭವಾದವು ಈ ಬಗ್ಗೆ ಓದಿ**

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



## ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 51

ಚುನಾವಣೆಗಳ ಸಂದರ್ಭದಲ್ಲಿ ಎಂದಿನಂತೆ ನಮ್ಮ ಮೇಲೆ ಆಕ್ರಮಣಗಳು ಮುಂದುವರಿದವು. ಬಂಡವಾಳಶಾಹಿ ಪತ್ರಿಕೆಗಳು ಮತ್ತು ಸರಕಾರಿ ಮಾಧ್ಯಮದಿಂದ ಅಪಪ್ರಚಾರದ ಹೊಳೆಯೂ ಹರಿಯಿತು. ಡೈಮಂಡ್ ಹಾರ್ಬರ್‌ನಿಂದ ಸ್ಪರ್ಧಿಸಿದ್ದ ನಮ್ಮ ಮುಖಂಡ ಜ್ಯೋತಿರ್ಮಯಿ ಬಸು ಮೇಲೆ ಕಾಂಗ್ರೆಸ್ಸಿಗರು ಹಲ್ಲೆ ನಡೆಸಿದರು. ಅವರು ಗಂಭೀರವಾಗಿ ಗಾಯಗೊಂಡರು. ಬಲ್ಲಿಯಲ್ಲಿ ಚುನಾವಣಾ ಪ್ರಚಾರ ಸಭೆ ಮೇಲೆ ಹಠಾತ್ತನೆ ಎರಗಿದ ಕಾಂಗ್ರೆಸ್ಸಿಗರು ನಮ್ಮ ಪಕ್ಷದ ಆರು ಸದಸ್ಯರನ್ನು ಚೂರಿಯಿಂದ ಇರಿದರು. ಬೆಹಲಾದಲ್ಲಿ ರ್‍ಯಾಲಿ ಮೇಲೆ ಪೋಲೀಸರು ದಾಳಿ ಮಾಡಿದರು. ಇದು ದಿನನಿತ್ಯದ ದೃಶ್ಯವಾಗಿತ್ತು. ಆದರೆ ನಮ್ಮ ಕಾರ್ಯಕ್ರಮಗಳು ಮುಂದುವರಿದವು. ನಮ್ಮ ಸಂಗಾತಿಗಳು ಧೈರ್ಯ, ಆತ್ಮವಿಶ್ವಾಸದಿಂದ ಮುನ್ನಡೆದರು.

**ಬುರುಡೆ ಭರವಸೆ**

ಕಾಂಗ್ರೆಸ್ ಪಕ್ಷ ಆಶ್ವಾಸನೆಗಳ ಬುರುಡೆ ಬಿಡಲು ಪ್ರಸಿದ್ಧ. 1967 ರ ಚುನಾವಣೆ ಸಂದರ್ಭದಲ್ಲಿ ಅದು ಬಿಟ್ಟ ಒಂದು ಸುಳ್ಳಿನ ರೈಲು ಇನ್ನೂ ನನಗೆ ಚೆನ್ನಾಗಿ ನೆನಪಿದೆ.

ಚುನಾವಣೆಗೆ ಸ್ವಲ್ಪವೇ ದಿನಗಳ ಮುಂಚೆ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ತಕ್ಷಣವೇ 3000 ಪ್ರಾಥಮಿಕ ಶಾಲೆಗಳನ್ನು ತೆರೆಯುವುದಾಗಿಯೂ 10,000 ಶಿಕ್ಷಕರಿಗೆ ಉದ್ಯೋಗ ಸಿಗುತ್ತದೆಂದೂ ಇದ್ದಕ್ಕಿದ್ದಂತೆ ಪ್ರಕಟಿಸಿತು. ಪ್ರಫುಲ್ಲ ಸೇನ್ ಆಗ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದರು. ಚುನಾವಣೆ ನಡೆಯಿತು, ಫಲಿತಾಂಶ ಪ್ರಕಟವಾಯಿತು. ಫಲಿತಾಂಶದಿಂದ ನಮಗೆ ಭಾರೀ ಸಂತೋಷವೇನೂ ಆಗಲಿಲ್ಲ. ಸಂಯುಕ್ತ ಎಡರಂಗ 68 ಸ್ಥಾನಗಳಲ್ಲಿ ಗೆದ್ದಿತು. ಆ ಪೈಕಿ ಸಿಪಿಐ(ಎಂ) -43, ಆರ್‌ಎಸ್‌ಪಿ-7, ಎಸ್‌ಎಸ್‌ಪಿ-7, ಎಸ್‌ಯುಸಿ-4, ಕಾರ್ಮಿಕ ಪಕ್ಷ-2 ಮತ್ತು ಫಾರ್ವರ್ಡ್ ಬ್ಲಾಕ್-1 ಸ್ಥಾನದಲ್ಲಿ ಜಯಶಾಲಿಯಾಯಿತು. ನಮ್ಮ ಬೆಂಬಲವಿದ್ದ ನಾಲ್ವರು ಪಕ್ಷೇತರರೂ ಗೆದ್ದರು.

ಪಿಯುಎಲ್‌ಎಫ್ ಗೆದ್ದಿದ್ದು 65 ಸ್ಥಾನಗಳನ್ನು. (ಬಾಂಗ್ಲಾ ಕಾಂಗ್ರೆಸ್-34, ಕಮ್ಯುನಿಸ್ಟ್ ಪಕ್ಷ (ಬಲಪಂಥೀಯ)-16, ಫಾರ್ವರ್ಡ್ ಬ್ಲಾಕ್-13, ರಂಗ ಬೆಂಬಲಿತ ಪಕ್ಷೇತರರು ಇಬ್ಬರು). ಕಾಂಗ್ರೆಸ್ ಪಕ್ಷ 127 ಸ್ಥಾನಗಳಲ್ಲಿ ಜಯಶಾಲಿಯಾಯಿತು.

ಸ್ವಾತಂತ್ರ್ಯ ನಂತರ ಪಶ್ಚಿಮ ಬಂಗಾಲ ವಿಧಾನಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ಗಳಿಸಲು ಸಾಧ್ಯವಾಗದಿದ್ದದ್ದು ಇದೇ ಮೊದಲ ಸಲ.

ರಾಜ್ಯದ ಲೋಕಸಭೆ ಚುನಾವಣೆ ಫಲಿತಾಂಶ ಹೀಗಿತ್ತು. ಸಿಪಿಐ(ಎಂ) ಸ್ಪರ್ಧಿಸಿದ್ದ 16 ಕ್ಷೇತ್ರಗಳ ಪೈಕಿ 15 ರಲ್ಲಿ ಗೆದ್ದಿತು. ಕಾಂಗ್ರೆಸ್-14, ಕಮ್ಯುನಿಸ್ಟ್ ಪಕ್ಷ(ಬಲಪಂಥೀಯ)-5, ಬಾಂಗ್ಲಾಕಾಂಗ್ರೆಸ್-5, ಪ್ರತಿಪಕ್ಷದ ಒಟ್ಟು ಬಲ 26 ಆಯಿತು.

ಕಾಂಗ್ರೆಸ್‌ನ್ನು ಪೂರ್ಣವಾಗಿ ಸೋಲಿಸಲು ನಾವು ವಿಫಲರಾದರೂ ಅದೇ ಮೊದಲ ಬಾರಿಗೆ ಕಾಂಗ್ರೆಸ್‌ನ್ನು ಅಲ್ಪಮತಕ್ಕೆ ಇಳಿಸಿದೆವು. ಇದೊಂದು ಮಹತ್ವದ ವಿಜಯ. ಕಾಂಗ್ರೆಸ್ ಪಾಳೆಯದಲ್ಲಿ ಆತಂಕದ ಛಾಯೆ ಮೂಡಿತು. ಚುನಾವಣೆಗಳ ನಂತರ ನಾವು ಎಲ್ಲ ಎಡ-ಪ್ರಜಾಸತ್ತಾತ್ಮಕ ಪಕ್ಷಗಳ ಜತೆ ಸಂಧಾನ ಆರಂಭಿಸಿದೆವು.

ಚುನಾವಣೆಗೆ ಮುಂಚೆ ಏನು ಸಾಧ್ಯವಾಗಿರಲಿಲ್ಲವೋ ಅದನ್ನು ಈಗ ಸಾಧಿಸಲು ಸಾಧ್ಯವಾಯಿತು. ರಾಜ್ಯದಲ್ಲಿ ಕಾಂಗ್ರೆಸ್ ವಿರೋಧಿ ಭಾವನೆಯನ್ನು ಗಮನದಲ್ಲಿಟ್ಟುಕೊಂಡು ಪ್ರಪ್ರಥಮ ಸಂಯುಕ್ತ ರಂಗ ಸರಕಾರವನ್ನು ರಚಿಸಲಾಯಿತು. ಸಂಯುಕ್ತ ರಂಗ ಸರಕಾರದಲ್ಲಿ 14 ಪಕ್ಷಗಳಿದ್ದವು.

ಒಂದು ವಿಭಾಗದ ಕಮ್ಯುನಿಸ್ಟರು ಹಾಗೂ ಅವರ ಮಿತ್ರಪಕ್ಷವಾದ ಕಾಂಗ್ರೆಸ್ ವಿರುದ್ಧ ಹೋರಾಡಿದ್ದು ಈ ಚುನಾವಣೆಯ ಒಂದು ವಿಶಿಷ್ಟ ಅಂಶವಾಗಿತ್ತು. ವಿಧಾನಸಭೆಯಲ್ಲಿ ನಮ್ಮ ಬಲ 33 ರಿಂದ 43 ಕ್ಕೆ ಏರಿತು. ನಾವು ಎದುರಿಸಿದ ಆಕ್ರಮಣ ಹಾಗೂ ಕಷ್ಟ ಕೋಟಲೆಯನ್ನು ಪರಿಗಣಿಸಿದರೆ ಇದೊಂದು ದೊಡ್ಡ ಮುನ್ನಡೆಯೇ ಆಗಿತ್ತು.

ನಮ್ಮನ್ನು ರಾಷ್ಟ್ರವಿರೋಧಿಗಳೆಂದು ಪ್ರತಿಬಿಂಬಿಸಲು ಕಾಂಗ್ರೆಸ್ ಮತ್ತು ಪ್ರತಿಕ್ರಿಯಾವಾದಿಗಳು ಪ್ರಯತ್ನಿಸಿದರು. ಆದರೆ ಅವರೇ ನಗಣ್ಯ ಸ್ಥಾನಕ್ಕಿಳಿದರು. ನಮ್ಮ ಬಲ ಹೆಚ್ಚಿತು. ಕಾಂಗ್ರೆಸ್ಸೇತರ ಪಕ್ಷಗಳಲ್ಲಿ ನಮ್ಮ ಪಕ್ಷವೇ ಪ್ರಬಲವಾಗಿ ಹೊರಹೊಮ್ಮಿ ನಮ್ಮ ಉತ್ಸಾಹ ನೂರ್ಮಡಿಗೊಂಡಿತು. ಕಾಂಗ್ರೆಸ್ ಪಕ್ಷದ ಸ್ಥಾಪಿತ ಹಿತಗಳ ವಿರುದ್ಧ ಹೋರಾಡುವುದಿದ್ದರೆ ಅದು ಸಿಪಿಐ(ಎಂ) ಮಾತ್ರವೇ ಎಂಬುದನ್ನು ಈ ಚುನಾವಣೆ ಮೂಲಕ ಜನರು ಇನ್ನೊಮ್ಮೆ ತೋರಿಸಿಕೊಟ್ಟರು.

ಫಲಿತಾಂಶ ಅವಲೋಕನ-ವಿಶ್ಲೇಷಣೆ ಅನೇಕ ಪಾಠವನ್ನು ಕಲಿಸಿತು. ಚುನಾವಣೆಗೆ ಮುಂಚೆ ನಮ್ಮ ಪಕ್ಷದ ಒಳಗೆಯೇ ಸಂತೃಪ್ತಿಯ ಭಾವನೆ ನುಸುಳಿತ್ತು. ನಮ್ಮದು ಪ್ರಬಲ ಪ್ರತಿಪಕ್ಷವಾಗಿರುವುದರಿಂದ ಎಲ್ಲಾ ಕಾಂಗ್ರೆಸ್ ವಿರೋಧಿ ಶಕ್ತಿಗಳು ನಮ್ಮನ್ನು ಸೇರುತ್ತವೆ ಎಂಬ ಭಾವನೆ ಮನೆ ಮಾಡಿತ್ತು. ಆದರೆ ಅದು ಸರಿಯಲ್ಲ. ಆಡಳಿತಗಾರರಿಂದ ಜನರು ಅಪಾಯದಲ್ಲಿರುವಾಗ ಅವರನ್ನು ಆ ನಿಟ್ಟಿನಲ್ಲಿ ಶಿಕ್ಷಿತರನ್ನಾಗಿ ಮಾಡುವುದು, ಅವರಲ್ಲಿ ಪ್ರಜ್ಞೆ ಬೆಳೆಸುವುದು ನಮ್ಮ ಜವಾಬ್ದಾರಿ. ಕಾಂಗ್ರೆಸ್ ವಿರೋಧಿ ಭಾವನೆ ನಮ್ಮ ಪರವಾಗಿ ಕೆಲಸ ಮಾಡುತ್ತದೆ ಎಂಬ ಸಂಕುಚಿತ ನಿರೀಕ್ಷೆ ನಮ್ಮಲ್ಲಿತ್ತು. ಜನರಲ್ಲಿರುವ ಅತೃಪ್ತಿಯನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂಬುದನ್ನು ಅನೇಕ ಜನರು ಅರಿಯಲಿಲ್ಲ. ಆ ರೀತಿ ಮಾಡದೇ ಇರುವುದರಿಂದ ಬಂಡವಾಳಶಾಹಿ ಆದರ್ಶಗಳು ಉಳಿದವು.

**ಕೇರಳದಲ್ಲಿ ಮಣ್ಣುಮುಕ್ಕಿದ ಕಾಂಗ್ರೆಸ್**

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸನ್ನು ಪೂರ್ಣವಾಗಿ ಸೋಲಿಸಲು ಸಾಧ್ಯವಾಗದಿದ್ದರೂ ಕೇರಳದಲ್ಲಿ ಅದು ಸಾಧಿತವಾಯಿತು. ಅಲ್ಲಿ ಆ ಪಕ್ಷ ಮಣ್ಣು ಮುಕ್ಕಿತು. ಕೇರಳ ವಿಧಾನಸಭೆಯ 133 ಸ್ಥಾನಗಳ ಪೈಕಿ ಕಾಂಗ್ರೆಸ್ ಗೆದ್ದಿದ್ದು ಕೇವಲ ಒಂಬತ್ತರಲ್ಲಿ.

1967 ರ ನಾಲ್ಕನೇ ಸಾರ್ವತ್ರಿಕ ಚುನಾವಣೆ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಹೊಡೆತ ನೀಡಿತು. ಚುನಾವಣೆ ನಡೆದ 17 ರಾಜ್ಯಗಳ ಪೈಕಿ ಏಳು ರಾಜ್ಯಗಳಲ್ಲಿ ಏಕೈಕ ದೊಡ್ಡ ಬಹುಮತದ ಪಕ್ಷದ ಸ್ಥಾನಮಾನವನ್ನು ಅದು ಕಳೆದುಕೊಂಡಿತು. ಕೇರಳ, ಪಶ್ಚಿಮ ಬಂಗಾಳ, ಮದ್ರಾಸ್, ಪಂಜಾಬ್, ಉತ್ತರ ಪ್ರದೇಶ, ಬಿಹಾರ ಮತ್ತು ಒರಿಸ್ಸಾ - ಇವೇ ಆ 7 ರಾಜ್ಯಗಳು. ಲೋಕಸಭೆ ಚುನಾವಣೆಗಳಲ್ಲಿ ಕೂಡ ಕಾಂಗ್ರೆಸ್ ಪಕ್ಷದ ಮತ ಶೇಕಡ 44.72 ರಿಂದ ಶೇ 37.87 ಕ್ಕೆ ಇಳಿಯಿತು.

ಚುನಾವಣೆ ನಂತರದ ಪರಿಸ್ಥಿತಿಯ ಪರಿಶೀಲನೆಗೆ 1967 ಏಪ್ರಿಲ್‌ನಲ್ಲಿ ಕಲ್ಕತ್ತದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ನಡೆಯಿತು. ಸಭೆಯ ನಂತರ, ಜನರನ್ನು ಅಭಿನಂದಿಸುವ ಒಂದು ಹೇಳಿಕೆಯನ್ನು ಪಕ್ಷ ಹೊರಡಿಸಿತು. ನಮ್ಮ ಹೋರಾಟವನ್ನು ಇನ್ನಷ್ಟು ಮುಂದಕ್ಕೆ ಒಯ್ಯುವಂತೆ ಅದು ಜನರಿಗೆ ಮನವಿ ಮಾಡಿತು.

ಸ್ವತಂತ್ರ ಭಾರತದಲ್ಲಿ ಅದೇ ಮೊದಲಬಾರಿಗೆ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸೇತರ ಸರ್ಕಾರವೊಂದು ರಚನೆಯಾಯಿತು. ಸಂಯುಕ್ತ ರಂಗ ಸರಕಾರ ಅಧಿಕಾರಕ್ಕೆ ಬಂತು. ಅಜಯ್ ಮುಖರ್ಜಿ, ಪ್ರಫುಲ್ಲ ಘೋಷ್, ಸೋಮನಾಥ ಲಹಿರಿ, ಹೇಮಂತ ಬೋಸ್, ಜಹಾಂಗೀರ್ ಕಬೀರ್ ಮತ್ತು ನಾನು ಮೊದಲಿಗೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದೆವು. ನಂತರ 10 ಇತರ ಖಾತೆಗಳೊಂದಿಗೆ ಮಂತ್ರಿಮಂಡಲ ವಿಸ್ತರಿಸಲಾಯಿತು. ಹರೇ ಕೃಷ್ಣ ಕೋನಾರ್, ನಿರಂಜನ್ ಸೇನ್, ವಿಶ್ವನಾಥ್ ಮುಖರ್ಜಿ, ಸುರೇಲ್ ಧಾರಾ, ಅಮರ ಪ್ರಸಾದ್ ಚಕ್ರವರ್ತಿ, ನಾನಿ ಭಟ್ಟಾಚಾರ್ಯ, ವಿಭೂತಿ ಭೂಷಣ ದಾಸ್ ಗುಪ್ತಾ, ಜ್ಯೋತಿ ಭಟ್ಟಾಚಾರ್ಯ, ಸುಬೋಧ ಬ್ಯಾನರ್ಜಿ ಮತ್ತು ದೇವಪ್ರಕಾಶ್ ರಾಯ್ ಎರಡನೇ ಕಂತಿನಲ್ಲಿ ಮಂತ್ರಿಗಳಾದರು.

ಸಿಪಿಐ(ಎಂ) ಪ್ರತಿಪಕ್ಷಗಳಲ್ಲೇ ದೊಡ್ಡ ಪಕ್ಷವಾಗಿದ್ದರಿಂದ ಸಂಯುಕ್ತ ರಂಗ ಸರಕಾರದ ಮುಖ್ಯಮಂತ್ರಿ ಸ್ಥಾನ ಅದಕ್ಕೆ ದಕ್ಕಬೇಕಾಗಿತ್ತು.

ಆದರೆ......

ಹೌದು, ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಪ್ರಪ್ರಥಮ ಸಂಯುಕ್ತ ರಂಗ ಸರಕಾರದ ಸೂತ್ರ ಸಿಪಿಐ(ಎಂ)ಗೆ ಸಿಗಬೇಕಿತ್ತು. ಆದರೆ ಬಾಂಗ್ಲಾ ಕಾಂಗ್ರೆಸ್ ಧುರೀಣ ಜಯ ಮುಖರ್ಜಿ ರಾಜ್ಯದ ಪ್ರಥಮ ಕಾಂಗ್ರೆಸ್ಸೇತರ ಮುಖ್ಯಮಂತ್ರಿಯಾದರು.

ಸಿಪಿಐ(ಎಂ) ಏಕೈಕ ದೊಡ್ಡ ಪ್ರತಿಪಕ್ಷವಾಗಿ ಹೊರಹೊಮ್ಮಿದ್ದು ಚುನಾವಣೆ ಫಲಿತಾಂಶದಿಂದ ಸ್ಪಷ್ಟವಾಗಿತ್ತು. ಅದರ ಆಧಾರದಲ್ಲಿ, ಕಾಂಗ್ರೆಸೇತರ ಸರಕಾರ ರಚನೆಯಾದಲ್ಲಿ ಮುಖ್ಯಮಂತ್ರಿ ಪಟ್ಟ ಸಿಪಿಐ(ಎಂ)ಗೆ ಸಿಗಬೇಕಿತ್ತು. ಮುಖ್ಯಮಂತ್ರಿ ಹುದ್ದೆ ತನಗೆ ಕೊಡಬೇಕೆಂಬ ಬಾಂಗ್ಲಾ ಕಾಂಗ್ರೆಸ್ ವಾದದಲ್ಲಿ ಯಾವುದೇ ಸತ್ವವಿರಲಿಲ್ಲ.

ಆದರೆ ಒಗ್ಗಟ್ಟನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ನಾವು ಅದರ ಬೇಡಿಕೆಯನ್ನು ಅಂಗೀಕರಿಸಿದೆವು. ನಮ್ಮ ರಾಜ್ಯದ ಹೊಸದಾಗಿ ಚುನಾಯಿತರಾದ ಶಾಸಕರು ನಾನು ಶಾಸಕ ಪಕ್ಷದ ನಾಯಕನೆಂದು ನನ್ನಲ್ಲಿ ಪುನಃ ವಿಶ್ವಾಸ ವ್ಯಕ್ತಪಡಿಸಿದರು.

ನಾನು ಪ್ರಥಮ ಸಂಯುಕ್ತ ರಂಗ ಸರಕಾರದ ಉಪಮುಖ್ಯಮಂತ್ರಿ ಆದೆ. ಹಣಕಾಸು ಮತ್ತು ಸಾರಿಗೆ ಖಾತೆಗಳ ಹೆಚ್ಚುವರಿ ಹೊಣೆ ನನಗೆ ವಹಿಸಲಾಯಿತು. ಭೂ ಕಂದಾಯ ಮತ್ತು ನಿರಾಶ್ರಿತರ ಪುನರ್ ವಸತಿ ಖಾತೆ ಕೋನಾರ್ ಪಾಲಿಗೆ. ಬಂದೀಖಾನೆ ಖಾತೆ ನಿರಂಜನ ಸೇನರಿಗೆ ಲಭ್ಯ.

ಹೊಸ ಸರ್ಕಾರದ ಎಲ್ಲಾ ಕೆಲಸಗಳನ್ನು ನಾವು ಶೂನ್ಯದಿಂದಲೇ ಆರಂಭ ಮಾಡಿದೆವು. ಅಂದರೆ, ಕಾಂಗ್ರೆಸ್ ಪಕ್ಷದ ಸರಕಾರಗಳು ಕಳೆದ 20 ವರ್ಷಗಳಿಂದ ಅನುಸರಿಸುತ್ತಿದ್ದ ನೀತಿಗಳಿಗೆ ತದ್ವಿರುದ್ಧವಾದ ಕ್ರಮಗಳನ್ನು ನಾವು ಕೈಗೊಂಡೆವು. ಆಡಳಿತ ಮತ್ತು ರಾಜಕೀಯ ವ್ಯವಸ್ಥೆ ಅದೇ ಆಗಿದ್ದರಿಂದ ಈ ಕೆಲಸ ತುಂಬಾ ಕಷ್ಟದ್ದಾಗಿತ್ತು. ಬದಲಾದದ್ದು ಸಚಿವರು ಮಾತ್ರವೇ. ಇಂಥ ಒಂದು ವ್ಯವಸ್ಥೆ ಜತೆ ಕೆಲಸ ಮಾಡುತ್ತ ಮೂಲಭೂತ ಬದಲಾವಣೆ ತರುವುದು ಕಷ್ಟದ ಕೆಲಸವೇ ಸೈ. ಏನಿದ್ದರೂ, ಜನತೆಗೆ ಅಲ್ಪಸ್ವಲ್ಪ ಪರಿಹಾರ ಕಲ್ಪಿಸಲು ಮತ್ತು ಜನರ ಹೋರಾಟ ಬೆಳೆಯುವ ವಾತಾವರಣವನ್ನು ಉಂಟುಮಾಡಲು ಸಾಧ್ಯವಿತ್ತು. ನಮ್ಮದು ಹೂವಿನ ಹಾದಿ ಆಗಿರಲಿಲ್ಲ. ಇಂಥ ಒಂದು ಚೌಕಟ್ಟಿನೊಂದಿಗೆ ಹೊಸ ಯುಗ ಆರಂಭವಾಗಬೇಕಿತ್ತು.

ಯಾವುದೇ ಕರಾಳ ಕಾನೂನನ್ನು ಜಾರಿ ಮಾಡುವುದಿಲ್ಲ - ಸಂಯುಕ್ತ ರಂಗ ಸರಕಾರ ಅಧಿಕಾರ ವಹಿಸಿಕೊಂಡ ತಕ್ಷಣವೇ ಮಾಡಿದ ಪ್ರಕಟಣೆ ಇದು. ಕಾಂಗ್ರೆಸ್ ಸರಕಾರ ವಿಚಾರಣೆಯಿಲ್ಲದೆ ಬಂಧನದಲ್ಲಿಟ್ಟು ಎಲ್ಲರನ್ನು ತಕ್ಷಣವೇ ಬಿಡುಗಡೆ ಮಾಡುವ ನಿರ್ಧಾರವನ್ನು ತಗೆದುಕೊಳ್ಳಲಾಯಿತು. ವಜಾ ಆದ ಟ್ರೇಡ್ ಯೂನಿಯನ್ ಮುಖಂಡರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲಾಯಿತು. ಯಾರೇ ಆಗಲಿ ಯಾವುದೇ ರಾಜಕೀಯ ಸಿದ್ಧಾಂತದಲ್ಲಿ ವಿಶ್ವಾಸ ಇಟ್ಟುಕೊಳ್ಳುವ ವಿಚಾರದಲ್ಲಿ ತಲೆ ಹಾಕದಿರಲು, ಆ ಕಾರಣಕ್ಕಾಗಿ ಕೆಲಸದಿಂದ ವಜಾ ಮಾಡದಿರುವ ಒಂದು ಮಹತ್ವದ ನೀತಿ ನಿರ್ಧಾರವನ್ನು ಹೊಸ ಸರಕಾರ ತೆಗೆದುಕೊಂಡಿತು.

**ಲಕ್ಷ ಕಾರ್ಮಿಕರ ಕಾಯಮಾತಿ**

ಒಂದು ಲಕ್ಷಕ್ಕೂ ಹೆಚ್ಚು ತಾತ್ಕಾಲಿಕ ಸರಕಾರಿ ನೌಕರರನ್ನು ಕಾಯಂ ಮಾಡಲಾಯಿತು. ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದಕ್ಕಾಗಿ ಶಿಕ್ಷೆಗೆ ಒಳಗಾದ ರಾಜ್ಯ ಸಾರಿಗೆ ನಿಗಮ ಮತ್ತು ಟ್ರಾಮ್‌ವೇ ನೌಕರರಿಗೆ ಕೂಡ ಮತ್ತೆ ಕೆಲಸ ನೀಡಲಾಯಿತು. ಕಾನೂನುಬದ್ಧ ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು ದಮನಿಸಲು ಪೋಲೀಸರನ್ನು ಬಳಸದಿರುವ ಪ್ರಮುಖ ನಿರ್ಧಾರವನ್ನು ಸಂಯುಕ್ತ ರಂಗ ಸರಕಾರ ಕೈಗೊಂಡಿತು.

ಈ ಎಲ್ಲಾ ಘೋಷಣೆಗಳು ಮತ್ತು ಅನುಷ್ಠಾನಗಳು ಪಶ್ಚಿಮ ಬಂಗಾಳ ಜನತೆಗೆ ಸಂಪೂರ್ಣ ಹೊಸ ಅನುಭವ. ಸ್ವಾತಂತ್ರ್ಯ ಎಲ್ಲೆಡೆ ನಲಿದಾಡುತ್ತಿದ್ದ ಪರವಾಯಿತು. ಕಾಂಗ್ರೆಸ್ ಆಡಳಿತದಲ್ಲಿ ಊಹಿಸಲೂ ಸಾಧ್ಯವಿರದಿದ್ದುದು ಈಗ ವಾಸ್ತವವಾಗಿಸಿತು.

ನಿರ್ಲಕ್ಷಿತ ಭೂರಹಿತ ಮತ್ತು ಸಣ್ಣ ರೈತರಿಗೆ ಜಮೀನು ವಿತರಿಸಲು ರಂಗ ಸರಕಾರ ನಿರ್ಧರಿಸಿತು. ಸಂಘಟಿತ ರೈತ ವಲಯ ಸರಕಾರದ ನೆರವಿಗೆ ಬಂತು. ಕಾನೂನುಬಾಹಿರ ಹಾಗೂ ಪಟ್ಟಿಯಾಗದ ಜಮೀನನ್ನು ಗುರುತಿಸುವಲ್ಲಿ ಮತ್ತು ಭೂರಹಿತ ಹಾಗೂ ಬಡರೈತರನ್ನು ಗುರುತಿಸುವಲ್ಲಿ ಅದು ನೆರವಾಯಿತು.

**ಸರಕಾರಿ ಕಡತಗಳಾಚೆ.....**

ಭೂಸುಧಾರಣೆ ಎಂಬುದು ಇದೇ ಪ್ರಪ್ರಥಮ ಬಾರಿಗೆ ಸರಕಾರಿ ಕಡತಗಳಾಚೆ ಅನುಷ್ಠಾನಕ್ಕೆ ಬಂತು. ಇದರಿಂದಾಗಿ ಸ್ಥಾಪಿತ ಹಿತಾಸಕ್ತರು ಮತ್ತು ಭೂಮಾಲೀಕರು ಹಾಗೂ ಅವರ ರಾಜಕೀಯ ಸಂರಕ್ಷಕರಾದ ಕಾಂಗ್ರೆಸ್ಸಿಗರು ಸಹಜವಾಗಿಯೇ ಸಿಟ್ಟಿಗೆದ್ದರು. ಆದರೆ ಇವರೆಲ್ಲರ ತೀವ್ರ ಪ್ರತಿರೋಧ ಇದ್ದರೂ ಕೆಲವೇ ತಿಂಗಳಲ್ಲಿ 2.38 ಲಕ್ಷ ಎಕರೆ ಜಮೀನನ್ನು ಭೂರಹಿತ ಹಾಗೂ ಸಣ್ಣ ಹಿಡುವಳಿದಾರರಿಗೆ ವಿತರಿಸಲಾಯಿತು. ಪಟ್ಟಿ ಮಾಡದ ಇನ್ನೂ 10,000 ಎಕರೆ ಜಮೀನನ್ನು ವಿತರಣೆಗಾಗಿ ಗುರುತಿಸಲಾಯಿತು.

ರಾಜ್ಯದ ಕೃಷಿ ಕ್ಷೇತ್ರದಲ್ಲಿ ನೀರಾವರಿಗೆ ಒಂದು ಪ್ರಮುಖ ಪಾತ್ರವಿದೆ. ನೀರಾವರಿ ವ್ಯವಸ್ಥೆ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ರೂಪಿಸಲು ತಜ್ಞರು ಮತ್ತು ಸರಕಾರಿ ಹಾಗೂ ಖಾಸಗಿ ಸಂಸ್ಥೆಗಳ ಪ್ರತಿನಿಧಿಗಳ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಯಿತು. ರೈತರಿಗೆ ಸಾಲ ವಿತರಿಸಲು ಕೃಷಿ-ಕೈಗಾರಿಕೆ ಸಂಸ್ಥೆಯೊಂದನ್ನು ಸ್ಥಾಪಿಸಲಾಯಿತು.

ಕಲ್ಕತ್ತ ಟ್ರಾಮ್‌ವೇಸ್ ಕಂಪನಿಯ ಆಡಳಿತವನ್ನು ವಹಿಸಿಕೊಂಡಿದ್ದು ಕೂಡ ಇನ್ನೊಂದು ದೊಡ್ಡ ಹೆಜ್ಜೆ. ನಿರಾಶ್ರಿತರ ಸಮಸ್ಯೆ ನಿವಾರಣೆಯತ್ತ ಕೂಡ ಗಮನ ನೀಡಲಾಯಿತು.

ನಾನಾ ನಿರಾಶ್ರಿತರ ಕಾಲನಿಗಳಲ್ಲಿನ ಸುಮಾರು 25 ಸಾವಿರ ಕುಟುಂಬಗಳಿಗೆ ಮಾನ್ಯತೆ ನೀಡಲಾಯಿತು. ನಿರಾಶ್ರಿತರ ಬಡಾವಣೆಗಳಲ್ಲಿನ 6000 ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಯಿತು. 400 ಕೊಳವೆ ಬಾವಿಗಳನ್ನು ತೋಡಲಾಯಿತು. ಕಾಂಗ್ರೆಸ್ ಸರಕಾರ ನಿಲ್ಲಿಸಿದ್ದ ಭತ್ಯೆಯನ್ನು ಮತ್ತೆ ಆರಂಭಿಸಲಾಯಿತು.

(ಮುಂದುವರಿಯುವುದು)

# ವಿಶ್ವವಿದ್ಯಾಲಯಗಳ ಪ್ರಜಾಸತ್ತೆ ಕಗ್ಗೊಲೆಯ ಅಸ್ತ್ರ 'ಕರ್ನಾಟಕ ವಿ.ವಿ.ಮಸೂದೆ'

**ಸೆನೆಟ್ ರದ್ದುಗೊಳಿಸಿ, ಅಕಾಡೆಮಿಕ್ ಕೌನ್ಸಿಲ್-ಸಿಂಡಿಕೇಟ್‌ಗೆ ಚುನಾವಣೆ ರದ್ದುಗೊಳಿಸಿ ಸರ್ಕಾರ ತನ್ನ ಪ್ರತಿನಿಧಿಗಳನ್ನು ನೇಮಕ ಮಾಡಲು ಅನುವಾಗುವಂತೆ, ಉಪಕುಲಪತಿಗಳ ಆಯ್ಕೆ-ನೇಮಕ ಪ್ರಕ್ರಿಯೆಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವ, ಪರೀಕ್ಷಾ ಕಾರ್ಯಗಳನ್ನು ಕಡ್ಡಾಯಗೊಳಿಸಿ ಉಲ್ಲಂಘಿಸುವವರಿಗೆ ಜೈಲು ಶಿಕ್ಷೆ ಇತ್ಯಾದಿ ಪ್ರಜಾಪ್ರಭುತ್ವ ವಿರೋಧಿ ಅಂಶಗಳನ್ನೊಳಗೊಂಡ ಕರ್ನಾಟಕ ವಿಶ್ವವಿದ್ಯಾಲಯಗಳ ಮಸೂದೆ-2000 ಕ್ಕೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿ, ಮಸೂದೆಯನ್ನು ಹಾಲಿ ಅಧಿವೇಶನದಲ್ಲೇ ಸರ್ಕಾರ ಮಂಡಿಸಿದೆ.**

ಈ ಮಸೂದೆಗೆ ವ್ಯಾಪಕ ಪ್ರತಿಕ್ರಿಯೆಗಳು ಬಂದಿದ್ದು, ಈಗಾಗಲೇ ವಿದ್ಯಾರ್ಥಿ ಸಂಘಟನೆಗಳು ಮಸೂದೆ ವಿರೋಧಿಸಿ ಪ್ರತಿಭಟನೆ ನಡೆಸಿವೆ. ಅನೇಕ ಬುದ್ಧಿಜೀವಿಗಳ-ಶಿಕ್ಷಣ ತಜ್ಞರ, ಸೆನೆಟ್-ಸಿಂಡಿಕೇಟ್ ಅಕಾಡೆಮಿಕ್ ಕೌನ್ಸಿಲ್ ಸದಸ್ಯರ ತೀವ್ರ ಟೀಕೆಗೆ ಮಸೂದೆ ಒಳಪಟ್ಟಿದೆ. ಈ ಎಲ್ಲಾ ಟೀಕೆ-ಪ್ರತಿರೋಧದ ನಡುವೆ ರಾಜ್ಯ ಸರ್ಕಾರವಂತೂ ವಿ.ವಿ. ಆಡಳಿತ ಸುಧಾರಣೆಗಾಗಿ 1994 ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿರುವ ಪ್ರೊ.. ನವನೀತರಾವ್ ಆಯೋಗದ ಶಿಫಾರಸ್ಸಿನ ಆಧಾರದಲ್ಲಿ ಮಸೂದೆ ಸಿದ್ದಪಡಿಸಿರುವುದಾಗಿ, ಪ್ರಾರಂಭಿಸಿದ ನಂತರ ಸಮಾಜದ ಎಲ್ಲಾ ವಲಯಗಳನ್ನು ಅದಕನುಗುಣವಾಗಿ ಪುನರ್‌ರಚಿಸುವ ಕಾರ್ಯದ ಭಾಗವಾಗಿ ರಾಜ್ಯದ ಉನ್ನತ ಶಿಕ್ಷಣವನ್ನು ಪುನರ್‌ರಚಿಸಲು 1992 ರಲ್ಲಿ ಅಂದಿನ ರಾಜ್ಯ ಸರ್ಕಾರ ಆಂಧ್ರದ ಉಸ್ಮಾನಿಯಾ ವಿಶ್ವವಿದ್ಯಾಲಯದ ನಿವೃತ್ತ ಉಪಕುಲಪತಿಗಳಾದ ಪ್ರೊ. ನವನೀತರಾವ್‌ರವರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ವಿಶ್ವವಿದ್ಯಾಲಯಗಳ ಪರಾಮರ್ಶೆ ಆಯೋಗ'ವನ್ನು ರಚಿಸಿತ್ತು. ಸದರಿ ಆಯೋಗವು 1994 ರಲ್ಲಿ ತನ್ನ 80 ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಈ ವರದಿಯ ಆಧಾರದಲ್ಲಿ ಪ್ರಸ್ತುತ

### ಪ್ರೊ. ನವನೀತ ರಾವ್ ಆಯೋಗದ ವರದಿಯ ಶಿಫಾರಸ್ಸುಗಳು:

ರಾಜ್ಯದ ವಿಶ್ವವಿದ್ಯಾಲಯಗಳ ಆಡಳಿತ ಹಾಗೂ ಸಾಧನೆ ಇತ್ಯಾದಿಯನ್ನು ಅಧ್ಯನ ಮಾಡಿದ್ದ ಪ್ರೊ. ನವನೀತ ರಾವ್ ಆಯೋಗವು ಈ ಕೆಳಗಿನ ಶಿಫಾರಸ್ಸನ್ನು ನೀಡಿತ್ತು. ಒಟ್ಟಾರೆ 80 ಶಿಫಾರಸ್ಸುಗಳನ್ನು ನೀಡಿದ್ದ ವರದಿಯ ಕೆಲವು ಪ್ರಮುಖ ಅಂಶಗಳು ಇಂತಿವೆ.

- ಸೆನೆಟ್, ಅಕಾಡೆಮಿಕ್ ಕೌನ್ಸಿಲ್-ಸಿಂಡಿಕೇಟ್ ರದ್ದುಗೊಳಿಸಿ, ಅಕಾಡೆಮಿಕ್-ಸಿಂಡಿಕೇಟ್ ಹಾಗೂ ಎಕ್ಸಿಕ್ಯುಟಿವ್ ಕೌನ್ಸಿಲ್‌ಗಳನ್ನು ರಚಿಸಬೇಕು. ಅವುಗಳಿಗೆ ಕೇವಲ ನೇಮಕ ಮಾಡಬೇಕು. ಚುನಾವಣೆಗಳನ್ನು ನಡೆಸಬಾರದು.
- ಕಾಲೇಜುಗಳನ್ನು ಸ್ವಯಂ ಆಗಿ ಮುಚ್ಚಲು ಅವಕಾಶ ಕಲ್ಪಿಸಬೇಕು.
- ಯೋಜನೇತರ ವೆಚ್ಚ(Non-plan Expenditure) ಕಳೆದ ಅನೇಕ ವರ್ಷಗಳಿಂದ ಕಡಿಮೆಯಾಗುತ್ತಾ ಬಂದಿರುವುದನ್ನು ಮತ್ತಷ್ಟು ಕಡಿತಗೊಳಿಸಬೇಕು.
- ಪರೀಕ್ಷಾ ಕಾರ್ಯಗಳನ್ನು ಕಡ್ಡಾಯಗೊಳಿಸಬೇಕು, ಆದೇಶ ಉಲ್ಲಂಘಿಸುವವರಿಗೆ ಜೈಲು ಶಿಕ್ಷೆಯೊಂದಿಗೆ - ದಂಡ ವಿಧಿಸಬೇಕು.
- ಕರ್ನಾಟಕ ಕಾಲೇಜುಗಳು ವಿದೇಶಿ ವಿಶ್ವವಿದ್ಯಾಲಯಗಳಿಗೆ ಹಾಗೂ ವಿದೇಶಿ ಕಾಲೇಜುಗಳು ರಾಜ್ಯದ ವಿ.ವಿ.ಗಳೊಂದಿಗೆ ವಿದೇಶಿ ಕಾಲೇಜುಗಳು ಸಂಯೋಜನೆಗೊಳ್ಳಲು ಅವಕಾಶ ಕಲ್ಪಿಸಬೇಕು.

ತರಾತುರಿಯಲ್ಲಿ ಮಸೂದೆಯನ್ನು ಅಧಿವೇಶನದಲ್ಲಿ ಮಂಡಿಸಿದೆ.

ಹಿನ್ನೆಲೆ: ಕರ್ನಾಟಕ ರಾಜ್ಯ ಬೆಂಗಳೂರು, ಮೈಸೂರು, ಕರ್ನಾಟಕದ ವಿಶ್ವವಿದ್ಯಾಲಯಗಳ ಪ್ರಾರಂಭಕ್ಕೆ ಅಂದರೆ 1976 ರ ಮುನ್ನ ಪ್ರಾರಂಭವಾದ ಎಲ್ಲಾ ವಿ.ವಿ.ಗಳಿಗೂ ಒಂದೊಂದು ಪ್ರತ್ಯೇಕ ಶಾಸನಗಳನ್ನು ರೂಪಿಸಿ-ಕಾಯ್ದೆ ಮೂಲಕ ವಿಶ್ವವಿದ್ಯಾಲಯಗಳನ್ನು ರಚಿಸಲಾಗಿತ್ತು. ಈ ಎಲ್ಲಾ ಕಾಯ್ದೆಗಳನ್ನು ಸಮಗ್ರವಾಗಿ ಒಂದು ಕಾಯ್ದೆಯನ್ನಾಗಿ ಮಾಡುವ ಹಿನ್ನೆಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯ್ದೆ-1976 ಅನ್ನು ಶಾಸನ ಮಾಡಿ, ಅದರನ್ವಯ ರಾಜ್ಯದ ಎಲ್ಲಾ ವಿ.ವಿ.ಗಳನ್ನು ನಡೆಸಲಾಗುತ್ತಿತ್ತು. ಪ್ರತ್ಯೇಕ ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣದ ವಿ.ವಿ.ಗಳಾದ ಬೆಂಗಳೂರು, ಮಂಗಳೂರು, ಕುವೆಂಪು, ಮೈಸೂರು, ಗುಲ್ಬರ್ಗ ಹಾಗೂ ಕರ್ನಾಟಕ ವಿ.ವಿ.ಗಳ ಕಾರ್ಯವ್ಯಾಪ್ತಿಗೆ ಸೀಮಿತವಾಯಿತು.

ರಾಷ್ಟ್ರ ಹಾಗೂ ರಾಜ್ಯ ಸರ್ಕಾರಗಳು ಜಾಗತೀಕರಣ-ಉದಾರೀಕರಣದ ಪ್ರಕ್ರಿಯೆಗಳನ್ನು ಮಸೂದೆಯನ್ನು ರೂಪಿಸಿರುವುದಾಗಿ ಸರ್ಕಾರ ವಾದಿಸುತ್ತಿದೆ.

1997 ರಲ್ಲಿ ಈ ಹಿಂದಿನ ಜೆ.ಹೆಚ್.ಪಟೇಲ್ ನೇತೃತ್ವದ ಸರ್ಕಾರವು ಸಹ ಇಂತಹದೆ ಒಂದು ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸಲು ಮುಂದಾಗಿತ್ತು. ಆದರೆ ಆ ಮಸೂದೆಗೆ ರಾಜ್ಯದ ಶೈಕ್ಷಣಿಕ ಸಮುದಾಯ, ವಿದ್ಯಾರ್ಥಿಸಂಘಟನೆಗಳ ತೀವ್ರ ಪ್ರತಿರೋಧದಿಂದ, ಮಸೂದೆ ರೂಪಿತವಾಗಲೇ ಇಲ್ಲ. ಆ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯಮಟ್ಟದ ಸಮಾವೇಶ ಹಾಗೂ ಉದ್ದೇಶಿತ ಮಸೂದೆ ವಿರೋಧಿಸಿ 'ವಿಧಾನಸೌಧ ಚಲೋ' ಸಂಘಟಿಸಿದನ್ನು ಸ್ಮರಿಸಬಹುದು.

**ಪ್ರಸ್ತುತ ಮಸೂದೆಗೆ ವಿರೋಧವೇಕೆ?**

ಪ್ರಸ್ತುತ ಮಸೂದೆಯು ಸೆನೆಟ್‌ನಿಂದ ವಿ.ವಿ.ಗಳಿಗೆ ಹಣಕಾಸು ಹೊರೆ ಬೀಳುತ್ತದೆ ಆದಕಾರಣ, ಅದನ್ನು ರದ್ದುಗೊಳಿಸಿದ್ದೇವೆ ಎಂದು ಹೇಳುತ್ತಿದೆ. ಆದರೆ ಪ್ರಸ್ತುತ ಹಾಲಿ ಇರುವ ಸೆನೆಟ್ 10 ಸದಸ್ಯರನ್ನು ಒಳಗೊಂಡಿದೆ. ಈ ಸದಸ್ಯರಲ್ಲಿ 5 ಪದವೀಧರರ ಕ್ಷೇತ್ರದಿಂದ ಒಬ್ಬರು ಮಹಿಳಾ ಮೀಸಲು ಕ್ಷೇತ್ರದಿಂದ ಆಯ್ಕೆಯಾದ ಸದಸ್ಯರನ್ನು ಒಳಗೊಂಡಿದೆ. ಈ ಆಯ್ಕೆಗಳು ಪ್ರಜಾಸತ್ತಾತ್ಮಕವಾಗಿ ಚುನಾವಣೆ ಮೂಲಕ ನಡೆಯುತ್ತವೆ. ಉಪನ್ಯಾಸಕರ ಕ್ಷೇತ್ರದಿಂದ ಆಯ್ಕೆಯಾಗುವ ಕೆಲವರು, ವಿದ್ಯಾರ್ಥಿಗಳಿಂದ ಆಯ್ಕೆಯಾಗುವ 5 ಜನರನ್ನು ಹೊರತುಪಡಿಸಿದರೆ, ಉಳಿದವರೆಲ್ಲಾ ನೇಮಕಗೊಂಡರೆ, ಬಹುತೇಕ ವಿ.ವಿ. ಗಳಲ್ಲಿ ಕಾರ್ಯ ನಿರ್ವಹಿಸುವವರೆ ಇರುತ್ತಾರೆ. ಇದರಿಂದ ಆರ್ಥಿಕ ಹೊರೆ ಬೀಳುತ್ತದೆ ಎಂಬ ವಾದಕ್ಕೆ ಹುರುಳಿಲ್ಲವಾಗಿದೆ. ಬದಲಿಗೆ ಸೆನೆಟ್ ರದ್ದತಿ ಹಿಂದಿನ ನಿಜ ಕಾರಣವೆಂದರೆ ಜಾಗತೀಕರಣದ ಭಾಗವಾಗಿ ಸರ್ಕಾರ ತರಬೇಕೆಂದಿರುವ ನೀತಿಗಳಿಗೆ ಸೆನೆಟ್‌ನಲ್ಲಿರುವ ಚುನಾಯಿತ ಪ್ರತಿನಿಧಿಗಳ ಪ್ರತಿರೋಧ. ಬೆಂಗಳೂರು ವಿ.ವಿ. ಸೆನೆಟ್‌ನಲ್ಲಿ ಪೇಮೆಂಟ್ ಕೋಟಾ ಸೀಟುಗಳ ಜಾರಿ, ಕಾಲೇಜುಗಳಿಗೆ ಸ್ವಾಯತ್ತತೆ ನೀಡುವ ಅಂಶಗಳಿಗೆ ಬಂದ ಪ್ರತಿರೋಧ ಹಾಗೂ ರಾಜ್ಯದ ಎಲ್ಲಾ ವಿ.ವಿ.ಗಳಲ್ಲಿಯೂ ಪೇಮೆಂಟ್ ಕೋಟಾ ಸೀಟುಗಳನ್ನು ಜಾರಿ ಮಾಡಿದರು ಸಹ ಬೆಂಗಳೂರು ವಿ.ವಿ.ಯಲ್ಲಿ ಜಾರಿ ಮಾಡಲು ಸಾದ್ಯವಾಗದೇ ಇರುವುದು ಸೆನೆಟ್‌ನ್ನೇ ರದ್ದು ಮಾಡಲು ಇರುವ ಮೂಲ ಕಾರಣ. ಸೆನೆಟ್ ಇದ್ದರೆ ತಾನೆ ಪ್ರತಿರೋಧ ಬರುವುದು. ಅದನ್ನೇ ರದ್ದು ಮಾಡಿದರೆ, ಪ್ರತಿರೋಧ ಎಲ್ಲಿಂದ ಬರುತ್ತದೆ? ಎಲ್ಲವನ್ನು ಸರ್ವಸಮ್ಮತಿಯಿಂದ ಮಾಡಬಹುದೆಂಬ ಆಶಯ ಸೆನೆಟ್ ರದ್ಧತಿಯಿಂದಿರುವ ಕಾರಣ.

ಕೆ.ಎಸ್.ಉಮೇಶ್

ಸೆನೆಟ್ ರದ್ದುಗೊಳಿಸುವುದರೊಂದಿಗೆ ಅಕಾಡೆಮಿಕ್ ಕೌನ್ಸಿಲ್ ಹಾಗೂ ಸಿಂಡಿಕೇಟ್‌ಗೆ ಚುನಾವಣೆ ನಡೆಸದೆ ಕೇವಲ ಸರ್ಕಾರ ನೇಮಕಾತಿ ಮಾಡುವುದೆಂದರೆ, ವಿ.ವಿ. ಗಳಲ್ಲಿರುವ ಪ್ರಜಾಸತ್ತೆಯನ್ನು ಕಗ್ಗೊಲೆ ಮಾಡಿ, ಇಡೀ ವಿ.ವಿ. ಆಡಳಿತವನ್ನು ಆಡಳಿತ ಪಕ್ಷದ ಕಪಿಮುಷ್ಟಿಗೆ ಒಪ್ಪಿಸಿ, ಜಾಗತೀಕರಣ-ಉದಾರೀಕರಣ ನೀತಿಗಳ ಜಾರಿಗೆ ಹಾದಿಯನ್ನು ಸುಗಮಗೊಳಿಸುವ ಅಂಶವಾಗಿದೆ.

ಅಲ್ಲದೇ ವಿ.ವಿ. ಮತ್ತು ಕಾಲೇಜ್ ಆಡಳಿತದಲ್ಲಿ ಸರ್ವಾಧಿಕಾರತನ, ಅಧಿಕಾರಶಾಹಿ ಪ್ರವೃತ್ತಿಗಳಿಗೆ ಕಡಿವಾಣವೇ ಇಲ್ಲವಾಗಿ ಭ್ರಷ್ಟಾಚಾರ ಇನ್ನೂ ಹೆಚ್ಚಾಗಲಿದೆ.

ಉಪಕುಲಪತಿಗಳ ನೇಮಕಕ್ಕೆ ಸಂಬಂಧ ಪಟ್ಟಂತೆ ಇದುವರೆಗೆ ಇದ್ದ ನಿಯಮಾವಳಿಗಳನ್ನು ಕೈಬಿಟ್ಟು, ನೇರವಾಗಿ ಸರ್ಕಾರದ ಹಸ್ತಕ್ಷೇಪಕ್ಕೆ ಈ ಮಸೂದೆ ಅನುವುಗೊಳಿಸುತ್ತದೆ.

ಪರೀಕ್ಷಾ ಕಾರ್ಯಗಳನ್ನು ಕಡ್ಡಾಯಗೊಳಿಸುವ ಹೆಸರಿನಲ್ಲಿ ಪರೀಕ್ಷಾ ಕಾರ್ಯ ಬಹಿಷ್ಕರಿಸುವ ಭೋದಕ ಹಾಗ ಭೋದಕೇತ್ತರರಿಗೆ 3 ವರ್ಷ ಜೈಲು ಹಾಗೂ 2000 ರೂ. ದಂಡ ವಿಧಿಸುವ ಅಂಶಗಳು, ಶೈಕ್ಷಣಿಕ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಧಮನಿಸುವ- ಧಮನಕಾರಿ ಅಂಶವಾಗಿದೆ.

ಜಾಗತೀಕರಣ-ಉದಾರೀಕರಣ ನೀತಿಗಳ ಜಾರಿಯ ಭಾಗವಾಗಿ ರಾಜ್ಯದ ಕಾಲೇಜುಗಳು ವಿದೇಶಿ ವಿ.ವಿ.ಗಳಿಗೆ ಹಾಗೂ ವಿದೇಶಿ ಕಾಲೇಜುಗಳು ರಾಜ್ಯದ ವಿ.ವಿ. ಗಳಿಗೆ ಅಫಿಲಿಯೇಟ್ ಆಗಲು ಅವಕಾಶ ಕಲ್ಪಿಸುವ ಅಂಶ ಶಿಕ್ಷಣದ ವಾಣಿಜ್ಯೀಕರಣಕ್ಕೆ ಅನುವುಗೊಳಿಸಿ - ವಿದ್ಯಾರ್ಥಿ-ಶಿಕ್ಷಕರ ಪೋಷಕರ ಮುಕ್ತ ಸುಲಿಗೆಗೆ ಎಡೆ ಮಾಡಿಕೊಡುತ್ತದೆ. ಇದರೊಂದಿಗೆ ಕಾಲೇಜುಗಳನ್ನು ಸ್ವಯಂ ಮುಚ್ಚಲು(Valuntery Close) ಗೆ ಅನುವುಗೊಳಿಸುವ ಮಸೂದೆ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡಲು ಮುಕ್ತ ಅವಕಾಶವನ್ನು ಕಾಲೇಜುಗಳ ಆಡಳಿತ ಮಂಡಳಿಗಳಿಗೆ ಒದಗಿಸಲಾಗಿದೆ.

ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಧಮನಿಸುವ ಕ್ರಮವಾಗಿ, ವಿದ್ಯಾರ್ಥಿಗಳ ಮೇಲೆ ಕೈಗೊಳ್ಳುವ ಶಿಸ್ತು ಕ್ರಮಗಳಿಗೆ ಪೂರ್ವವಾಗಿ ಯಾವುದೇ ನೋಟೀಸ್ ನೀಡುವುದು ಅನಿವಾರ್ಯವಲ್ಲ ಎಂಬ ಅಂಶವನ್ನು ಮಸೂದೆ ಹೊಂದಿದೆ.

ಮಸೂದೆ ವಿರುದ್ಧ ಮೂಡಿಬರಬಹುದಾದ ಪ್ರತಿರೋಧವನ್ನು ವಿಭಜಿಸುವ ಅಂಶವಾಗಿ ಅಕಾಡೆಮಿಕ್ ಕೌನ್ಸಿಲ್-ಸಿಂಡಿಕೇಟ್‌ಗೆ ನೇಮಕಾತಿ ಮಾಡುವಾಗ Sc/St, OBC, ಅಲ್ಪಸಂಖ್ಯಾತರಿಗೆ, ಅವಕಾಶ ಕಲ್ಪಿಸುವ ಪ್ರಸ್ತಾಪವನ್ನು ಮಸೂದೆ ಒಳಗೊಂಡಿದೆ. ಸಮಾಜದ ವಿವಿಧ ವಿಭಾಗಗಳಿಗೆ ಪ್ರಾತಿನಿಧ್ಯ ನೀಡುವ ಅಗತ್ಯವಿದೆ. ಆದರೆ ಅದು ನೇಮಕಾತಿ ಮೂಲಕ ಆಗುವ ಬದಲು ಪ್ರಜಾಸತ್ತಾತ್ಮಕ ಚುನಾವಣೆಗಳ ಮೂಲಕ ಆಗುವುದು. ಯಾವುದೇ ಪ್ರಜಾಸತ್ತಾತ್ಮಕ ಸಮಾಜದ ನಿರ್ಮಾಣಕ್ಕೆ

ಪುಟ 4 ಕ್ಕೆ

### ವಿ.ವಿ.ಮಸೂದೆ ಮುಖ್ಯಾಂಶಗಳು

- ಸೆನೆಟ್ ರದ್ದುಗೊಳಿಸುವುದು, ಅಕಡೆಮಿಕ್ ಕೌನ್ಸಿಲ್, ಸಿಂಡಿಕೇಟ್‌ಗಳಿಗೆ ಕೇವಲ ನೇಮಕಗೊಂಡ ಸದಸ್ಯರನ್ನು ಮಾತ್ರ ಒಳಗೊಳಿಸುವುದು. ಅಕಡೆಮಿಕ್ ಕೌನ್ಸಿಲ್‌ಗೆ-ಸಿಂಡಿಕೇಟ್‌ಗೆ ನೇಮಕ ಮಾಡುವಾಗ, ಪರಿಶಿಷ್ಟ ಜಾತಿ/ಪಂಗಡ, ಇತರೆ ಹಿಂದುಳಿದ ವರ್ಗ, ಅಲ್ಪಸಂಖ್ಯಾತರರಿಗೆ ಒಂದೊಂದರಂತೆ ಸ್ಥಾನಗಳನ್ನು ಮೀಸಲಿರಿಸುವುದು.
- ಅಕಡೆಮಿಕ್ ಕೌನ್ಸಿಲ್‌ಗೆ 6 ವಿದ್ಯಾರ್ಥಿಗಳನ್ನು ನೇಮಕ ಮಾಡುವುದು, ಮೆರಿಟ್ ಆಧಾರದಲ್ಲಿ ನೇಮಕಾತಿ ಮಾಡಬೇಕು. ಸ್ನಾತಕೋತ್ತರ, ಪದವಿ, ವೃತ್ತಿಪರ, ಎನ್‌ಸಿಸಿ, ಎನ್‌ಎಸ್‌ಎಸ್ ಕ್ರೀಡೆಯಿಂದ ಒಬ್ಬೊಬ್ಬರನ್ನು ನೇಮಕ ಮಾಡುವುದು. ಅದರಲ್ಲಿ ಒಬ್ಬರು ವಿದ್ಯಾರ್ಥಿನಿ ಹಾಗೂ ಸಂಶೋಧನಾ ವಿದ್ಯಾರ್ಥಿ ಇರಬೇಕೆಂಬುದನ್ನು ಒಳಗೊಂಡಿದೆ.
- ಉಪಕುಲಪತಿಗಳ ನೇಮಕ ಮಾಡುವ ಕುರಿತು ಪ್ರಸ್ತುತ ರಾಜ್ಯಪಾಲರು/ಕುಲಾಧಿಪತಿಗಳಿಗೆ ಇದ್ದ ಅಧಿಕಾರವನ್ನು ಮೊಟಕುಗೊಳಿಸಿ, ರಾಜ್ಯ ಸರ್ಕಾರಕ್ಕೆ ಹೆಚ್ಚು ಅಧಿಕಾರ ನೀಡುವುದು.
- ಉನ್ನತ ಶಿಕ್ಷಣ ಸಚಿವರನ್ನು ಪ್ರೊ-ಚಾನ್ಸಲರ್‌ಗಳಾಗಿ(Pro-chancler)ನೇಮಕ ಮಾಡುವುದು
- ಕರ್ನಾಟಕ ಕಾಲೇಜುಗಳಿಗೆ ವಿದೇಶದ ವಿ.ವಿ.ಗಳೊಂದಿಗೆ ಅಫಿಲಿಯೇಟ್ ಆಗಲು ಹಾಗೂ ವಿದೇಶದ ಕಾಲೇಜುಗಳು ರಾಜ್ಯದ ವಿ.ವಿ.ಗಳೊಂದಿಗೆ ಅಫಿಲಿಯೇಟ್ ಆಗಲು ಅವಕಾಶ ಕಲ್ಪಿಸುವುದು.
- ಕಾಲೇಜುಗಳನ್ನು ಸ್ವಯಂ ಮುಚ್ಚಲು(Voulentary Closure) ಅವಕಾಶ ಕಲ್ಪಿಸುವುದು.
- ಪರೀಕ್ಷಾ ಕಾರ್ಯಗಳನ್ನು ಕಡ್ಡಾಯಗೊಳಿಸಿ - ಉಲ್ಲಂಘಿಸುವ ಶಿಕ್ಷಕ ಶಿಕ್ಷಕೇತ್ತರರಿಗೆ 3 ವರ್ಷ ಜೈಲು ಶಿಕ್ಷೆ ಅಥವಾ 2000 ರೂಪಾಯಿ ದಂಡ ವಿಧಿಸುವುದು ಅಥವಾ ಎರಡನ್ನೂ ವಿಧಿಸುವುದು.
- ವಿದ್ಯಾರ್ಥಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಕುರಿತಂತೆ, ಸೂಕ್ತ ಉತ್ತರ ನೀಡಲು ಅವಕಾಶ ಕಲ್ಪಿಸದೆ ಇರುವುದು, ಅದಕ್ಕೆ ಸಂಬಂಧ ವಿದ್ಯಾರ್ಥಿಗಳಿಗೆ ನೋಟೀಸ್ ನೀಡದಿರುವುದು, ಶಿಸ್ತು ಕ್ರಮ ಕೈಗೊಳ್ಳುವ ಕ್ರಮಕ್ಕೆ ತಡೆಯಾಗಬಾರದು ಎಂಬ ಅಂಶವನ್ನು ಒಳಗೊಂಡಿದೆ.
- ಖಾಸಗಿ ಮನೆ ಪಾಠ ರದ್ದುಗೊಳಿಸುವ ಅಂಶವನ್ನು ಹೊಂದಿದೆ.
- ಉಪಕುಲಪತಿಗಳ ನೇಮಕ ಸಂಬಂಧ ರಚಿಸಲಾಗುವ 'ಸರ್ಚ್ ಕಮಿಟಿ' ರಚನೆಯನ್ನು ರಾಜ್ಯ ಸರ್ಕಾರ ಮಾಡಲಿದೆ. ಈ ಅಧಿಕಾರವನ್ನು ರಾಜ್ಯಪಾಲರಿಂದ ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲಾಗಿದೆ.

ಸೆನೆಟ್ ರದ್ದತಿಯನ್ನು ವಿರೋಧಿಸಿ ವಿದ್ಯಾರ್ಥಿಗಳ ಪ್ರತಿಭಟನೆ



# ವಿದ್ಯುತ್ ಸಮಸ್ಯೆ ಪರಿಹಾರಕ್ಕೆ ಒತ್ತಾಯಿಸಿ ರೈತರ ಪ್ರತಿಭಟನೆ

ರೈತರಿಗೆ ನೀಡಿರುವ ಅಸಂಬದ್ಧ, ಅಕ್ರಮ ಬಿಲ್‌ಗಳನ್ನು ವಾಪಸು ಪಡೆಯಬೇಕು, ದರ ಏರಿಕೆಯ ಪ್ರಸ್ತಾವವನ್ನು ಕೈಬಿಡಬೇಕು ಮತ್ತು ಮುಖ್ಯವಾಗಿ ಇಡೀ ವಿದ್ಯುತ್ ಕ್ಷೇತ್ರವನ್ನು ಖಾಸಗಿಕರಣಗೊಳಿಸುವ ಉದ್ದೇಶದಿಂದ ವಿಶ್ವಬ್ಯಾಂಕ್ ಅಧ್ಯಕ್ಷನಿಂದ ಸಾಲ ಪಡೆಯಲು ಒಪ್ಪಂದದ ಪ್ರಸ್ತಾವವನ್ನು ಕೈಬಿಡಬೇಕೆಂದು ಆಗ್ರಹಿಸಿ, ಕರ್ನಾಟಕ ಪ್ರಾಂತ ರೈತ ಸಂಘ(ಕೆ.ಪಿ.ಆರ್.ಎಸ್) ಮತ್ತು ನೀರಾವರಿ ಪಂಪ್ ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳ ನಾಯಕತ್ವದಲ್ಲಿ ಪ್ರತಿಭಟನಾ ಧರಣಿ, ಪ್ರದರ್ಶನಗಳನ್ನು ಸಂಘಟಿಸಲಾಯಿತು.

**ನವೆಂಬರ್ 7, ಪ್ರತಿಭಟನೆ ಆರಂಭ**

ವಿಶ್ವಬ್ಯಾಂಕ್ ಅಧ್ಯಕ್ಷ ರೈತ ವಿರೋಧಿ ಒಪ್ಪಂದವನ್ನು ಮಾಡಲು ಬೆಂಗಳೂರಿಗೆ ಬಂದ, ನವೆಂಬರ್ 7, ರಂದೇ ಪ್ರತಿಭಟನಾ ಮೆರವಣಿಗೆ ಮತ್ತು ಧರಣಿಯನ್ನು ಆರಂಭಿಸಲಾಯಿತು.

ಬೆಂಗಳೂರು, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ರೈತರು ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಆರಂಭಿಸಿ ಕೆಪಿಟಿಸಿಎಲ್ ಕಛೇರಿ, ಕಾವೇರಿ ಭವನ ಎದುರು ಪ್ರತಿಭಟನಾ ಪ್ರದರ್ಶನ, ಧರಣಿ ನಡೆಸಿ, ಕೆಪಿಟಿಸಿಎಲ್ ಅಧ್ಯಕ್ಷರಿಗೆ ಮನವಿ ನೀಡಿ, ಬೇಡಿಕೆಗಳ ಕುರಿತು ಚರ್ಚೆ ನಡೆಸಲಾಯಿತು. ನಮ್ಮ ಬಹುತೇಕ ಬೇಡಿಕೆ ಕುರಿತು ಸಹಮತವಿದ್ದರೂ, ತಾನು ಏನೂ ಮಾಡಲಾರದ ಸ್ಥಿತಿಯಲ್ಲಿದ್ದೇನೆ. ಸರ್ಕಾರ ಈ ಬಗ್ಗೆ ತೀರ್ಮಾನ ಮಾಡಬೇಕೆಂದು ತಿಳಿಸಿದರು.

ಹೊಸದಾಗಿ ಸಂಘಟನೆಯಾದ ಮಂಡ್ಯದಿಂದ ಸುಮಾರು 150 ರೈತರು ಅತ್ಯಂತ ಉತ್ಸಾಹದಿಂದ ಭಾಗವಹಿಸಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರೆ ತುಮಕೂರಿನ ರೈತರು ಸಹ ಈ ಪ್ರತಿಭಟನೆಯಲ್ಲಿ ಪಾಲುಗೊಂಡಿದ್ದರು. ಬೆಂಗಳೂರಿನ ಹೊಸಕೋಟೆ, ಆನೇಕಲ್ಲು, ದೊಡ್ಡಬಳ್ಳಾಪುರ, ಬೆಂ.ದಕ್ಷಿಣ ತಾಲ್ಲೂಕುಗಳ ರೈತರು ಹೋರಾಟ ಸಮಿತಿಗಳನ್ನು ರಚಿಸಿಕೊಂಡು ಭಾರೀ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕೇವಲ ಹೊಸಕೋಟೆಯಿಂದ ಮಾತ್ರವೇ ಸುಮಾರು 20 ವಾಹನಗಳಲ್ಲಿ ನೂರಾರು ರೈತರು ಈ ಹೋರಾಟದಲ್ಲಿ ಭಾಗವಹಿಸಿದ್ದರು. ಬೇಡಿಕೆಗಳು ಈಡೇರುವ ತನಕ ಹೋರಾಟ ಮುಂದುವರಿಸಬೇಕು ಮತ್ತು ಹೋರಾಟವನ್ನು ಮೇಲ್ ಮಟ್ಟಕ್ಕೆ ತೆಗೆದುಕೊಂಡುಹೋಗಬೇಕೆಂದರು.

**ಜಿ.ಸಿ.ಬಯ್ಯಾರೆಡ್ಡಿ**

ನವೆಂಬರ್ -8 ಬಳ್ಳಾರಿ, ಚಿತ್ರದುರ್ಗ, ನವೆಂಬರ್-9 ಬಿಜಾಪುರ, ಬೆಳಗಾಂ, ಹಾವೇರಿ, ನವೆಂಬರ್ 10-ರಾಯಚೂರು, ಕೊಪ್ಪಳ ಜಿಲ್ಲೆಗಳ ರೈತರು ಪ್ರತಿದಿನ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಆರಂಭಿಸಿ ಕೆ.ಪಿ.ಟಿ.ಸಿ.ಎಲ್. ಕಛೇರಿಯ ಎದುರು ಪ್ರತಿಭಟನಾ ಧರಣಿಯನ್ನು ನಡೆಸಿದರು.

ನವೆಂಬರ್ 13, ಕೆ.ಇ.ಆರ್.ಸಿ.ಗೆ ಸಾಮೂಹಿಕ ಪ್ರಮಾಣ ಪತ್ರ ಸಲ್ಲಿಕೆ

**ವಿದ್ಯುತ್ ಸಚಿವರ ಜೊತೆ ಮಾತುಕತೆ**

ನವೆಂಬರ್ 13 ರಂದು ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ರೈತರು ಮೆರವಣಿಗೆ ಮೂಲಕ ತೆರಳಿ, ಎಂ.ಬಿ. ರಸ್ತೆಯಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆ.ಇ.ಆರ್.ಸಿ) ನೆ ವಿದ್ಯುತ್ ದರ ಏರಿಕೆಯ ಕೆ.ಪಿ.ಟಿಟಿ.ಸಿ.ಎಲ್. ಪ್ರಸ್ತಾವವನ್ನು ಒಪ್ಪ ಬಾರದೆಂದು, ಈಗ HP ಗೆ ಇರುವ 300-00 ರೂ. ದರವನ್ನು 200ರೂ.ಗೆ ಇಳಿಸಬೇಕು, ಕೆ.ಪಿ.ಟಿ.ಸಿ.ಎಲ್. ಮತ್ತು ಕೆಪಿಸಿಎಲ್ ಗಳನ್ನು ಬಲಪಡಿಸಲು ಸರ್ಕಾರ, ತಾನು ನೀಡಬೇಕಾಗಿರುವ ಸಾವಿರಾರು ಕೋಟಿ ರೂ.ಗಳ ಬಾಕಿಗಳನ್ನು ಸಂಗ್ರಹ ಮಾಡಬೇಕು, ದೊಡ್ಡ ದೊಡ್ಡ ಉದ್ದಿಮೆದಾರರಿಂದ ಬರಬೇಕಿರುವ ಬಾರಿ ಮೊತ್ತಗಳನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡಬೇಕು. ದುಬಾರಿ ಅಭಿವೃದ್ಧಿ ವಿರೋಧಿ, ಖಾಸಗೀಕರಣದ ನೀತಿಗಳನ್ನು ಕೈ ಬಿಡಬೇಕು, ಕೃಷಿಗೆ ರಿಯಾಯಿತಿ ದರದಲ್ಲಿ ವಿದ್ಯುತ್‌ನ್ನು ನೀಡಬೇಕು. ಪ್ರಸರಣೆ ಮತ್ತು ಸರಬರಾಜಿನ ನಷ್ಟ, ಉದ್ದಿಮೆದಾರರಿಂದ ಆಗುತ್ತಿರುವ ವಿದ್ಯುತ್ ಕಳ್ಳತನವನ್ನು ತಡೆಯಬೇಕು. ಕಡಿಮೆ ದರದ ವಿದ್ಯುತ್‌ಗಾಗಿ ಹೆಚ್ಚು ಹೆಚ್ಚು ಜಲವಿದ್ಯುತ್ ಯೋಜನೆಗಳನ್ನು ಕೈಗೆತ್ತಿಗೊಳ್ಳಬೇಕು ಇತ್ಯಾದಿ ಅಂಶಗಳನ್ನು ಒಳಗೊಂಡಿರುವ ಪ್ರಮಾಣ ಪತ್ರವನ್ನು ಕೆಪಿಐಆರ್‌ಸಿಗೆ ಸಲ್ಲಿಸಿ, ಕೆಇಆರ್‌ಸಿ ಅಧ್ಯಕ್ಷ ಮತ್ತು ಸದಸ್ಯರ ಜೊತೆ ರೈತ ಸಂಘ ಮತ್ತು ಹೋರಾಟ ಸಮಿತಿ ಮುಖಂಡರ ನಿಯೋಗ ಮಾತುಕತೆ ನಡೆಸಿತು.

ಕೆಇಆರ್‌ಸಿ ನಮ್ಮ ವಾದದಲ್ಲಿ ಸಾಕಷ್ಟು ಅರ್ಥವಿದೆಯೆಂದು, ನಾವು ಎತ್ತಿರುವ ಅಂಶಗಳಿಗೆ ಸಂಬಂಧಿಸಿ ಕೆ.ಪಿ.ಟಿ.ಸಿ.ಎಲ್. ನಿಂದ ವಿವರಣೆಯನ್ನು ಪಡೆಯುತ್ತೇವೆಂದು ಆನಂತರ ಕೆಪಿಟಿಸಿಎಲ್ ಸಂಘದ ನಿಯೋಗವನ್ನು ಆಹ್ವಾನಿಸಿ, ಪ್ರಮಾಣ ಪತ್ರದಲ್ಲಿರುವ ಆಕ್ಷೇಪಣೆಗಳ ಕುರಿತು ವಿಚಾರಣೆ ನಡೆಸಿ, ಆದಷ್ಟು ರೈತರಿಗೆ ಸಹಾಯವಾಗುವ ರೀತಿಯ ತೀರ್ಮಾನವನ್ನು ತಾವು ಮಾಡುವುದಾಗಿ ಭರವಸೆ ನೀಡಿದರು. ಆದರೆ ಕೆಇಆರ್‌ಸಿಯನ್ನು ಸರ್ಕಾರ ರಚನೆ ಮಾಡಿರುವುದೇ ವಿದ್ಯುತ್ ಕ್ಷೇತ್ರವನ್ನು ಸಾಮಾಜಿಕ ಹೊಣೆಗಾರಿಕೆಯಿಂದ ಪ್ರತ್ಯೇಕಿಸಲು ಎಂಬುದನ್ನು ನಾವು ಮರೆಯುವಂತಿಲ್ಲ.

**ವಿದ್ಯುತ್ ಸಚಿವರ ಜೊತೆ ಚರ್ಚೆ:**

13 ರ ಸಂಜೆ ರೈತ ಸಂಘದ ಪದಾಧಿಕಾರಿಗಳ ನಿಯೋಗ ವಿಧಾನಸೌಧದಲ್ಲಿ ವಿದ್ಯುತ್ ಸಚಿವ ವೀರಕುಮಾರ್ ಪಾಟೀಲ್ ರಿಗೆ ಮನವಿಯನ್ನು ಅರ್ಪಿಸಿ, ಮಾತುಕತೆ ನಡೆಸಿ, ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು, ಒತ್ತಾಯಿಸಲಾಯಿತು. ಮಂತ್ರಿಗಳ ಸಹ ನಮ್ಮ ಬೇಡಿಕೆಗಳ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಮುಖ್ಯಮಂತ್ರಿಗಳು ಮತ್ತು ವಿದ್ಯುತ್‌ಗೆ ಸಂಬಂಧಿಸಿದ ಮಂತ್ರಿಮಂಡಲದ ಉಪ ಸಮಿತಿಯಲ್ಲಿ ಚರ್ಚಿಸಿ, ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುವುದಾಗಿ ಭರವಸೆಯನ್ನು ನೀಡಿದರು.

**ನವೆಂಬರ್ 14, 2000 - ಸಾವಿರಾರು ರೈತರಿಂದ ಕೆಪಿಟಿಸಿಎಲ್ ಮುತ್ತಿಗೆ-ಬಂಧನ:**

ನವೆಂಬರ್ 7 ರಿಂದ ನಿರಂತರವಾಗಿ ಪ್ರತಿಭಟನಾ ಧರಣಿ, ಪ್ರದರ್ಶನಗಳನ್ನು ನಡೆಸುತ್ತಿದ್ದರೂ, ಸಮಸ್ಯೆಗಳಿಗೆ ಸ್ಪಂದಿಸದ ಸರ್ಕಾರದ ಧೋರಣೆಯನ್ನು ಖಂಡಿಸಿ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ನವೆಂಬರ್ 14 ರಂದು ಕೋಲಾರದಿಂದ ಆಗಮಿಸಿದ್ದ ಸಾವಿರಾರು ರೈತರು, ಕೆಪಿಟಿಸಿಎಲ್ ಕಛೇರಿ ಮುತ್ತಿಗೆ ಹಾಕಿ, ಕಚೇರಿ ಎದುರು ರಸ್ತೆ ತಡೆ ನಡೆಸಿ ಸಭೆ ನಡೆಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಮುಖಂಡರು ಸರ್ಕಾರದ ಧೋರಣೆಯನ್ನು ಖಂಡಿಸಿ, ಮುಂದಿನ ಹಂತದಲ್ಲಿ ಹೋರಾಟವನ್ನು ತೀವ್ರಗೊಳಿಸಲು ಕರೆ ನೀಡಿದರು. ಬೇಡಿಕೆಗಳು ಈಡೇರುವ ತನಕ ಬಾಕಿಗಳನ್ನು ಕಟ್ಟಬಾರದೆಂದು ಈ ಬಗ್ಗೆ ರೈತರಲ್ಲಿ ಎಚ್ಚರಿಕೆ ಮೂಡಿಸಬೇಕೆಂದು ತಿಳಿಸಿದರು.

ಹೋರಾಟವನ್ನು ತೀವ್ರ ಮಟ್ಟಕ್ಕೆ ಕೊಂಡೊಯ್ಯಬೇಕೆಂದು ಕಾತುರ ಪಡುತ್ತಿದ್ದ ಬೆಗಳೂರು ಜಿಲ್ಲೆ ಕೆಲವು ರೈತರು ಈ ಹೋರಾಟದಲ್ಲಿ ಪಾಲುಗೊಂಡಿದ್ದರು. ರಸ್ತೆ ನಡೆಸುತ್ತಿದ್ದ ಸಾವಿರಾರು ರೈತರನ್ನು ಪೋಲೀಸರು ಮುತ್ತಿಗೆ ಹಾಕಿ ಬಂಧಿಸಿ



ಆನಂತರ ಬಿಡುಗಡೆ ಮಾಡಿದರು.

**ಹೋರಾಟವನ್ನು ಮುಂದುವರೆಸಲು ಕರೆ**

ಸರ್ಕಾರ ನಮ್ಮ ಬೇಡಿಕೆ ಈಡೇರಿಸಲು ಸಿದ್ದವಿಲ್ಲದ ಕಾರಣ, ರೈತರು ಹೋರಾಟವನ್ನು ಮುಂದುವರಿಸಬೇಕು. ಅಸಂಬದ್ಧ, ಅಕ್ರಮ ಬಿಲ್‌ಗಳು ವಾಪಸು ಪಡೆದು, ಸಂಘಟನೆಗಳ ಜೊತೆ ಚರ್ಚಿಸುವ ತನಕ, ಬಿಲ್‌ಗಳನ್ನು ಪಾವತಿ ಮಾಡ ಬಾರದೆಂದು ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ಮತ್ತು ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿಗಳು ನಿರ್ಧರಿಸಿವೆ.

**ಈ ಹೋರಾಟವನ್ನು ಇನ್ನಷ್ಟು ವಿಶಾಲ - ವ್ಯಾಪಕಗೊಳಿಸಲು ನಿರ್ಧಾರ:**

ವಿದ್ಯುತ್ ಸಮಸ್ಯೆಗಳ ಪರಿಹಾರಕ್ಕಾಗಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ದ ಆಶ್ರಯ ವಿಶಾಲವಾದ ಹೋರಾಟಗಳನ್ನು ರೂಪಿಸಲು ತೀರ್ಮಾನಿಸಿ ತಾಲ್ಲೂಕು ಮಟ್ಟದಲ್ಲಿ ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಸಮಾವೇಶಗಳನ್ನು ಸಂಘಟಿಸಿ, ಪಕ್ಷಾತೀತವಾದ ಹೋರಾಟ ಸಮಿತಿಗಳನ್ನು ರಚಿಸಲಾಗಿದೆ. ಸದ್ಯ ಸುಮಾರು 25 ತಾಲ್ಲೂಕುಗಳಲ್ಲಿ ಇಂತಹ ಸಮ್ಮಾವೇಶ, ಸಮಿತಿಗಳು ರಚಿಸಲಾಗಿದ್ದು, ಇನ್ನೂ ಕನಿಷ್ಟ 50 ತಾಲ್ಲೂಕುಗಳಲ್ಲಿ ಸಮಾವೇಶ - ಸಮಿತಿಗಳನ್ನು ರಚಿಸಲು ಗುರಿಯನ್ನು ಹೊಂದಲಾಗಿದೆ.

ಈ ರೀತಿಯ ವಿಶಾಲವಾದ ಹೋರಾಟಗಳನ್ನು ರೂಪಿಸಲು ಸಣ್ಣ ಪ್ರಯತ್ನ ನಡೆದಿರುವ ಹಿನ್ನೆಲೆಯಲ್ಲಿ ತುಂಬಾ ಉತ್ತಮ ಪ್ರತಿಕ್ರಿಯೆ ಬಂದಿದೆ. ನವೆಂಬರ್ 7 ರಂದು ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಸುಮಾರು 1700 ರಷ್ಟು ರೈತರಲ್ಲಿ ವಿವಿಧ ಪಕ್ಷಗಳಿಗೆ ಸೇರಿದವರೂ ಅತ್ಯಧಿಕವಾಗಿದ್ದರು. ಈ ಹೋರಾಟವನ್ನು ಇನ್ನೂ ಮುಂದಕ್ಕೆ ಒಯ್ಯಲು ನಿರ್ಧರಿಸಲಾಗಿದೆ. ಜನಜಾಗೃತಿ ಸಭೆಗಳು, ಗ್ರಾಮಾಂತರ ಪ್ರದೇಶವಾರು ಇರುವ ಕೆಪಿಟಿಸಿಎಲ್ ಕಛೇರಿ ಎದುರು ಪ್ರದರ್ಶನ, ಪಿಕೆಟಿಂಗ್ ನಡೆಸಲಾಗುವುದು. ಬಾಕಿಯ ಬಿಲ್ ಕಟ್ಟಬೇಡಿ ಎಂದು ರೈತರಿಗೂ ಬಿಲ್ ಬಾಕಿ ರದ್ದು ಮಾಡಿ ಎಂಬುದು ಎಲ್ಲೆಡೆಗಳಲ್ಲಿ ಘೋಷಿಸಿ ಆಗ್ರಹಿಸಲಾಗುವ ಬೇಡಿಕೆಯಾಗಿದೆ.



# ಕಾರ್ಮಿಕ ವರ್ಗ ಅರ್ಥಪೂರ್ಣ ಸೌಹಾರ್ದತೆ-ಬೆಂಬಲ

ನವೆಂಬರ್ 7-14 ರವರೆಗೆ ನಡೆದ ನಿರಂತರ ರೈತರ ಪ್ರತಿಭಟನಾ ಹೋರಾಟಕ್ಕೆ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಸಾವಿರಾರು ರೈತರಿಗೆ ಹಸಿವನ್ನು ನೀಗಿಸಲು ಊಟದ ಪ್ಯಾಕೆಟ್‌ಗಳನ್ನು ನೀಡಿದವರು ಬೆಂಗಳೂರು ಜಿಲ್ಲೆಯ ಕಾರ್ಮಿಕ ವರ್ಗ. ಬೆಂಗಳೂರು ಜಿಲ್ಲೆಯ ಸಿಐಟಿಯು ಜಿಲ್ಲಾ ಸಮಿತಿಯ ಮುತುವರ್ಜಿಯೊಂದಿಗೆ ನಡೆದ ಈ ಸೌಹಾರ್ದ ಕಾರ್ಯಾಚರಣೆ ಅತ್ಯಂತ ಯಶಸ್ವಿಯಾಗಿ ಸಾಕಷ್ಟು ಪ್ರಮಾಣದಲ್ಲಿ ರೈತರಿಗೆ ಊಟವನ್ನು ವ್ಯವಸ್ಥೆ ಮಾಡಿದ್ದಲ್ಲದೆ, ಹೋರಾಟದ ಯಶಸ್ಸಿಗೆ ಧನ ಸಹಾಯವನ್ನು ನೀಡಿದರು. ಈ ಅಭಿನಂದನಾರ್ಹ ಕಾರ್ಮಿಕ ವರ್ಗದ ಸಹಾಯ, ಬೆಂಬಲ ನಿಜವಾದ ರೈತ-ಕಾರ್ಮಿಕ ಐಕ್ಯತೆ ಬೆಸೆಯುವಲ್ಲಿ ಸಹಾಯವಾಗುತ್ತದೆ. ಅನ್ನದಾತನಾದ ಹೋರಾಟನಿರತ ರೈತನಿಗೆ ಅನ್ನವನ್ನು ನೀಡಿದ ಕಾರ್ಮಿಕ ವರ್ಗಕ್ಕೆ ಕ್ರಾಂತಿಕಾರಿ ಧನ್ಯವಾದಗಳು.

ಪ್ರಾತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿಯ ಮುಖಂಡರು, ಎಸ್.ಎಫ್.ಐ., ಡಿವೈಎಫ್‌ಐ ಇತ್ಯಾದಿ ಸಹೋದರ ಸಂಘಟನೆಗಳ ಮುಖಂಡರು ಇಷ್ಟು ದಿನ ಸಕ್ರಿಯ ಭಾಗವಹಿಸಿ ಯಶಸ್ಸಿಗಾಗಿ ದುಡಿದರು.

2000 ಜನರಲ್ಲಿ ಶೇ 90 ರಷ್ಟು ಜನ ಸಾಮಾನ್ಯರ ರೈತರು. ಕಾಂಗ್ರೆಸ ತಾಲ್ಲೂಕು ಪಂಚಾಯತ್ ಸದಸ್ಯರು, ಜೆ.ಡಿ(ಎಸ್), ಜೆಡಿ(ಯು) ಮುಖಂಡರು ಸಹ ಸಕ್ರಿಯವಾಗಿ ಭಾಗವಹಿಸಿದ್ದರು. ಇದೇ ರೀತಿಯಲ್ಲಿ ಬೇರೆ ಬೇರೆ ದಿನಗಳಲ್ಲಿ ಹೊಸ ಹೊಸ ವಿಭಾಗದ ಜನ ಭಾಗವಹಿಸಿದ್ದಾರೆ.

ಈ ಅನುಭವದ ಹಿನ್ನೆಲೆಯಲ್ಲಿ ಇಂತಹ ಪ್ರಯತ್ನಗಳನ್ನು ಮುಂದುವರಿಸುತ್ತಾ, ಮುಂದಿನ ದಿನಗಳಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(AIAWO), ಕರ್ನಾಟಕ ರಾಜ್ಯ ರೈತ ಸಂಘ(KPRS) ಮತ್ತು ಕರ್ನಾಟಕ ರಾಜ್ಯ ರೈತ ಸಂಘ(ಅಜಯ್ ಭವನ) ನಂತಹ ರೈತ-ಕೂಲಿಕಾರರ ಸಂಘಟನೆಗಳನ್ನು ಒಗ್ಗೂಡಿಸಿ ಚಳುವಳಿಯನ್ನು ಮುನ್ನಡೆಸುವ ಪ್ರಯತ್ನಗಳು ನಡೆದಿವೆ.

## ವಿ.ವಿ.ಮಸೂದೆ.......

ಪುಟ 3 ರಿಂದ

ಒಳಿತಲ್ಲವೇ?

ಇಂತಹ ಮಸೂದೆ ಆಕಸ್ಮಿಕವಾಗಿ ಬಂದಿರುವುದಲ್ಲ, ವ್ಯವಸ್ಥಿತವಾಗಿ ಜಾಗತೀಕರಣ-ಉದಾರೀಕರಣ ಪ್ರಕ್ರಿಯೆಗಳ ಜಾರಿಯ ಭಾಗವಾಗಿ, ವಿ.ವಿ.ಗಳ ಪ್ರಜಾಸತ್ತೆಯನ್ನು ನಾಶಗೊಳಿಸಿ - ಸರ್ವಾಧಿಕಾರಿ ಆಡಳಿತವನ್ನು ವ್ಯವಸ್ಥಿತವಾಗಿ ವಿ.ವಿ.ಗಳಲ್ಲಿ ಸ್ಥಾಪಿಸುವ ಕ್ರಮವಾಗಿದೆ. 1997 ರಲ್ಲಿ ಅಂದಿನ ಇಂತಹದೇ ಮಸೂದೆ ವಿರುದ್ಧ ರಾಜ್ಯದಲ್ಲಿ ಮೂಡಿಬಂದಂತೆ ಇಂದೂ ಸಹಾ ಶೈಕ್ಷಣಿಕ ಸಮುದಾಯದ-ವಿದ್ಯಾರ್ಥಿಗಳ ಹಾಗೂ ಸಮಾಜದ ವಿವಿಧ ವಿಭಾಗಗಳ ಪ್ರತಿರೋಧ ಮೂಡಿಬರಬೇಕಾದರೆ ಆ ಮೂಲಕ ವಿ.ವಿ. ಯೊಳಗಿನ ಪ್ರಜಾಸತ್ತೆ ರಕ್ಷಿ-ವಿಶ್ವವಿದ್ಯಾಲಯಗಳನ್ನು ಉಳಿಸುವ - ಜನಪರಗೊಳಿಸುವ ಚಳುವಳಿ ಮೂಡಿಬರಬೇಕಿದೆ.

1994 ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾದ ಪ್ರೊ. ನವನೀತ್ ರಾವ್ ನೇತೃತ್ವದ ಕರ್ನಾಟಕ ವಿಶ್ವವಿದ್ಯಾಲಯಗಳ ಪರಾಮರ್ಶೆ ಆಯೋಗ ವರದಿಯ ಆಧಾರದಲ್ಲಿ ವಿಶ್ವವಿದ್ಯಾಲಯ ಆಡಳಿತ ಸುಧಾರಣೆಗಾಗಿ ಪ್ರಸ್ತುತ ಕರ್ನಾಟಕ ವಿ.ವಿ.ಮಸೂದೆ 2000 ನ್ನು ರೂಪಿಸಲಾಗಿದೆ ಎಂದು ಸರ್ಕಾರ ವಾದಿಸುತ್ತಿದೆ.

# ಸಂಘ ಪರಿವಾರ ಮತ್ತು ಡಾಲರ್ ಲೀಲೆ

**ಆರ್.ರಾಮಕೃಷ್ಣ**

ಮೊನ್ನೆ ಮೊನ್ನೆ ದೆಹಲಿ ಸಮೀಪದ ಆಗ್ರಾದಲ್ಲಿ ನಡೆದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ 'ಸುರಕ್ಷಾ' ಮಹಾ ಸಭೆಯಲ್ಲಿ ದೇಶದ ಚರ್ಚುಗಳು ವಿದೇಶಗಳಿಗೆ ತಮ್ಮ ನಿಷ್ಠೆಯನ್ನು ಬಿಡಬೇಕು. ಚರ್ಚುಗಳ ಭಾರತೀಕರಣ ಆಗಬೇಕು ಎಂಬ ಗುಡುಗು ಕೇಳಿಬಂತು. ದೇಶದ ಅಲ್ಪಸಂಖ್ಯಾತರಿಗೆ ವಿದೇಶಗಳಿಂದ ಭಾರಿ ಭಾರಿ ಹಣಕಾಸು ನೆರವು ಹರಿದು ಬರುತ್ತಿದೆ. ಈ ಹಣ ಬಲದಿಂದಲೇ ಈ ಅಲ್ಪಸಂಖ್ಯಾತ ಧಾರ್ಮಿಕ ಸಂಸ್ಥೆಗಳು ದೇಶದೊಳಗೆ ದೇಶ ವಿರೋಧಿ-ದೇಶದ್ರೋಹಿ ಚಟುವಟಿಕೆಯಲ್ಲಿ ತೊಡಗಿವೆ ಎಂಬುದು.

ಈ ಆಗ್ರಹದ ಜೊತೆಗೆ ಇರುವ ಮತ್ತೊಂದು ಗಂಭೀರ ಆರೋಪ. ಆರ್.ಎಸ್.ಎಸ್. ಮತ್ತು ಸಂಘ ಪರಿವಾರವು ಬಾಬರಿ ಮಸೀದಿಯ ನಾಶದ ನಂತರ ಇತ್ತೀಚಿನ ದಿನಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲಿನ ಧಾಳಿಯನ್ನು ಸ್ವಲ್ಪ ಸಡಿಲಿಸಿ, ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಸಮಗ್ರ ಧಾಳಿಯನ್ನು ಕೇಂದ್ರೀಕರಿಸಿರುವ ಅಂಶವನ್ನು ಪರಿಗಣಿಸಬೇಕಿದೆ.

ದೇಶ ವಿರೋಧಿ ಚಟುವಟಿಕೆಗಳಿಗೆ ಮುಸ್ಲಿಂ ಅಲ್ಪಸಂಖ್ಯಾತರಿಗೆ ಅರಬ್ ದೇಶಗಳಿಂದ ಪೆಟ್ರೋ ಡಾಲರ್ ಹರಿದು ಬರುತ್ತದೆ ಎಂಬುದು ಹಳೆಯ ಆರೋಪ.

'ತನ್ನ ಎಲೆಯಲ್ಲಿ ಬಿದ್ದಿರುವ ಹೆಗ್ಗಣದ ಬಗೆಗೆ ಮಾತನಾಡದೆ ಪಕ್ಕದವನ ಎಲೆಯಲ್ಲಿ ಬಿದ್ದಿರುವ ನೊಣದ ಬಗೆಗೆ ಮಾತನಾಡುವಂತಿದೆ ಸಂಘಪರಿವಾರದ ವಾದದ ಪರಿ. ಬೇರೆ ಧರ್ಮದವರೆಲ್ಲರೂ ದೇಶದ್ರೋಹಿಗಳು ತಾವು ಮಾತ್ರ ದೇಶಪ್ರೇಮಿಗಳು/ನ್ಯಾಯಾಲಯದ ನಡುಗಂಬಗಳು ಎನ್ನುವ ಸಂಘ ಪರಿವಾರದ ಬಣ್ಣ ಇಲ್ಲಿ ಬಯಲಾಗಿದೆ.

ಧಾರ್ಮಿಕ ಅಲ್ಪಸಂಖ್ಯಾತರ ಸಂಸ್ಥೆಗಳು ತಮಗೆ ಹರಿದು ಬರುವ ವಿದೇಶಿ ಹಣಕಾಸಿನ ನೆರವಿನ ಬಗೆಗೆ ಪಾರದರ್ಶಕತೆ ಹೊಂದಿರಬೇಕು ಎಂದು ಸಂಘ ಪರಿವಾರ ಪದೇ ಪದೇ ಆಗ್ರಹಿಸುತ್ತಿತ್ತು. ಅನಿವಾಸಿ ಭಾರತೀಯರಲ್ಲದೇ, ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಸಂಸ್ಥೆಗೂ ಹಣಕಾಸಿನ ನೆರವು ನೀಡುವ ಅದೇ ವಿದೇಶಿ ಸಂಸ್ಥೆಗಳಿಂದ ಸಂಘ ಪರಿವಾರದ ಹಲವು ವಿವಿಧ ಅವತಾರಗಳಾದ ಹಿಂದೂ ಸಂಘಟನೆಗಳಿಗೂ ಹಣಕಾಸಿನ ನೆರವು ಹರಿದು ಬಂದಿದೆ ಎನ್ನುತ್ತದೆ ದಾಖಲೆಗಳು.

ವಿದೇಶಿ ಕೊಡುಗೆಗಳ ಪಟ್ಟಿಯನ್ನು ಬಹಿರಂಗ ಪಡಿಸುವುದಾಗಿ ಆಗಾಗ ಗುಡುರು ಹಾಕುತ್ತಿದ್ದ ಕೇಂದ್ರ ಸರ್ಕಾರದ ಗೃಹಮಂತ್ರಿ ಅಡ್ವಾಣಿ ಹಾಗೆ ಮಾಡುವ ಧೈರ್ಯ ತೋರಲೇ ಇಲ್ಲ. 'ಬಾಯಿ ಬಿಟ್ಟರೆ ಬಣ್ಣಗೇಡು' ಎಂಬಂತೆ ತಮ್ಮ ಬಣ್ಣವೇ ಬಯಲಾಗುವ ಭಯ ಬಂದ ಗೃಹಮಂತ್ರಿಗಳು ತೆಪ್ಪಗೆ ಸುಮ್ಮನಿದ್ದಾರೆ.

ಕ್ರಿಶ್ಚಿಯನ್ ಧಾರ್ಮಿಕ ಸಂಸ್ಥೆಗಳು ಭಾರತದಲ್ಲಿ ಶಿಕ್ಷಣ ಪ್ರಸರಣ-ಆರೋಗ್ಯ ಸೇವೆಗಳು-ಬುಡಕಟ್ಟು ಜನರ ಅಭಿವೃದ್ಧಿಗಾಗಿ ವ್ಯಾಪಕವಾಗಿ ಶ್ರಮಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇಂಥ ಯಾವ ಕನಿಷ್ಟ ಸಾಮಾಜಿಕ ಕಾಳಜಿಯನ್ನು ತೋರದ ಈ ಹಿಂದೂ ಮತಾಂಧ ಸಂಘಟನೆಗಳು ವಿದೇಶಿ ನೆರವನ್ನು ಪಡೆದು ಏನು ಮಾಡುತ್ತಿವೆ ಎನ್ನುವುದೇ ಈಗ ಗಂಭೀರವಾದ ಪ್ರಶ್ನೆ.

ಭಾರತ ದೇಶದ ಸಮಸ್ತ ಹಿತಾಸಕ್ತಿಗಳನ್ನು ನುಂಗಿ ನೊಣೆಯಲು ಪರಸ್ಪರ ಬೆಸೆದುಕೊಂಡು ನಿಂತಿರುವ 'ಉದಾರೀಕರಣ ಹಾಗೂ ಹಿಂದುತ್ವ ಎಂಬ ಈ ಎರಡು ತಲೆಯ ಹೆಬ್ಬಾವುಗಳ ಸಂಚನ್ನು ತಿಳಿಯಲು ಸಾಧ್ಯವಾದರೆ ವಿದೇಶಿ ನೆರವಿನ ಪ್ರಶ್ನೆಯನ್ನು ಅರಿಯುವುದು ಕಷ್ಟವೇನಲ್ಲ.

ಈ ಹಿಂದೆ ಇಡೀ ದೇಶಕ್ಕೇ ಕೋಮುದಳ್ಳುರಿಯನ್ನಿಕ್ಕಿದ ರಥಯಾತ್ರೆ ಬಾಬರಿ ಮಸೀದಿ ಧ್ವಂಸದ ಸಂದರ್ಭದಲ್ಲಿ ಮಿಲಿಯಾಂತರ ರೂಪಾಯಿ ಹಣ ಅನಿವಾಸಿ ಭಾರತೀಯರು ಹಾಗೂ ಪಾಶ್ಚಿಮಾತ್ಯ ಹಣಕಾಸು ಏಜೆನ್ಸಿಗಳಿಂದ ಹಿಂದೂ ಮತಾಂಧ ಸಂಘಗಳಿಗೆ ಹರಿದು ಬಂದಿದೆ. ಇದೆಲ್ಲವೂ ಬಹುತೇಕ ಅನ್ಯ ದರ್ಮಿಯರ ವಿರುದ್ಧ ವಿಷ ಪ್ರಚಾರ ನಡೆಸುವ ದಂಗೆ, ಧಾಳಿಗಳನ್ನು ಸಂಘಟಿಸುವ ಕೆಲಸಕ್ಕಾಗಿಯೇ ಬಳಕೆಯಾಗಿರುವುದು ಸ್ಪಷ್ಟವಾಗಿದೆ. ಈ ವ್ಯವಹಾರಗಳ ಹಿಂದೆ ದೊಡ್ಡ 'ಹವಾಲದ ಜಾಲ'ವೇ ಅಡಗಿದೆ.

ದೀರ್ಘಕಾಲದ ದೋಷಪೂರಿತ ಆರ್ಥಿಕ ನೀತಿಗಳು ಮತ್ತು ಇದೀಗ ದೇಶದ ಯುವಜನರು, ಅನ್ನ, ಬಟ್ಟೆ, ಕೆಲಸ, ತಮ್ಮ ಬದುಕಿನ ಪ್ರಶ್ನೆಗಳಲ್ಲಿ ಆಸೆಯನ್ನೇ ಕೈಬಿಟ್ಟು ಹತಾಶರಾಗಲು ಕಾರಣವಾಗಿರುವ ನಿರ್ದಯ ಆರ್ಥಿಕ ಉದಾರೀಕರಣ, ಖಾಸಗೀಕರಣ, ಹೊಸಆರ್ಥಿಕ ನೀತಿಗಳು ದೇಶವನ್ನು ವಿನಾಶದತ್ತ ಕೊಂಡೊಯ್ಯುತ್ತಿವೆ. ಜನರ ಹತಾಶೆಯು ಆಕ್ರೋಶವಾಗಿ ಪರಿವರ್ತನೆಯಾದರೆ ನಿರಾಸೆಯು ಬಂಡಾಯವಾದರೆ ಜಾಗತೀಕರಣ ಶಕ್ತಿಗಳಿಗೆ ಕಂಟಕ ಕಾದಿದೆ. ಅದು ಆಗಗೊಡದಿರುವಂತೆ ಜನರನ್ನು ಹಿಡಿದಿಡಬಲ್ಲ, ದಿಕ್ಕು ತಪ್ಪಿಸಬಲ್ಲ ದಿವ್ಯ ಮಂತ್ರವೊಂದು ಈಗ ಬೇಕಾಗಿದೆ ಭಾರತದ ಆಳುವ ವರ್ಗಕ್ಕೆ ಹಾಗೂ ಜಾಗತೀಕರಣದ ಪ್ರವರ್ತಕರು,ಸುಲಿಗೆಕೋರರಿಗೆ. ಭಾರತದಲ್ಲಿ ಆ ದಿವ್ಯ ಮಂತ್ರವೇ 'ಹಿಂದುತ್ವ' ಸಿದ್ಧಾಂತ.

ದೇಶದ ಹೆಮ್ಮೆಯ ಸಾರ್ವಜನಿಕ ಉದ್ದಿಮೆಗಳನ್ನು ನಾಶ ಮಾಡಲು, ವಿದೇಶಿಯರಿಗೆ ಒಪ್ಪಿಸಲು ಇವರ ದೇಶಪ್ರೇಮ ಅಡ್ಡಿ ಬರುವುದಿಲ್ಲ. ರೈತರು ಬೆಳೆದ ಬೆಳೆಗೆ ಬೆಲೆ ಇಲ್ಲದೇ ಆತ್ಮಹತ್ಯೆ ಮಾಡಿಕೊಂಡರೂ ಬೇಕು ಇವರಿಗೆ ಮುಕ್ತ ಅನಿರ್ಬಂಧಿತ - ಆಮದು ರಫ್ತು ನೀತಿ. ರಾಷ್ಟ್ರಭಕ್ತಿ ಇಲ್ಲಿ ಅಡ್ಡಿ ಬಾರದು. ಬಾಯಲ್ಲಿ ಮಾತ್ರ ಸ್ವದೇಶಿ, ಹೃದಯ, ಮಿದುಳು-ಕೈಯಲ್ಲಿ ಪೂರ್ಣವಾಗಿ ವಿದೇಶಿ.

ಪಿಶಾಚಿ, ಶಾಂತಿ ಮಂತ್ರವನ್ನು ಹೇಳುವಂತೆ ಅಲ್ಪಸಂಖ್ಯಾತರ ಮೇಲೆ ದೇಶದ್ರೋಹದ ಕೆಸರು ಎರಚಿ ತಾವು ಮಾತ್ರ ನ್ಯಾಯಾಲಯದ ನಡುಗಂಬಗಳು ಎಂದುಸಾರಿಕೊಳ್ಳುವ ಸಂಘ ಪರಿವಾರದ ಆಟಗಳು ನಡೆಯುವುದಿಲ್ಲ.

ಸಂಘ ಪರಿವಾರದ ಅಂಗ ಸಂಸ್ಥೆಗಳಿಗೆ ಹಣಕಾಸು ನೆರವನ್ನು ನೀಡಿರುವ ವಿದೇಶಿ ಸಂಸ್ಥೆಗಳ ದೊಡ್ಡ ಪಟ್ಟಿಯೇ ಇದೀಗ ದೊರೆತಿದೆ. 'ಕ್ಯಾಲಿಫೋರ್ನಿಯ ಕಲ್ಚರ್ ರಿಯಲೈಸೇಷನ್ ಫೆಲೋಶಿಪ್', ಕನೆಕ್ಟಿಕಟ್ ಕಲ್ಚರ್, ಕನೆಕ್ಟಿಕಟ್ ವ್ಯಾಲಿ ಟೆಂಪಲ್ ಸೊಸೈಟಿ, ಲಾರೆನ್ ಸೆಟೋಮಿ ಕ್ಲಬ್-ನ್ಯೂ ಬಿಟನ್, ಯಾಲೆ ಹಾಸ್ಪೆಟಲ್-ನ್ಯೂಹೆವನ್, ಸಾಲ್ವೇಷನ್ ಆರ್ಮಿಕ, ಇಲಿಯಾಸ್ ಎಜುಕೇಷನ್ ಅಂಡ್ ಸೊಸೈಟಿ, ನ್ಯೂಯಾರ್ಕ್‌ಕಲ್ಚರ್, ಬಿ.ಎಸ್.ಎಸ್. ಅಸ್ಸಾಂ ರೈಫಲ್ ಫಂಡ್, ಶೇರ್ ಅಂಡ್ ಶೇರ್ ಫೌಂಡೇಷನ್, ನ್ಯೂ ಜೆರ್ಸಿ ಎಜುಕೇಷನ್ ಅಂಡ್ ಸೊಸೈಟಿ, ನ್ಯೂ ಜೆರ್ಸಿ ಕಲ್ಚರ್ ವೆಸ್ಟ್ ವರ್ಜಿನಿಯಾ ಕಲ್ಚರ್,ಇಸ್ಕಾನ್, ವಿವೇಕಾನಂದ ವೇದಾಂತ ಸೊಸೈಟಿ, ಆರ್ಯಸಮಾಜ ಇಂತಹ ಹತ್ತಾರು ವಿದೇಶಿ ಸಂಸ್ಥೆಗಳು ಅಗಾಧ ಪ್ರಮಾಣದ ಹಣವನ್ನು ಪೂರೈಸಿವೆ.

ಜಾಗೃತ ಜನ ತಮಗೆ ಸರಿಯಾದ ಪಾಠ ಕಲಿಸಲಿದ್ದಾರೆ ಎಂಬುದನ್ನು ಈ ಕೋಮುವಾದಿಗಳು ಅರ್ಥಮಾಡಿಕೊಳ್ಳಬೇಕಿದೆ.

## ವಿದೇಶಿ ಹಣ - ಸ್ವದೇಶಿ ಸೋಗು

ಕ್ರಿಶ್ಚಿಯನ್ ಮತ್ತು ಮುಸ್ಲಿಂ ಸಂಸ್ಥೆಗಳಿಗೆ ವಿದೇಶಗಳಿಂದ ಹಣ ಬರುತ್ತದೆ ಎಂದು ಬೊಬ್ಬೆ ಹೊಡೆಯುವ ಹಿಂದೂವಾದಿಗಳಿಗೂ ಅಪಾರವಾದ ಹಣ ವಿದೇಶಗಳಿಂದ ಬರುತ್ತದೆ ಎಂದರೆ ಆಶ್ಚರ್ಯವಾಗುವುದಿಲ್ಲವೇ? ಅದರಲ್ಲೂ ಕ್ರಿಶ್ಚಿಯನರೇ ಬಹುಸಂಖ್ಯಾತರಾಗಿರುವ ಅಮೆರಿಕಾದಿಂದ! 60 ಮತ್ತು 70 ರ ದಶಕದಲ್ಲಿ ಅಮೆರಿಕಕ್ಕೆ ಬಂದ ಏಷಿಯಾ ಖಂಡದ ಜನರು ಧಾರ್ಮಿಕ ಮನೋಭಾವದವರಾಗಿರುವುದನ್ನು ಮನಗಂಡ ಅಲ್ಲಿನ ಸರಕಾರ ಧಾರ್ಮಿಕ ಸಂಘಟನೆಗಳಿಗೆ ವಿಫುಲವಾದ ಧನಸಹಾಯ ನೀಡಲು ಅವಕಾಶ ನೀಡಿತು.

ಈ ಹಿನ್ನೆಲೆಯಲ್ಲಿ ಹಲವಾರು ಸಂಘಟನೆಗಳು ಹುಟ್ಟಿಕೊಂಡು ಧನ ಸಂಗ್ರಹ ಆರಂಭಿಸಿ, ಭಾರತದಲ್ಲಿನ ವಿವಿಧ ಹಿಂದೂ ಧಾರ್ಮಿಕ ಸಂಘಟನೆಗಳಿಗೆ ಹಣ ಪೂರೈಕೆ ನಡೆಸಿದವು. ಅವುಗಳಲ್ಲಿ ಪ್ರಮುಖವಾದ ಇಂಡಿಯನ್ ಡೆವಲಪ್‌ಮೆಂಟ್ ಅಂಟ್ ರಿಲೀಫ್ ಫಂಡ್(IDRE) 1978 ರಲ್ಲಿ ರಚಿತವಾದರೆ, ಹಿಂದೂ ಹೆರಿಟೇಜ್ ಎಂಡೋಮೆಂಟ್(HHB) 1994 ರಲ್ಲಿ ಸ್ಥಾಪನೆಯಾಯಿತು.

ಐಡಿಐರ್‌ಎಫ್ 1990 ರಿಂದೀಚೆಗೆ 20 ದಶಲಕ್ಷ ಡಾಲರುಗಳಿಗಿಂತಲೂ ಹೆಚ್ಚು ಹಣ ಸಂಗ್ರಹಿಸಿ, ಭಾರತಕ್ಕೆ ರವಾನಿಸಿದ್ದರೆ, ಹೆಚ್‌ಹೆಚ್‌ಇ 26 ದಶಲಕ್ಷ ಡಾಲರುಗಳಿಗಿಂತಲೂ ಹೆಚ್ಚು ಸಂಗ್ರಹಿಸಿ ಭಾರತಕ್ಕೆ ರವಾನಿಸಿತ್ತು. ಇವೆರಡೂ ಸಂಘಟನೆಗಳಿಂದ ಬಂದ ಹಣವನ್ನು ಆದಿವಾಸಿ, ಬುಡಕಟ್ಟು ಜನರು ಹೆಚ್ಚಾಗಿ ವಾಸಿಸಿರುವ ಪ್ರದೇಶಗಳಲ್ಲಿ ಧಾರ್ಮಿಕ ಕಾರ್ಯದ ಹೆಸರಿನಲ್ಲಿ ವಿವಿಧ ಉದ್ದೇಶಗಳಿಗೆ ಬಳಸಲಾಗುತ್ತಿದೆ.

ವಿಸ್ಮಯವಾಗುವ ಇನ್ನೊಂದು ಸಂಗತಿ ಎಂದರೆ ಅಮೆರಿಕದಲ್ಲಿ ನಡೆಯುವ ಈ ಎಲ್ಲಾ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ವಿಶ್ವಹಿಂದು ಪರಿಷತ್-ಅಮೆರಿಕಾ(ವಿಹೆಚ್‌ಪಿ-ಅಮೆರಿಕ) ನೋಡಿಕೊಳ್ಳುತ್ತದೆ. ಇತ್ತೀಚೆಗೆ ಭಾರತದ ಪ್ರಧಾನಿ ಅಮೆರಿಕಾಕ್ಕೆ ಭೇಟಿ ನೀಡಿದಾಗ ಇದೇ ಸಂಘಟನೆ ಸತ್ಕಾರಕೂಟ ಏರ್ಪಡಿಸಿದ್ದು, ಅದೇ ಸಭೆಯಲ್ಲಿ ವಾಜಪೇಯಿ ನಾನೊಬ್ಬ 'ಸ್ವಯಂ ಸೇವಕ' ಎಂದು ಸಮರ್ಥಿಸಿಕೊಂಡಿದ್ದು.


ವಿಶಾಲ ಜಾಗೃತಿ ಎನ್ನುವ ಪತ್ರಿಕೆಯಲ್ಲಿ ಬಂದಿರುವ ವರದಿಯ ಪ್ರಕಾರ ವಿಹೆಚ್‌ಪಿ-ಅಮೆರಿಕಾ 70 ರ ದಶಕದಲ್ಲಿ ಸ್ವಯಂ ಸೇವಾ ಸಂಘಟನೆಯಾಗಿ ನೊಂದಣಿ ಹೊಂದಿದ್ದು, ಅಮೆರಿಕಾದ ಪ್ರತಿಷ್ಠಿತ ಕಂಪನಿಗಳು, ಸ್ಥಳೀಯ ಸರಕಾರಗಳು, ಸಂಘಟನೆಗಳು ಮತ್ತು ವ್ಯಕ್ತಿಗಳು ದೇಣಿಗೆದಾರರಾಗಿರುತ್ತಾರೆ.

ಈ ದೇಣಿಗೆಯ ಮೂಲಕ ಬಂದ ಹಣವನ್ನು ಭಾರತದಲ್ಲಿ ಛಿದ್ರಕಾರಿ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆ ಎಂದು ಬೇರೆ ಹೇಳಬೇಕಾಗಿಲ್ಲ.

# ಬೆಂಬಲ ಬೆಲೆಗೆ ಆಗ್ರಹಿಸಿ ರಾಯಚೂರು, ಕೊಪ್ಪಳ ಜಿಲ್ಲೆ ಯಶಸ್ವಿ ಬಂದ್

ರಾಜ್ಯದಲ್ಲೇ ಅತ್ಯಂತ ಹೆಚ್ಚು ಭತ್ತ ಬೆಳೆಯುವ ಗಂಗಾವತಿ, ಸಿಂಧನೂರು, ಮಾನ್ವಿ ಹಾಗೂ ರಾಯಚೂರು ಪ್ರದೇಶಗಳಲ್ಲಿ ಮೆಕ್ಕೆ ಜೋಳ, ಸಜ್ಜೆ, ಉಳ್ಳಾಗಡ್ಡಿ, ತೊಗರಿ ಇತರೆ ಪ್ರಮುಖ ಬೆಳೆಗಳು. ಇಲ್ಲಿಯ ರೈತರು ಸಮೃದ್ಧ ಬೆಳೆ ಬೆಳೆದರೂ ಬೆಲೆಗಳು ಕುಸಿದು ತೀವ್ರ ಸಂಕಷ್ಟದಲ್ಲಿದ್ದಾರೆ. ತಮ್ಮ ಸಂಕಷ್ಟಗಳನ್ನು ಆಳುವ ಪ್ರಭುಗಳಿಗೆ ವಿವರಿಸಲು ಮತ್ತು ಭತ್ತ ಹಾಗೂ ಮೆಕ್ಕ ಜೋಳಕ್ಕೆ ಬೆಂಬಲ ಬೆಲೆ ನೀಡುವಂತೆ ಆಗ್ರಹಿಸಿ ರಾಯಚೂರು, ಮಾನ್ವಿ, ಕೊಪ್ಪಳ, ಸಿಂಧನೂರು, ಗಂಗಾವತಿ ಮೊದಲಾದ ಕಡೆ ಸಾವಿರಾರು ರೈತರು ಸ್ವಯಂ ಪ್ರೇರಣೆಯಿಂದ ಪ್ರತಿಭಟನೆ ನಡೆಸಿದಾಗ ರಾಯಚೂರಿನಲ್ಲಿ ರೈತರ ಮೇಲೆ ಘೋರ ಲಾಠಿ ಚಾರ್ಜ್ ಮಾಡಿದ ಹೈಟೆಕ್ ಸರಕಾರ, ಗಂಗಾವತಿಯಲ್ಲಿ ಭತ್ತ ಬೆಳೆಗಾರರ ಮೇಲೆ ಬರ್ಬರವಾಗಿ ಗೋಲಿಬಾರ್ ನಡೆಸಿತು. (ಕಳೆದ ಸಂಚಿಕೆಯಲ್ಲಿ ಈ ಬಗ್ಗೆ ಓದಿರುವಿರಿ). ಇದರಿಂದ ರೊಚ್ಚಿಗೆದ್ದ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ರೈತರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸಿಐಟಿಯು, ಎಸ್‌ಎಫ್‌ಐ, ಜನವಾದಿ ಮಹಿಳಾ ಸಂಘಟನೆ, ಸಿಪಿಐ(ಎಂ), ಜೆಡಿ(ಎಸ್)ಗಳ ಬೆಂಬಲದೊಂದಿಗೆ ನವೆಂಬರ್ 21 ರಂದು ಯಶಸ್ವಿಬಂದ್ ಆಚರಿಸಿದರು. ಅಂಗಡಿ, ಹೋಟೆಲ್, ಸಿನಿಮಾ ಸಂಪೂರ್ಣ ಬಂದ್ ಆಗಿದ್ದರೆ ರಸ್ತೆಗಳು ಬಿಕೋ ಎನ್ನುತ್ತಿದ್ದವು.

ಗಂಗಾವತಿಯಲ್ಲಿ 144 ಸೆಕ್ಷನ್ ಜಾರಿಗೊಳಿಸಿ ಬಂದ್ ವಿಫಲಗೊಳಿಸುವ ಯತ್ನದ ನಡುವೆ ಸಿಐಟಿಯು ನೇತೃತ್ವದಲ್ಲಿ ಬಜಾರ್ ಬಂದ್ ಆದರೆ ಎಸ್‌ಎಫ್‌ಐ ನೇತೃತ್ವದಲ್ಲಿ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ರೈತರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು.ಕಳೆದ ವರ್ಷದ ಇದೇ ಸಮಯದಲ್ಲಿ ಭತ್ತಕ್ಕೆ 600-700 ರೂ. ಕ್ವಿಂಟಾಲ್ ನಿಗದಿಯಾಗಿತ್ತು. ಈ ಬಾರಿ ಕೇವಲ 400 ರೂ.ಗೆ ಕುಸಿದು ರೈತರನ್ನು ಕಂಗೆಡಿಸಿದೆ. ಇದರಿಂದ ಧೃತಿಗೆಟ್ಟ ರೈತರು ಹಾಗೂ ರೈತ ಸಂಘಗಳು ನಿರಂತರ ಮನವಿ ಹಾಗೂ ಪ್ರತಿಭಟನೆ ಮೂಲಕ ಆಳುವ ಸರ್ಕಾರಕ್ಕೆ ಗಮನ ಸೆಳೆದು ಭತ್ತ ಹಾಗೂ ಮೆಕ್ಕಜೋಳಕ್ಕೆ ಬೆಂಬಲ ಬೆಲೆ ನೀಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಪಿಎಂಸಿ, ಕರ್ನಾಟಕ ಆಹಾರ ನಿಗಮ, ಭಾರತ ಆಹಾರ ನಿಗಮ ಮತ್ತು ನವೇದ್ ಮೂಲಕ ಖರೀದಿಸುವ ಭರವಸೆ ನೀಡಿದ್ದವು. ಆದರೆ ಇಲ್ಲಿಯವರೆಗೆ ಕೇಂದ್ರ ಬಿಜೆಪಿ ಸರ್ಕಾರವಾಗಲೀ, ರಾಜ್ಯದ ಕಾಂಗ್ರೆಸ್ ಸರ್ಕಾರವಾಗಲೀ ಇಲ್ಲಿಯವರೆಗೆ ಖರೀದಿ ಕೇಂದ್ರಗಳನ್ನು ತೆರೆಯದಿರುವುದು ಆಳುವ ಸರ್ಕಾರಗಳ ಗೋಸುಂಬೆತನವನ್ನು ಬಂದ್ ಸಂದರ್ಬದಲ್ಲಿ ರೈತ ಸಂಘ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ರಾಜ್ಯ ಸರ್ಕಾರ ಶೇ 40 ಭತ್ತ ಖರೀದಿಸುವ ಭರವಸೆ ಯನ್ನು ವಿಧಾನಸಭೆಯಲ್ಲಿ ನೀಡಿದ್ದರೂ ಕಾರ್ಯಗತ ಮಾಡುವ ಮನಸ್ಸು ಹೊಂದಿಲ್ಲದಿರುವುದು ರಾಜ್ಯ ಕೇಂದ್ರ ಸರ್ಕಾರಗಳ ರೈತ ವಿರೋಧಿ ನಿಲುವನ್ನು ಎತ್ತಿ ಹಿಡಿದಿದೆ ಎಂದು ರೈತ ಸಂಘ ಖಂಡಿಸಿದೆ. 'ಭತ್ತಕ್ಕೆ ಕ್ವಿಂಟಲ್‌ಗೆ ಈಗಿರುವ ಬೆಂಬಲ ಬೆಲೆಗೆ 100 ರೂ. ಸೇರಿಸಿ ನಿಗದಿ ಮಾಡಬೇಕು. ಖರೀದಿ ಕೇಂದ್ರಗಳನ್ನು ಗ್ರಾಮ ಪಂಚಾಯತ್ ಮಟ್ಟದಲ್ಲಿ ಶೀಘ್ರ ತೆರೆಯಬೇಕು. ಆಂಧ್ರ ಸರ್ಕಾರದ ಮಾದರಿಯಲ್ಲಿ ರೈತರಿಂದ ಭತ್ತ ಖರೀದಿಸಿ ಅಕ್ಕಿ ಮಾರಾಟ ಮಾಡಬೇಕು. ಬಯಲು ಸಂಗ್ರಹಗಾರಗಳನ್ನು ನಿರ್ಮಿಸಬೇಕೆಂಬ ಬೇಡಿಕೆ ಒಳಗೊಂಡಂತೆ 16 ಬೇಡಿಕೆಗಳುಳ್ಳ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಲಾಯಿತು.


ಮೆಕ್ಕಜೋಳ ಬೆಳೆದು ಬೀದಿಪಾಲಾದ ರೈತ

# ಗುಲಬರ್ಗಾ ಜಿಲ್ಲೆಯ ಗೂ

**ಭಯದಿಂದಲೇ ಸೋತುಸುಣ್ಣವಾಗಿದ್ದ ತಾಯಿ ಮತ್ತು ಅಣ್ಣ ಎಷ್ಟೇ ಗೋಗರೆದರೂ ಗೂಂಡಾಗಳು ಕೇಳಲಿಲ್ಲ. ಹಳ್ಳದ ದಡಕ್ಕೆ ಹೋಗಿ ಚಿನ್ನಪ್ಪನ ಹೆಣಕ್ಕೆ ಬೆಂಕಿ ಹಚ್ಚಿದರು. ಮಗನ ಹೆಣದ ಮೇಲೆ ಮೂರು ಹಿಡಿ ಮಣ್ಣು ಹಾಕುವ ಹಕ್ಕಿನಿಂದಲೂ ವಂಚಿತರಾದ ಆ ವೃದ್ಧ ತಾಯಿಯ ಕಣ್ಣೊಳಗಿನ ನೀರುಗಳೂ ಸತ್ತುಹೋಗಿದ್ದವು.**

**ಹೌದು! ಮೇಲೆ ಓದಿದ ಕ್ರೂರ ಘಟನೆ ನಡೆದಿದ್ದು ಕರ್ನಾಟಕ ರಾಜ್ಯದ ಗುಲಬರ್ಗ ಜಿಲ್ಲೆಯ ಆಳಂದ ತಾಲೂಕಿನ ಹೊಡಲ್ ಗ್ರಾಮದಲ್ಲಿ. ಈ ರಾಜ್ಯದ ಗೃಹಮಂತ್ರಿಗಳಾದ ಮಲ್ಲಿಕಾರ್ಜುನ ಖರ್ಗೆಯವರ ಜಿಲ್ಲೆಯಲ್ಲಿ. ರಾಜ್ಯದಲ್ಲಿಯೇ ಗುಲ್ಬರ್ಗ ಜಿಲ್ಲೆಯ ಪಾಳೇಪುಂಡರ ಹಾವಳಿಗೆ ಹೆಸರಾದ ಜಿಲ್ಲೆ. ದಿನ ಬೆಳಗಾದರೆ ಬಡವರ ಸೊಂಟ ಮುರಿದೇ ಬದುಕು ಸಾಗಿಸುವ ಜಮೀನ್ದಾರರದ್ದೇ ದರ್ಬಾರು ಇಲ್ಲಿ. ಈ ಪಾಳೇಗಾರರ ಬಾಲ ಬಡಿಯುತ ಜೊಲ್ಲು ಸುರಿಸುವವರದ್ದು ಮಾತ್ರ ಕಾರುಬಾರು ನಡೆಯುತ್ತದೆ.**

ನವೆಂಬರ್ ಒಂದನೇ ತಾರೀಖಿನಂದು ಬೆಳಗು ಮುಂಜಾನೆ ಕತ್ತಲು ಸೀಳಿ ಹುಟ್ಟಿದ ಸೂರ್ಯ ಮೊದಲು ನೋಡಿದ್ದು ಆಳಂದ ತಾಲೂಕಿನ ಹೊಡಲ್ ಗ್ರಾಮದಲ್ಲಿ ಅಮಾನುಷವಾಗಿ ಚಿತ್ರಹಿಂಸೆಗೊಳಗಾಗಿ ಮನೆಯ ಬಾಗಿಲ ಮುಂದೆ ಬಿದ್ದ ಚಿನ್ನಪ್ಪನ ಶವವನ್ನು. ಆ ಹಳ್ಳಿಯೆಂಬೋ ತಳ್ಳಿಯಲ್ಲಿ ಚಿನ್ನಪ್ಪನ ವಿಧವೆ ತಾಯಿಯೊಬ್ಬಳೇ ಮಗನ ಹೆಣವನ್ನು ಬಾಚಿ ತಬ್ಬಿಕೊಂಡು ಮುಗಿಲು ಬಿರಿವಂತೆ ಗೊಳ್ಳೊ ಎಂದು ರೋಧಿಸುತ್ತಿದ್ದಳು. ಒಂದೇ ಒಂದು ನರಪಿಳ್ಳೆಯೂ ಆ ಮುದುಕಿಯ ಸಂಕಟಕ್ಕೆ ಕಿವಿಯಾಗಲಿಲ್ಲ. ಕಡೆ ಪಕ್ಷ ನೋಡುವ ಕಣ್ಣಾಗಿಯೂ ಬರಲಿಲ್ಲ. ಎಲ್ಲ ಬಾಗಿಲುಗಳು, ಕಿಟಕಿಗಳೂ ಗುಟ್ಟನ್ನು ಹೊಟ್ಟೆಯೊಳಗಿಟ್ಟುಕೊಂಡು ಮುಚ್ಚಿಕೊಂಡಿದ್ದವು. ಸುಳಿವ ಗಾಳಿಗೆ ಬಾಯಿಲ್ಲ, ಓಡುವ ಕಾಲಚಕ್ರವೂ ಕುಂಟುತ್ತಿತ್ತು. ಅಲ್ಲಿ ಎಲ್ಲವೂ ನಿಗೂಢವಾಗಿತ್ತು!

ಬೆಳಕು ಹರಿವ ಮುನ್ನ ಜೀಪು ತರಲು ಪಕ್ಕದ ಹಳ್ಳಿಗೆ ಹೋಗಿದ್ದ ಮೃತ ಚಿನ್ನಪ್ಪನ ಅಣ್ಣ ಹಂಪಣ್ಣ ಬರುವವರೆಗೆ ಚಿನ್ನಪ್ಪನ ಪ್ರಾಣಪಕ್ಷಿ ಹಾರಿಹೋಗಿತ್ತು. ಎದೆಗೂಡೊಳಗೆ ಅವಿತ ದುಃಖ ಕಟ್ಟೆ ಒಡೆಯಿತು. ತಾಯಿ ಅಣ್ಣ ಮತ್ತು ಜೊತೆ ಬಂದಿದ್ದ ಮಲ್ಲಿನಾಥ ಮೂವರು ನೆಂಟರು ಬೀಗರಿಗೆ ಸುದ್ದಿ ಕಳಿಸುವ ಚಿಂತೆಯಲ್ಲಿದ್ದಾಗಲೇ ಭರ್‍ರೆಂದು ಗೂಂಡಾಗಳ ಟ್ರ್ಯಾಕ್ಟರ್ ಬಂತು. ಗೋಣಿ ಚೀಲವೊಂದನ್ನು ಎರಡು ಕೊನೆಗೆ ಹೊಲಿದು ಹೆಣವನ್ನು ಎತ್ತಿ ಅದರಲ್ಲಿ ಹಾಕಿದರು ಬಂದ ಗೂಂಡಾಗಳು.ಟ್ರ್ಯಾಕ್ಟರ್‌ನಲ್ಲಿ ಕಟ್ಟಿಗೆ-ಸೀಮೆ ಎಣ್ಣೆ ಸಿದ್ದವಾಗಿತ್ತು. ಹೆಣವನ್ನು ಹೊತ್ತ ಟ್ರ್ಯಾಕ್ಟರ್ ಜೊತೆಗೆ 8 ಜನ ಗೂಂಡಾಗಳು ಊರ ಹೊರಗಿನ ಹಳ್ಳದ ಕಡೆಗೆ ದೌಡಾಯಿಸಿದರು. ಭಯದಿಂದಲೇ ಸೋತುಸುಣ್ಣವಾಗಿದ್ದ ತಾಯಿ ಮತ್ತು ಅಣ್ಣ ಎಷ್ಟೇ ಗೋಗರೆದರೂ ಗೂಂಡಾಗಳು ಕೇಳಲಿಲ್ಲ. ಹಳ್ಳದ ದಡಕ್ಕೆ ಹೋಗಿ ಚಿನ್ನಪ್ಪನ ಹೆಣಕ್ಕೆ ಬೆಂಕಿ ಹಚ್ಚಿದರು. ಮಗನ ಹೆಣದ ಮೇಲೆ ಮೂರು ಹಿಡಿ ಮಣ್ಣು ಹಾಕುವ ಹಕ್ಕಿನಿಂದಲೂ ವಂಚಿತರಾದ ಆ ವೃದ್ಧ ತಾಯಿಯ ಕಣ್ಣೊಳಗಿನ ನೀರುಗಳೂ ಸತ್ತುಹೋಗಿದ್ದವು. ಹೆಣ ಬೇಗ ಸುಡಲಿಲ್ಲವೆಂದು ಅವಸರದಲ್ಲಿದ್ದ ಕೊಲೆಗಡುಕರು ಅರೆಬರೆ ಹೆಣವನ್ನು ಹಳ್ಳಕ್ಕೆ ಹಾಕಲೂ ಪ್ರಯತ್ನಸಿದರು. ಇನ್ನೇನು ಕಣ್ಣ ಮುಂದಿನಿಂದ ಚಿನ್ನಪ್ಪನ ಹೆಣ ನಾಶ ಮಾಡಿದೆವೆಂದು ಗೂಂಡಾಗಳು ಕೇಕೆ ಹಾಕುತ್ತ ಊರು ಸುತ್ತು ಹಾಕಿದರು. ಮೌನದ ಪ್ರತೀಕವೆ ಆಗಿ ನಿಂತ ಊರಿಗೆ ಬಾಯಿ ಬಿಡಬಾರದೆಂಬ ಎಚ್ಚರಿಕೆಯ ಗುಟುರು ಹಾಕಿ ಹೋದರು. ಚಿನ್ನಪ್ಪನ ವಿಧವೆ ತಾಯಿಯೂ, ನಿರಾಧಾರಿ ಅಣ್ಣನೂ ನೆಲದ ಮೇಲೆ ಹನಿದ ತಮ್ಮನ ರಕ್ತದ ಹನಿಗಳನ್ನು ದಾಟುತ್ತಾ ಮನೆ ಸೇರಿ ಗೂಡೊಳಗಿನ ಗುಬಚ್ಚಿಯಂತೆ ಮುದುರಿ ಕುಳಿತರು. ಕಾಲದ ಹಕ್ಕಿ ಶೋಕಗೀತೆ ನುಡಿಯುತ್ತಿತ್ತು.

ಹೌದು! ಮೇಲೆ ಓದಿದ ಕ್ರೂರ ಘಟನೆ ನಡೆದಿದ್ದು ಕರ್ನಾಟಕ ರಾಜ್ಯದ ಗುಲಬರ್ಗ ಜಿಲ್ಲೆಯ ಆಳಂದ ತಾಲೂಕಿನ ಹೊಡಲ್ ಗ್ರಾಮದಲ್ಲಿ. ಈ ರಾಜ್ಯದ ಗೃಹಮಂತ್ರಿಗಳಾದ ಮಲ್ಲಿಕಾರ್ಜುನ ಖರ್ಗೆಯವರ ಜಿಲ್ಲೆಯಲ್ಲಿ. ರಾಜ್ಯದಲ್ಲಿಯೇ ಗುಲ್ಬರ್ಗ ಜಿಲ್ಲೆಯ ಪಾಳೇಪುಂಡರ ಹಾವಳಿಗೆ ಹೆಸರಾದ ಜಿಲ್ಲೆ. ದಿನ ಬೆಳಗಾದರೆ ಬಡವರ ಸೊಂಟ ಮುರಿದೇ ಬದುಕು ಸಾಗಿಸುವ ಜಮೀನ್ದಾರರದ್ದೇ ದರ್ಬಾರು ಇಲ್ಲಿ. ಈ ಪಾಳೇಗಾರರ ಬಾಲ ಬಡಿಯುತ ಜೊಲ್ಲು ಸುರಿಸುವವರದ್ದು ಮಾತ್ರ ಕಾರುಬಾರು ನಡೆಯುತ್ತದೆ. ಅಂತಲೇ ಜಿಲ್ಲೆಯ ಒಟ್ಟು 13 ಲಕ್ಷ ಹೆಕ್ಟೇರ್ ಸಾಗುವಳಿ ಯೋಗ್ಯ ಭೂಮಿಯಲ್ಲಿ 4 ಲಕ್ಷ 23 ಸಾವಿರ ಎಕರೆ ಭೂಮಿ ಜಮೀನಾರರ ಕೈಯಲ್ಲಿದೆ. ಉಳಿದೆಲ್ಲ 23 ಸಾವಿರ ಪಾಳೆಗಾರ, ಪ್ರಮುಖ ಆರ್ಥಿಕ ಸಂಸ್ಥೆಗಳು, ವಿದ್ಯಾ ಸಂಸ್ಥೆಗಳು, ಮುಖ್ಯ ವ್ಯಾಪಾರವಹಿವಾಟುಗಳು ಕೂಡ ಈ ಜಮೀನ್ದಾರರದ್ದೆ. ನೀತಿ ನಿರೂಪಣಾ ಸ್ಥಾನಗಳಲ್ಲೂ ಏನೆಲ್ಲ ಕಚಡಾ ಹಿಕಮತ್ತು ಮಾಡಿ ತಾವೇ ವಿರಾಜಮಾನರಾಗಿರುವವರು. ಆದ್ದರಿಂದಲೇ ಈ ಜಿಲ್ಲೆಯಲ್ಲಿ ಬಡತನ, ನಿರುದ್ಯೋಗ, ಅನಕ್ಷರತೆ, ಮೂಢನಂಬಿಕೆ, ಕೊಲೆಗಡುಕ ಸಂಸ್ಕೃತಿ, ಅಸಮಾನತೆ ತಾಂಡವವಾಡುತ್ತಿದೆ. ವಲಸೆ ಹೋಗುವ ಕೂಲಿಕಾರ್ಮಿಕರು, ದೌರ್ಜನ್ಯಕ್ಕೆ ತುತ್ತಾಗುತ್ತಲೇ ಶ್ರಮ ಮಾರಿಕೊಂಡು ಬದುಕುವ ಮಹಿಳೆಯರು ಇಲ್ಲಿ ಅಸಂಖ್ಯಾತ. ಈ ಜಿಲ್ಲೆಯೆಂಬೋ ಜಗತ್ತಿನೊಳಗೆ ಲಿಕ್ಕರ್ ದೊರೆಗಳು, ರೌಡಿ ಗ್ಯಾಂಗುಗಳು, ರೋಡ್ ರೌಡಿಗಳು, ಕಾಸಿಗಾಗಿ(ಹಣಕ್ಕಾಗಿ) ಹೊಟ್ಟೆಯೊಳಗೆ ಚಾಕು ಹಾಕುವ ಕೊಲೆಗಡುಕರೂ, ಭೂಗತ ಮಂದಿಯೊಂದಿಗೆ ಅವಿನಾಭಾವ ಸಂಬಂಧ ಉಳ್ಳವರೂ..... ಹೀಗೆ ಎಲ್ಲ ಅನಿಷ್ಟಗಳೂ ತಲೆ ಎತ್ತಿವೆ-ಎತ್ತುತ್ತಿವೆ. ಇಂತಹ ಹೇಯ ಮತ್ತು ಕ್ರೂರ ಕೂಪದಿಂದಲೇ ಉದಯವಾದವನು ಧರ್ಮರಾಜ್.

**ಕ್ರಿಮಿನಲ್ ಚರಿತ್ರೆಯ ರೌಡಿ:**

ಯಾರೀ ಧರ್ಮರಾಜ್? ಇವನೊಬ್ಬ ರಸ್ತೆ ರೌಡಿ. ಧರ್ಮರಾಜನ ಅಪ್ಪ ದ್ಯಾವಪ್ಪ ಏನೆಲ್ಲ ಕರ್ಮಕಾಂಡಗಳನ್ನು ಮಾಡುತ್ತಲೇ ಅಚಾನಕ್ಕಾಗಿ ಎಂ.ಎಲ್.ಎ ಆಗಿದ್ದನು(ಮೀಸಲು ಕ್ಷೇತ್ರವಾದ್ದರಿಂದ) ಧರ್ಮರಾಜ ಸಹ ತನ್ನ ಸಣ್ಣ ವಯಸ್ಸಿನಲ್ಲಿಯೇ ಮನೆತನದ ಪರಂಪರೆ ಮುಂದುವರಿಸಲು ಸಜ್ಜಾಗಿ ಗುಲಬರ್ಗಾ ನಗರದಲ್ಲಿ ರೌಡಿ ಪ್ರಾಕ್ಟೀಸ್ ಮಾಡುತ್ತಿದ್ದನು. ಈಗ ಆಳಂದ ತಾಲೂಕಿನ ಚಿಂಚನಸೂರು ಮತ್ತು ವಿ.ಕೆ.ಸಲಗರದ ಸುತ್ತಮುತ್ತ ಒಕ್ಕಲಿಗರು(ರೈತರು) ಮತ್ತು ಯುವಕರೆಲ್ಲ ಒಂದಾಗಿ ಸಂಘ ಕಟ್ಟಿಕೊಳ್ಳುತ್ತಿದ್ದರು. ಜನತೆಯ ಒಗ್ಗಟ್ಟನ್ನು ಕಂಡ ಕೂಡಲೇ ಸಾವಿರ ನೆರಳು ಕಂಡಂತೆ ಭಯ ಬೀಳುವ ಜಮೀನ್ದಾರರು ಕೂಡಲೇ ತಮ್ಮ ರಕ್ಷಣೆಗಾಗಿ ಸಂಘದ ಶಕ್ತಿಯನ್ನು ಮುರಿಯಲಿಕ್ಕಾಗಿ ಮತ್ತು ಪಾಳೇಗಾರಿ ಪರಂಪರೆ ಮುಂದುವರಿಸಲಿಕ್ಕಾಗಿ ಸರಿಯಾದ ದುಷ್ಟನ ಹುಡುಕಾಟದಲ್ಲಿದ್ದರು. ನಗರದಲ್ಲಿ ಛೋಟಾ ದಾದಾಗಿರಿ ಮಾಡಿಕೊಂಡಿದ್ದ ಮಾಜಿ ಎಂ.ಎಲ್.ಎ ಮಗ ಧರ್ಮರಾಜ ಅವರ ಕಣ್ಣಿಗೆ ಬಿದ್ದ. ಅವನನ್ನು ಹಿಡಿದು ತಂದು ಸರಿಯಾಗಿ ಕೊಬ್ಬಿಸಿದರು. ಉಳ್ಳವರ ನೆರಳಲ್ಲಿ ಸೊಕ್ಕಿದ ಧರ್ಮರಾಜನನ್ನು ಅವರ ಕೃಪಾಕಟಾಕ್ಷದಲ್ಲಿಯೇ ಬಡವರನ್ನು ತುಳಿಯುತ ವಿ.ಕೆ.ಸಲಗರ ಮಂಡಲ್ ಪಂಚಾಯ್ತಿಗೆ ಚೇರ್‌ಮನ್ನನಾಗಿ ಅವಿರೋಧವಾಗಿ ಆರಿಸಿ ತರಲಾಯಿತು.

ಆಗ ಶುರುವಾಯಿತು ನೋಡಿ No-Democracy & ಕ್ರೈಂ ಟೈಂ. ಆದರೆ ಜನ ಅವನ 5-6 ಲಕ್ಷ ರೂ. ವ್ಯವಹಾರದ ವಿರುದ್ಧ 5 ದಿನಗಳ ಕಾಲ ಪಂಚಾಯ್ತಿಗೆ ಬೀಗ ಜಡಿದು ಧಿಕ್ಕಾರ ಹೇಳಿದರು. ಹೋರಾಟದ ನೇತೃತ್ವ ಪ್ರಾಂತ ರೈತ ಸಂಘದ ಮುಖಂಡ ಕಾ. ಮಾಧುರಾಯ ಧನ್ನೂರ ವಹಿಸಿದ್ದರು. ಅಲ್ಲಿಯವರೆಗೆ ಸಚಿವರುಗಳವರೆಗೂ ಕೈಕಾಲು ಚಾಚಿದ್ದ ಧರ್ಮರಾಜ ಅಂದಿನ ವೈದ್ಯಕೀಯ ಸಚಿವರ ರಾಮಕೃಷ್ಣ ಕುಮ್ಮಕ್ಕು ಪಡೆದನೆಂದು ಜನ ಮಾತನಾಡಿಕೊಳ್ಳುತ್ತಾರೆ. ಇದ್ದಕ್ಕಿದ್ದಂತೆ ಒಂದು ದಿನ ನಡು ರಸ್ತೆಯಲ್ಲಿ ಕಾ. ಮಾಧುರಾಯರನ್ನು ಕೊಲೆ ಮಾಡಿಸಿದನು. ಆದರೆ ಜನ ಹೇಡಿಗಳಂತೆ ಮೌನವಾಗಲಿಲ್ಲ. ಧರ್ಮರಾಜನ ದುಷ್ಟತನದ ವಿರುದ್ಧ ಸೆಟೆದು ನಿಂತರು. ಹುತಾತ್ಮ ಸಂಗಾತಿ ಮಾಧುರಾಯರ ಹೆಸರಿನ ಜ್ಯೋತಿಯು ಸಂಚಾರವಾಯಿತು.

ಜನರ ನಡುವೆ ಜಾಗೃತಿಯ ಅಲೆ ಏಳುತ್ತಿದ್ದಂತೆ ಇನ್ನು ತನಗೆ ಅಲ್ಲಿ ತಳವಿಲ್ಲ ಎಂದರಿತ ಧರ್ಮರಾಜ ಹಳ್ಳಿಯ ಪಾಳೇಗಾರ ಅಭಯ ಹಸ್ತ ಇಟ್ಟುಕೊಂಡೇ ನಗರದ ದೊಡ್ಡ ಸಾಹುಕಾರರ ಕಟ್ಟೆಗೆ ಬಂದನು. ಈ ಸಾಹುಕಾರರೋ ಕಾಂಗ್ರೆ-ಬಿಜೆಪಿ-ಜನತಾದಳ ಹೀಗೆ ರಾಜಕೀಯ ಪಕ್ಷಗಳ ದೊರೆಗಳು. ಈ ದೊರೆಗಳಿಗಂತೂ ದುಡಿವ ಜನ ಮತ್ತು ಜನಚಳುವಳಿಯನ್ನು ಕಂಡರಾಗುವುದಿಲ್ಲ. ದಾಸೋಹಿ ಶರಣಬಸಪ್ಪ ಅಪ್ಪ ಮತ್ತು ಖಾಜಾ ಬಂದೇ ನವಾಜರಂತಹ ಮಹಾನ್ ವಿಭೂತಿಗಳನ್ನು ಕಂಡ ಕಲ್ಬುರ್ಗಿ ಜಿಲ್ಲೆಯನ್ನು ಲೂಟಿ ಹೊಡೆಯಬೇಕೆಂಬ ಹುನ್ನಾರ ಈ ದೊರೆಗಳದ್ದು. ಇಂತಹವರಿಗೆ ಅನಾಯಾಸವಾಗಿ ಬಂದ ಧರ್ಮರಾಜನ ಮೂಲಕ ಇದ್ದ ವ್ಯವಸ್ಥೆಯನ್ನು ಇನ್ನಷ್ಟು ಹಿಂದಕ್ಕೊಯ್ಯಲು ಸಂಚು ಹೂಡಿದರು. ನಗರ-ಹಳ್ಳಿ ಹೀಗೆ ಎಲ್ಲವನ್ನೂ ಕಂಡುಂಡ ಧರ್ಮರಾಜ ಕಂಡ ಕಂಡ ಸಜ್ಜನರ ಮೇಲೆ ವಿನಾಕಾರಣ ಧಾಳಿ ಮಾಡುವುದು ರೂಢಿಯಾಗಿಸಿಕೊಂಡ. ಕುರಿ-ಕೋಣಗಳನ್ನು ತಿಂದು ಪಾಕೀಟ್ ಸಾರಾಯಿ ಕುಡಿದು ಮಜಬೂತಾಗಿ ಮೈ ಬೆಳೆಸಿಕೊಂಡವನಿಗೆ ತೀಟೆ ತೀರಿಸಿಕೊಳ್ಳಲು ಅನೇಕ ಅಮಾಯಕ ಹೆಣ್ಣು ಮಕ್ಕಳ ಬದುಕು ಬೆಂಗಾಡಾಗಿಸಿದ. ಇವನ ದರ್ಪಕ್ಕೆ




## ನಡೆದ ಘಟನೆ ಏನು?

ಚಿನ್ನಪ್ಪನ ಹತ್ಯೆ ಕ್ರೂರ ಮಾತ್ರವಲ್ಲ ಬರ್ಬರವಾಗಿದೆ. ಅಮಾನುಷವಾಗಿದೆ. 31 ರ ಅಕ್ಟೋಬರ್‌ನಂದು ಧರ್ಮರಾಜನಿಗೆ ಮೈ ಮಣ ಮಣ ಅನ್ನುತ್ತಿರಬೇಕು. ಹೊಡಲಾಕ್ಕೆ ಹೋಗಿ ಮೈ ಮಾಲಿಷ್ ಮಾಡಿಸಿಕೊಳ್ಳಲು ಕಲ್ಯಾಣಪ್ಪ ಎಂಬುವವರಿಗೆ ಕರೆ ಕಳಿಸಿದ. ಇವನು ಕಳಿಸಿದ ಸೇವಕನು 'ಏ ಕಲ್ಯಾಣಿ ಸಾಹುಕಾರರು ಬಾ ಅಂತಾರ' ಅಂದ. ಅಲ್ಲಿಯೇ ಇದ್ದ ಚನ್ನಪ್ಪ "ಹಿರಿಯರಿಗೆ ಏಕವಚನದಲ್ಲಿ ಕರೀಬಾರುದು. ಗೌರವದಿಂದ ಮಾತಾಡು" ಎಂದು ಬುದ್ಧಿವಾದ ಹೇಳಿದನು. ಈ ಮಾತನ್ನು ಒಯ್ದು ಸಾಹುಕಾರರಿಗೆ ಮುಟ್ಟಿಸಿದ. ಇಷ್ಟೇ ಮಾತಿಗೆ ಸಾಹುಕಾರ ಧರ್ಮರಾಜನಿಗೆ ಸಿಟ್ಟು ಬಂದೀತೆ....? ಇಲ್ಲ. ಚಿನ್ನಪ್ಪ ಸ್ವಭಾವತಃ ಸ್ವಾಭಿಮಾನಿ. ಪಿಯುಸಿ ಓದಿಕೊಂಡು ಹಳ್ಳಿಗೆ ವಾಪಾಸ್ ಹೋಗಿದ್ದನು. ಪ್ರಾಂತ ರೈತ ಸಂಘದ ಅನೇಕ ಕಾರ್ಯಕ್ರಮ, ರ‍್ಯಾಲಿಗಳಲ್ಲಿ ಭಾಗವಹಿಸಿದ್ದನು. ಕೆಲವು ಸಾರಿ ಸಂಘದ ಕರಪತ್ರಗಳನ್ನು ಹಂಚಿದ್ದರಿಂದ ಧರ್ಮನ ಬೆಂಬಲಿಗರು ಕುಪಿತಗೊಂಡಿದ್ದಿದೆ. ಹೀಗಿರುವುದರಿಂದಲೇ ಚಿನ್ನಪ್ಪನ ಮೇಲೆ ಧರ್ಮರಾಜನಿಗೆ ಎಲ್ಲಿಲ್ಲದ ಆಕ್ರೋಶ ಎದ್ದು ಅವನನ್ನು ಬರ ಹೇಳಿದನು. ಚಿನ್ನಪ್ಪನ ಅಣ್ಣನಾದ ಹಂಪಣ್ಣನೂ ಆಗ ಅಲ್ಲಿಯೇ ಇರುವುದರಿಂದ ಜೊತೆಗೆ ಹೋದನು. ಹೋದ ಕೂಡಲೇ ಚಿನ್ನಪ್ಪನಿಗೆ ಬಟ್ಟೆ ಕಳಚಲು ಧರ್ಮ ಆದೇಶಿಸಿದ. ಮುಂದಿನ ಅಪಾಯ ಅರಿತ ಹಂಪಣ್ಣ "ನನ್ ತಮ್ಮ ಏನೂ ತಪ್ಪ ಮಾಡಿಲ್ರೀ ಸಾಹುಕಾರ್ರೇ..." ಎಂದು ಕಾಲು ಹಿಡಿಯತೊಡಗಿದ. ಅಣ್ಣನಿಗೆ ಕಾಲಿಂದ ಒದ್ದು ತಮ್ಮನಾದ ಚಿನ್ನಪ್ಪನಿಗೆ ತಲೆ ಕೆಳಗೆ ಕಾಲು ಮೇಲೆ ಮಾಡಿ ಕಟ್ಟಲು ತನ್ನ ಸಂಗಡಿಗರಿಗೆ ಹೇಳಿದನು. ಮೈಯೊಳಗಿನ ದುಷ್ಟ ರಾಕ್ಷಸ ಹೆಡೆ ಎತ್ತಿದ್ದನು. ಸರಿ, ಸುರುವಾಯಿತು ಹೊಡೆಯುವುದು. ಅಣ್ಣನಾದ ಹಂಪಣ್ಣನು ಪರಿಪರಿಯಾಗಿ ಬೇಡಿಕೊಂಡರೂ ಧರ್ಮನ ಕಲ್ಲೆದೆ ಕರಗಲಿಲ್ಲ. ಇನ್ನಷ್ಟು ಉತ್ತೇಜಿತನಾಗಿ ಧಾಳಿ ಮಾಡತೊಡಗಿದ. 'ತನ್ನ ತಮ್ಮ ಉಳಿಯುವುದಿಲ್ಲ' ಎಂದುಕೊಂಡ ಹಂಪಣ್ಣ ಬಾಗಿಲು ತೆರೆದು ಓಡಿಬಂದನು. ಮನೆಯಲ್ಲಿದ್ದ ವೃದ್ಧ ತಾಯಿಗೆ ತಮ್ಮನ ಮೇಲೆರಗಿದ ಗಂಡಾಂತರ ಹೇಳಿದನು. ತಾಯಿಯು ತನ್ನ ಮಗನ ಜೀವ ಉಳಿಸಲು ಕಂಡ ಕಂಡವರ ಕೈಕಾಲು ಹಿಡಿದರೂ ಧರ್ಮನ ದುಷ್ಟತನಕ್ಕೆ ಹೆದರಿ ಯಾರೊಬ್ಬರೂ ಸಹಾಯ ಮಾಡಲು ಮುಂದೆ ಬರಲಿಲ್ಲ.

ಅತ್ತ ಚಿನ್ನಪ್ಪನ ಮೈಯಿಂದ ರಕ್ತದ ಕೋಡಿ ಹರಿದರೂ ಸ್ವಾಭಿಮಾನಿ ಚಿನ್ನಪ್ಪ ಧರ್ಮನ ಕಾಲು ಹಿಡಿವ ಹೇಡಿತನ ಮಾಡಲಿಲ್ಲ. ಹೊಡೆದು ಹೊಡೆದೂ ಸುಸ್ತಾದ ಕ್ರೂರಿಗಳು ಇನ್ನೇನು ಸಂಪೂರ್ಣ ಸತ್ತಂತಾಗಿದ್ದ ಚಿನ್ನಪ್ಪನನ್ನು ಹೊತ್ತು ತಂದು ಅವನ ಮನೆಯ ಮುಂದೆ ಎಸೆದು ಹೋದರು. ತಾಯಿ-ಅಣ್ಣ ಚಿನ್ನಪ್ಪನನ್ನು ತಬ್ಬಿ ಭೋರ್ಗರೆದು ಅತ್ತರು. ಇನ್ನೂ ಎದೆ ಬಡಿತವಿದ್ದರಿಂದ ಹಂಪಣ್ಣ ಜೀಪು ತರಲು ಓಡಿದ. ಬರುವುದರೊಳಗಾಗಿ ಚಿನ್ನಪ್ಪನ ಜೀವ ಇಲ್ಲವಾಯಿತು. ಸುದ್ದಿ ತಿಳಿದ ಕೊಲೆಗಡುಕರು ಮತ್ತೆ ಬಂದರು ಹೆಣ ಒಯ್ದು ಸುಟ್ಟುಹಾಕಿದರು.

# ...ಡಾ ರಾಜಕೀಯ

...ದುಷ್ಟಕೂಟಕ್ಕೆ ಹೆದರಿದ ಗಂಡಸರೂ ತುಟಿ ಬಿಟ್ಟಿನ್ನಲಿಲ್ಲ. ಜನರ ಸಹನೆ ಧರ್ಮರಾಜನ ಅಟ್ಟಹಾಸಕ್ಕೆ ಮಣೆ ಹಾಕಿದಂತಾಯಿತು. ಹೆಣ್ಣುಮಕ್ಕಳ ಬದುಕಿಗೆ ಕೊಳ್ಳಿ ಇಡುವುದಲ್ಲದೆ ಅನೇಕ ಹೆಂಗಸರ ಜೊತೆ ತಲೆ ಫೋಟೋ ಇಟ್ಟುಕೊಳ್ಳುತ್ತಿದ್ದನೆಂದು ಪೋಲೀಸ್ ಮೂಲಗಳು ಹೇಳುತ್ತವೆ.



ಕ್ರಿಮಿನಲ್ ಚರಿತ್ರೆಯ ಧರ್ಮರಾಜ್

**ಧರ್ಮರಾಜ ಒಬ್ಬ ಗೂಂಡಾನೂ ಹೌದು ಜಮೀನ್ದಾರನೂ ಹೌದು**

ಈತನು ವಿ.ಕೆ.ಸಲಗರ ಮಂಡಲ್ ಪಂಚಾಯ್ತಿ ಅಧಿಕಾರ ಕೈಗೆ ದಕ್ಕುತ್ತಲೇ ಅವುಲು ನೆತ್ತಿಗೇರತೊಡಗಿತು. ಮುಗ್ಧ ಹಳ್ಳಿಗರನ್ನು ಸುಲಭದಲ್ಲಿ ಮೋಸ ಮಾಡುವ ಮತ್ತು ಭಯದ ದವಡೆಗೆ ಒಡ್ಡುವಂತಹ ಗೂಂಡಾಗಿರಿ ತಂತ್ರಗಳನ್ನು ಜಾರಿ ಮಾಡತೊಡಗಿದನು. ಜನತೆಯ ಬಾಯ್ಮುಚ್ಚಿಸುತ್ತಲೇ ಚಾಕು, ತಲವಾರು, ಚೈನುಗಳನ್ನು ತಿರುಗಿಸುತ್ತ ಸಿರಚಂದ್ರ ಗ್ರಾಮ ಪಂಚಾಯ್ತಿಯಲ್ಲಿ ತನ್ನ ಎದುರು ಯಾರೇ ನಾಮಪತ್ರ ಸಲ್ಲಿಸದಂತೆ ಮಾಡಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿಸಿಕೊಂಡ. ಹೇಗಿದೆ ನೋಡಿ ಪ್ರಜಾಪ್ರಭುತ್ವವನ್ನು ಮೆಟ್ಟಿ ನಡೆದ ಕುತಂತ್ರ.

ಅಧಿಕಾರದ ಸ್ಥಾನದಲ್ಲಿದ್ದೇ ಜನರ ಆಸ್ತಿಯನ್ನು ಸಲೀಸಾಗಿ ಲೂಟಿ ಮಾಡುವಂತಹ ದುಷ್ಟ ಕೆಲಸಕ್ಕೂ ಕೈ ಹಾಕಲು ಧರ್ಮರಾಜ ಹಿಂದೆ ಮುಂದೆ ನೋಡಲಿಲ್ಲ. ಆಳಂದ ತಾಲೂಕಿನ ಲಿಂಗಯ್ಯನವಾಡಿ ಗ್ರಾಮದ ಲಕ್ಷ್ಮಣ ಎಂಬ ಅಮಾಯಕ ಒಕ್ಕಲಿಗನ ಹೊಲದಲ್ಲಿ ರಾಶಿ ಮಾಡಿ ಇಟ್ಟಿದ್ದ 30 ಚೀಲ ಸೂರ್ಯಪಾನ್ ಅನ್ನು ಮರಿಗೂಂಡಾ ಆಗಿರುವ ಬಾಬು(ತಂದೆ ಬಸವಣ್ಣಪ್ಪ) ಇಂಡಿ ಎನ್ನುವವನೊಂದಿಗೆ ಸೇರಿ ಧರ್ಮರಾಜ್ ಲೂಟಿ ಮಾಡಿರುವನು(ಲಕ್ಷ್ಮಣ ಮಾಂಗ 1994 ರಲ್ಲಿ ಪೋಲಿಸ್ ಕೇಸ್ ಮಾಡಿರುವನು)

ಹೀಗೆ ಒಂದೆಡೆ ಕಾರ್ಯಕ್ರಮಗಳಲ್ಲಿ ಭಾಷಣ ಜೈಕಾರ, ಇನ್ನೊಂದೆಡೆ ದಾದಾಗಿರಿ, ಮತ್ತೊಂದೆಡೆ ಜನಸಾಮಾನ್ಯರ ಲೂಟಿ - ಜೆ.ಇ(ಜ್ಯೂನಿಯರ್ ಇಂಜನಿಯರ್)ಗಳ ಲೂಟಿ ವ್ಯಾಪಕವಾಗಿ ನಡೆಸತೊಡಗಿದನು. ಹೊಡೆದು-ಬಡಿದು ಸಹ ಒಬ್ಬ ಜೆ.ಇ. ಜೇಬಿನಿಂದ 20 ಸಾವಿರ ಹಣ ಹಾರಿಸಿದ್ದಾನೆ ಈ ಪುಂಡ. ಮಾತ್ರವಲ್ಲ, ಈತನ ಇಂತಹ ಎಲ್ಲ ಹೇಯ ಕೃತ್ಯಗಳಿಗೆ ಯಾರಾದರೂ ಚೂರೇ ಚೂರು ವಿರೋಧಿಸಿ ಕಮಕ್-ಕಿಮಕ್ ಅಂದರೂ ಅಂಥವರ ಕೈ-ಕಾಲು ಮುರಿದು ಹಾಕಿದ್ದಾನೆ. ಅವರ ಕೈಯೋ-ಕಾಲಿನದೋ ಬೆರಳುಗಳನ್ನು ಈರುಳ್ಳಿ(ಉಳ್ಳಾಗಡ್ಡಿ) ಕತ್ತರಿಸುವಂತೆ ಕತ್ತರಿಸಿ ಎಸೆದಂತಹ ಕ್ರೂರಿ ಈತ.

ಇಷ್ಟೆಲ್ಲಾ ಚೀಪ್ ದಾದಾಗಿರಿ, ಕ್ರೂರ ದಾದಾಗಿರಿ ಮಾಡಿಕೊಂಡಿರುವ ಈತ ಕೇವಲ ಜಮೀನ್ದಾರರ ಭಂಟನೋ ಅಥವಾ ಸ್ವತಃ ಜಮೀನ್ದಾರನೋ.....? ಈತ ಬರಬರುತ್ತ ಸ್ವತಃ ಜಮೀನ್ದಾರನೇ. ಧರ್ಮರಾಜನಿಗೆ ಸ್ವಯಂ ಹೊಡಲ್ ಗ್ರಾಮದಲ್ಲಿ 80 ಎಕ್ರೆ ಜಮೀನು ಇದೆ. ಗುಲಬರ್ಗಾ ತಾಲೂಕಿನ ಔರಾದ(ಬಿ) ರಸ್ತೆಯಲ್ಲಿ 20 ಎಕ್ರೆ ತೋಟದ ಜಮೀನು ಇದೆ. ಮಾತ್ರವಲ್ಲ ಟಾಟಾ ಸುಮೋ, ಕಮಾಂಡರ್ ಜೀಪ್, ಟ್ರಾಕ್ಟರ್ ಮತ್ತು ಸಾಕಷ್ಟು ಮೋಟಾರ್ ಬೈಕ್‌ಗಳನ್ನು ಹೊಂದಿರುವನು. ಇದೆಲ್ಲವೂ ಯಾವಾಗ ಬೆವರು ಹನಿಸಿ ಗಳಿಸಿಬಿಟ್ಟ ಎಂಬ ಪ್ರಶ್ನೆ ಕಾಡುತ್ತಿದೆಯೇ? ಮೇಲಿನ ಇಷ್ಟನ್ನು ಕಣ್ಣಿಗೆ ಕಾಣುವ ಆಸ್ತಿ ಮತ್ತು ಇದಕ್ಕೂ ಹೆಚ್ಚು ಕಣ್ಣ ಹಿಂದಿನ ಆಸ್ತಿ ಗಳಿಸಲು ಧರ್ಮರಾಜನು ಬೆವರು ಸುರಿಸುವಂತಹ ಮೂರ್ಖನೇನಲ್ಲ. ಈತನ ದರ್ಬಾರಿಕೆಯ ಕಟ್ಟೆಯ ಮೇಲೆ ಈತ ಹೇಳಿದ್ದೇ ನ್ಯಾಯವಾಗುತ್ತದೆ. ಆಸ್ತಿಗಾಗಿ ಜಗಳ ಮಾಡಿಕೊಂಡ ಎರಡೂ ಕಡೆಯವರನ್ನು ಕರೆಸುವುದು. ಹಣ ಇದ್ದವರ ಬೆನ್ನು ತಟ್ಟುವುದು. ಹಣವಿಲ್ಲದವನ ಮುಖಕ್ಕೆ ಬೂಟುಗಾಲಿಟ್ಟು ನ್ಯಾಯ ತೂಗುವುದು. ಇಬ್ಬರ ಜಗಳ ಮೂರನೆಯವನಿಗೆ ಲಾಭ - ಮತ್ತು ಉಳ್ಳವನಿಗೆ ಲಾಭ. ಹೀಗೆ ಖಾಸಗಿ ಗೂಂಡಾಗಿರಿಯ ಪಂಚಾಯ್ತಿ ಮಾಡಿ, ದುರ್ಬಲರ, ಬಡವರ ಆಸ್ತಿ ಲಪಟಾಯಿಸಿ ಅನತಿ ಕಾಲದಲ್ಲಿಯೇ 'ಜಮೀನ್ದಾರ'ನ ಪಟ್ಟಕ್ಕೆ ಏರಿರುವ ಧರ್ಮರಾಜನ ಮನೆಯಲ್ಲಿ ಲಕ್ಷ್ಮಿ(ಹಣ) ಕಾಲು ಮುರಿದುಕೊಂಡು ಬಿದ್ದಿರುವಳು. ಈ ಲಕ್ಷ್ಮಿಯನ್ನು ಬಡವರ ಮನೆಯಿಂದ ತನ್ನ ಮನೆಗೆ ವರ್ಗಾಯಿಸಲು, ಅವಳ ಕಾಲು ಮುರಿಯಲು ಬೇಕಾದ ಸಾಮಗ್ರಿ, ಸಾಧನಗಳನ್ನು ಕುಖ್ಯಾತ ರೌಡಿ ಹರಿಜನ ಚಂದಪ್ಪನಿಂದ ಸಪ್ಲೈಯಾಗುತ್ತಿತ್ತು ಎಂಬುದು ಹಗಲು ಹೊತ್ತಿನ ಸತ್ಯದ ಮಾತು.

ರಾತ್ರಿ ಚಿನ್ನಪ್ಪನ ಜೀವ ತೆಗೆದು ಮರುದಿನ ಕಲ್ಬುರ್ಗಿಗೆ ಬಂದ ಧರ್ಮರಾಜ ಸಮಾಜ ಕಲ್ಯಾಣ ಸಚಿವ ಚವ್ಹಾಣರ ಒಂದು ಕಾರ್ಯಕ್ರಮದೊಳಗೆ ನುಗ್ಗಿ ಸಚಿವರ ಪಕ್ಕದಲ್ಲಿ ನಿಂತುಕೊಂಡು ಪತ್ರಿಕೆಯಲ್ಲಿ ಫೋಟೋ ಬರುವಂತೆ ಮಾಡಿದ.(ಆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯಲ್ಲಿ ಧರ್ಮರಾಜನ ಹೆಸರೇ ಇರಲಿಲ್ಲ) ಧರ್ಮನ ಕ್ರೌರ್ಯಕ್ಕೆ ಹೆದರಿದ ಊರಿಗೆ ಊರೇ ಈ ಭೀಕರ ಹತ್ಯೆಯ ವಿರುದ್ಧ ಮಾತಾಡಲಿಲ್ಲ. ತಾಯಿಯಾಗಲೀ ಅಣ್ಣನಾಗಲೀ ಪೋಲೀಸ್‌ಗೆ ದೂರು ಕೊಡಲೂ ಹೆದರಿದರು.

**ಧರ್ಮನ ಕರ್ಮಕಾಂಡ ಅನಾವರಣ**

ಆದರೆ ಧರ್ಮನ ಭೀಬತ್ಸ್ಯತನ ಮುಚ್ಚಲಿಲ್ಲ. 3 ತಿನಗಳ ತರುವಾಯು ಪೋಲೀಸರಿಗೆ ಸುದ್ದಿ ತಿಳಿದು ಸ್ವತಃ ಊರಿಗೆ ಹೋದರು. ಚಿಂಚನಸೂರು ಗ್ರಾಮ ಪಂಚಾಯತ್ ಅಧ್ಯಕ್ಷ(ಪ್ರಾಂತ ರೈತ ಸಂಘದ ಮುಖಂಡರೂ)ರ ಸಹಾಯದಿಂದ ಹಂಪಣ್ಣನನ್ನು ಕರೆದು ದೂರು ಬರೆಯಿಸಿಕೊಂಡರು. ಸಂಪೂರ್ಣ ಭಯಭೀತನಾಗಿದ್ದ ಹಂಪಣ್ಣನಿಗೆ ಪೋಲಿಸ್ ತನ್ನಲ್ಲೇ ರಕ್ಷಣೆ ಕೊಟ್ಟಿತು. ಕೂಡಲೇ ಧರ್ಮನ ಮನೆ ಜಾಲಾಡಿ ಮಾರಕಾಸ್ತ್ರಗಳನ್ನು ವಶಪಡಿಸಿ ಕೊಳ್ಳಲಾಯಿತು. ಚಿನ್ನಪ್ಪನನ್ನು ಬರ್ಬರವಾಗಿ ಕೊಂದ ಅನೇಕ ಸಾಕ್ಷಿಗಳೊಂದಿಗೆ ಪೋಲೀಸರು ಧರ್ಮನ ಟ್ರಾಕ್ಟರ್ ಜಪ್ತ್ ಮಾಡಿದರು. ಮಾತ್ರವಲ್ಲ ಹುಡುಕಾಟಕ್ಕೆ ತೊಡಗಿದರು. ಇದರ ಸುದ್ದಿ ತಿಳಿಯುತ್ತಲೇ ಧರ್ಮ ಮತ್ತವನ ಸಂಗಡಿಗರು ತಲೆ ಮರೆಸಿಕೊಂಡರು. ಎರಡು ದಿನಗಳ ತರುವಾಯು ಮಧ್ಯ ರಾತ್ರಿಯಲ್ಲಿ ದೂರವಾಣಿಯಿಂದ ಪತ್ರಕರ್ತರೊಂದಿಗೆ ಮಾತಾಡಿ 'ಚಿನ್ನಪ್ಪನಿಗೆ ಶಾವ್ಯಾರೂ ಕೊಲ್ಲಲಿಲ್ಲ. ಆತನಿಗೆ ಹಾವು ಕಡಿದು ಮೃತಪಟ್ಟಿರುವುದರಿಂದ ಸುಡಲಾಗಿದೆ" ಎಂದು ಹೇಳಿದನು.

ಆದರೆ ಮರುದಿನವೇ ಚಿನ್ನಪ್ಪನ ಅಣ್ಣನಾದ ಹಂಪಣ್ಣನು ಪತ್ರಿಕೆಯವರ ಮುಂದೆ ಬಂದು ಗೊಳೋ ಎಂದು ಅತ್ತು ತನ್ನ ಕಣ್ಣ ಮುಂದೆ ನಡೆದ ಘಟನೆ ಯನ್ನು ಹೇಳಿದನು. 'ಧರ್ಮರಾಜ ಸಾಹುಕಾರರ ಮುಂದೆ ಹೇಳ್ತೀನ್ರೀ... ಅವನೇ ಹೊಡೆದು ಕೊಲ್ಯಾನ. ನನ್ನ ಜೀವ ಹೋದರೂ ಚಿಂತಿಯಿಲ್ಲ. ಸತ್ಯಕ್ಕೆ ಜಯ ಸಿಗಬೇಕು" ಎಂದನು. ಹಾವ ಕಡಿದು ಸತ್ರೆ ನಮ್ ಜಾತ್ಯಾಗ ಸುಡಾಂಗಿಲ್ಲ. ಮಣ್ಣ ಮಾಡ್ತೀವಿ. ಧರ್ಮ ಸುಳ್ಳು ಹೇಳ್ತಾನ. ಅವನೇ ಕೊಲೆಗಾರ.ಅವ್ನಿಗೆ 8 ಮಂದಿ ಶಿಕ್ಷಾ ಮಾಡಿಸ್ರಿ" ಎಂದು ಕಲ್ಲೆದೆಯೂ ಕರಗುವಂತೆ ಎದೆಬಿರಿದು ಅತ್ತ ಪರಿಗೆ ಹಲವರ ಕಣ್ಣಲ್ಲಿ ನೀರು ತೊಟ್ಟಿಕ್ಕಿತು.

ಈಗ ಧರ್ಮ ಮತ್ತು ಸಂಗಡಿಗರಿಗೆ ನಿದ್ದೆ ಬರುತ್ತಿಲ್ಲ. ಪೋಲೀಸ್ ಠಾಣೆಯ ಮಾಹಿತಿ ವರದಿಯಲ್ಲಿ ಗುನ್ಹೆ ನಂ.147, 148, 313, 324, 342, 504, 506, 302, 201; 149 ಗುನ್ಹೆಗಳು ದಾಖಲು ಮಾಡಲಾಗಿದೆ. ಇಷ್ಟು ವರ್ಷ ಸಾರಾಯಿ-ಮಾಂಸ ಹಾಕಿ ಅನೇಕ ಚೇಲಾಗಳಿಗೆ ಧರ್ಮರಾಜ ಸಾಕಿರುವನು. ಈಗ ಅವರು ತನ್ನ ಪರವಾಗಿ ಹೇಳಿಕೆಕೊಟ್ಟು ಋಣ ತೀರಿಸಬೇಕೆಂದು ಗದರುತ್ತಿರುವನು. ಇಲ್ಲಿಯವರೆಗೆ ತಾನು ನಡೆಯಿಸಿಕೊಂಡು ಬಂದ ಕರ್ಮಕಾಂಡದ ಕಟ್ಟೆ ಒಡೆಯುತ್ತಿದೆ ಎಂಬುದು ಧರ್ಮರಾಜ ಅರಿಯಬೇಕಿದೆ. ಈವರೆಗೆ ಹೆದರಿ ಸುಮ್ಮನಿದ್ದ ಜನ ಈಗ ತಿರುಗಿ ಬಿದ್ದು ಸತ್ಯದ ಪರವಾಗಿ ಮಾತಾಡುತ್ತಿದ್ದಾರೆ.

ಸಿಪಿಐ(ಎಂ) ಪಕ್ಷವು ಧರ್ಮರಾಜ ಮತ್ತು ಸಂಗಡಿಗರನ್ನು ಕೂಡಲೇ ಬಂಧಿಸಲು ಒತ್ತಾಯಿಸಿದೆ. ಗುತ್ತೇದಾರರ ಮಾಫಿಯಾ ವಿರುದ್ಧ ಸಮರ ಸಾರಿದ್ದ ಈ ಪಕ್ಷ ಈಗ ಧರ್ಮನ ಗೂಂಡಾಗಿರಿ ವಿರುದ್ಧ ಚಳುವಳಿ ನಡೆಸಲು ಸಜ್ಜಾಗಿದೆ. ಈಗಾಗಲೇ ಪ್ರಗತಿಪರ ಸಂಘಟನೆಗಳು ಸೇರಿ ಸುರಪುರ ಬಂದ್ ಮಾಡಿವೆ. ಸವಿತಾ ಸಮಾಜದ ವತಿಯಿಂದ ಬೃಹತ್ ಪ್ರತಿಭಟನಾ ಮೆರವಣಿಗೆ ಮಾಡಲಾಗಿದೆ.

ಜಿಲ್ಲೆಯಲ್ಲಿ ಧರ್ಮನ ಗೂಂಡಾಗಿರಿಗೆ ಧಿಕ್ಕರಿಸುತ್ತಲೇ ಪಾಳೇಗಾರಿ-ಜಮೀನ್ದಾರಿ ಮೌಲ್ಯಗಳ ವಿರುದ್ಧ ಜನಾಂದೋಲನ ಎದ್ದು ಬರತೊಡಗಿದೆ.


- ವರದಿಗಾರ

## ಕ್ರಿಮಿನಲ್‌ಗೆ ಕರೆದು ಸಿಂಹಾಸನ ಕೊಟ್ಟರು

ಇಂತಹ ಕ್ರಿಮಿನಲ್ ಚರಿತ್ರೆಯ ಧರ್ಮರಾಜನಿಗೆ ಮುನ್ಸಿಪಾಲಿಟಿ - ಕಾರ್ಪೊರೇಷನ್ ಚುನಾವಣೆಗಳಲ್ಲಿ ಕರೆದು ಕರೆದು ಟಿಕೀಟು ಕೊಟ್ಟವರು ಅಂದಿನ ನಗರಾಭಿವೃದ್ಧಿ ಸಚಿವರಾಗಿದ್ದ (ಜನತಾದಳ) ಶ್ರೀ ವೈಜನಾಥ ಪಾಟೀಲರು. 'ಜೈಲಲ್ಲಿರ ಬೇಕಾದವರಿಗೆ ಕುರ್ಚಿ ಕೊಡ್ತಿದ್ದೀರಿ. ಜಿಲ್ಲೆಯ ರಾಜಕೀಯಕ್ರಿಮಿನಲ್ ಆಗ್ತದೆ' ಎಂಬ ಕಳಕಳಿಯ ಮಾತಿಗೆ ಪಾಟೀಲರ ಜಮೀನ್ದಾರಿ ಮೆದುಳು ಸ್ಪಂದಿಸಲೇ ಇಲ್ಲ. ಧರ್ಮರಾಜನ ಗ್ಯಾಂಗಿನೊಳಗೇ ಇರುವ ಇನ್ನೊಬ್ಬ ಕ್ರಿಮಿನಲ್ ಪೋಪಟ್ ಲಾಲ್ ಎಂಬ ಕಾರ್ಪೋರೇಟರ್ ಸಹ ಇವನಂತೆ ತದ್ರೂಪಿ. ಈಗಾಗಲೇ ಲಕ್ಷಾನುಗಟ್ಟಲೆ ಕಳ್ಳತನದಲ್ಲಿ ರೆಡ್‌ಹ್ಯಾಂಡ್ ಸಿಕ್ಕಿಬಿದ್ದು ಜೈಲು ಎಂಬ ಮಾವನ ಮನೆ ನೋಡಿ ಬಂದಿದ್ದಾನೆ. ಇಂತಹ ಹಿರಿ-ಕಿರಿ ಮರಿ ರೌಡಿಗಳಿಗೆಲ್ಲ ಸಾಕಿ ಸಲುಹಲು ಗುಲಬರ್ಗಾ ಜಿಲ್ಲೆಯ ಜಮೀನ್ದಾರಿ ರಾಜಕೀಯ ಶಕ್ತಿಗಳು ಸೊಂಟ ಕಟ್ಟಿ ನಿಂತಿವೆ. ಯಾವುದೇ ಪ್ರಗತಿಪರ ಸಂಘಟನೆ ಬೆಳೆದಲ್ಲಿ ತಮ್ಮ ಕಪಿಮುಷ್ಟಿಯಲ್ಲಿರುವ ದುಡಿವ ಜನತೆ ವಿಮೋಚನೆಯ ಬೆಳಕಿಗೆ ಮುಖ ಮಾಡುತ್ತಾರೆ ಎಂಬ ಭಯ ಅವರಿಗೆ ಕನಸಲ್ಲಿಯೂ ಕಾಡುತ್ತಿರುತ್ತದೆ.

ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಲಿಕ್ಕರ್ ದೊರೆಗಳಾದ ಸುಭಾಷ್ ಗುತ್ತೇದಾರಮತ್ತು ಧರ್ಮರಾಜ ಒಂದೇ ಪಕ್ಷಕ್ಕೆ(ಕಾಂಗ್ರೆಸ್) ಹಾರಿ ಗಳಸ್ಯ-ಕಂಠಸ್ಯರಾಗಿ ಕೆಲಸ ಮಾಡಿರುವರು. ಕ್ರಿಮಿನಲ್ ಮೈಂಡ್‌ಗಳು ಒಂದೆಡೆ ಸೇರಿರುವುದರಿಂದಲೇ ಪಾಕೀಟು, (ಸರಾಯಿ), ಹಣ, ಸುಳ್ಳುಗಳ ಕಂತೆ ಹೀಗೆ ಎಲ್ಲವನ್ನು ಬಳಸಿ ಧರ್ಮರಾಜ ಜಿಲ್ಲಾ ಪಂಚಾಯ್ತಿಯಲ್ಲಿ ಗೆದ್ದು ಬರಲು ಸಾಧ್ಯವಾಗಿದೆ. ಕಾಂಗ್ರೆಸ್‌ನಲ್ಲಿ ತನಗೆ ಸಿಗುವ ಟಿಕೇಟ್‌ಗೆ ಅಡ್ಡಿ ಮಾಡುವವರ ಮನೆಗೆ ಹೋಗಿ ಚಾಕುತೋರಿಸಿ ಟಿಕೇಟ್ ಪಡೆದ ಭೂಪನೀತ.

## ಮಲ್ಲಿಕಾರ್ಜುನ ಖರ್ಗೆಯವರ ಆಶೀರ್ವಾದ?



ಹೌದು, ಧರ್ಮರಾಜನಿಗೆ ಹಿಂದೆ ವೈಜನಾಥ ಪಾಟೀಲರು ಕರೆದು ಟಿಕೇಟ್ ಕೊಟ್ಟರೆ ಈಗ ಮಲ್ಲಿಕಾರ್ಜುನ ಖರ್ಗೆಯವರು ಜಿ.ಪಂ.ಗೆ ತಮ್ಮ ಪಕ್ಷದ ಟಿಕೇಟ್ ನೀಡಿ ಈತನು ಮಾಡುವ ಎಲ್ಲ ತರದ ಕ್ರಿಮಿನಲ್ ಕೆಲಸಗಳಿಗೆ ಓಪನ್ ಲೈಸೆನ್ಸ್ ನೀಡಿರುವರು ಎಂಬ ಆರೋಪವಿದೆ. ಇವರ ಅಭಯ ಹಸ್ತದ ಕಾರಣವಾಗಿಯೇ ಅತ್ಯಂತ ರಾಜರೋಷವಾಗಿ ಸೊಕ್ಕಿದ ಗೂಳಿಯ ತೆರದಿ ನುಗ್ಗುತಿರುವನು. ದೇಶದ್ರೋಹಿ ಕೋಮುವಾದಿ ಬಿಜೆಪಿಯನ್ನು ಸೋಲಿಸುವುದಕ್ಕೋಸ್ಕರ ತಮಗೆ ಜನ ಓಟು ಹಾಕಿರುವರು ಮತ್ತು ಗೆದ್ದ ಮೇಲಾದರೂ ಜನರ ಪ್ರೀತಿಗೆ ಪಾತ್ರರಾಗಬೇಕು ಎಂಬ ಕನಿಷ್ಟ ಬುದ್ಧಿಯೂ ಈ ಕಾಂಗ್ರೆಸ ಮಿನಿಷ್ಟ್ರುಗಳಿಗಿಲ್ಲ. ಏನೆಲ್ಲ ಭಾನಗೇಡಿ ಕೆಲಸ ಮಾಡಲಿಕ್ಕಾಗಿಯೇ ಜನ ತಮಗೆ ಆರಿಸಿ ತಂದಿರುವರು ಎಂದು ಭ್ರಮೆಯಲ್ಲಿ ಮುಳುಗಿ ತೇಲಾಡುತ್ತಿರುವುದ ರಿಂದಲೇ ಈಗ ಸ್ವತಃ ಖರ್ಗೆಯವರು ಧರ್ಮರಾಜನ ಈ ಎಲ್ಲಾ ಕರ್ಮಕಾಂಡಗಳಿಗೆ ಕುಮ್ಮಕ್ಕು ಕೊಡುತ್ತಿರುವರು ಎಂಬ ಅನುಮಾನ ಖಂಡಿತ ಜಿಲ್ಲೆಯ ಜನಕ್ಕೆ ದೃಢವಾಗಿದೆ. ಉಳಿದ ಐದೂ ಜನ ಸಚಿವರೂ ಕೆಂಪು ಗೂಟ(ಬಲ್ಬಿನ)ದ ಕಾರಲ್ಲಿ ಕೂತು ಸುಮ್ಮ-ಸುಮ್ಮನೇ ದರ್ಪತೋರಿಸಿ, ಅಧಿಕಾರಿಗಳಲ್ಲಿ ಹಣ ವಸೂಲಿಗಾಗಿ ಓಡಾಡುವುದು ಬಿಟ್ಟರೆ ಬೇರೇನೂ ಮಾಡುತ್ತಿಲ್ಲ. ಧರ್ಮರಾಜನ ದಾದಾಗಿರಿಗೆ ಕಡಿವಾಣ ಹಾಕಬೇಕೆಂಬ ಕಿಂಚಿತ್ತು ಮನಸ್ಸು ಇವರಾರಿಗೂ ಇಲ್ಲ.

ಈ ಎಲ್ಲ ಪ್ರತ್ಯಕ್ಷ-ಪರೋಕ್ಷ ಕುಮ್ಮಕ್ಕು-ಆಶೀರ್ವಾದಗಳಿಂದಲೇ ಧರ್ಮರಾಜನು ತನ್ನ ಸಹಚರರೊಂದಿಗೆ ಸೇರಿ ಚಿನ್ನಪ್ಪ ಎಂಬ ಮುಗ್ಧ ಯುವಕನ ಬರ್ಬರ ಹತ್ಯೆ ಮಾಡಿರುವನು ಎಂಬುದು ಕೇವಲ ವದಂತಿ ಆಗಿರಲಾರದು.

# ನಗೆಪಾಟಲಾದ ಅಮೆರಿಕದ ರಾಜಕೀಯ ವ್ಯವಸ್ಥೆ

ಎರಡು ವಾರಗಳಿಂದ ಅಮೆರಿಕದ ಅಧ್ಯಕ್ಷೀಯ ಚುನಾವಣೆ ನೆನೆಗುದಿಗೆ ಬಿದ್ದಿದೆ. ಈ ರಾಜಕೀಯ ಬಿಕ್ಕಟ್ಟು ಎಷ್ಟು ತೀವ್ರವಾಗಿದೆ ಎಂದರೆ, ಸಾಮಾನ್ಯವಾಗಿ ರಾಜಕೀಯದಲ್ಲಿ ಆಸಕ್ತಿಯಿಲ್ಲದ ಅಮೆರಿಕದ ಜನ ಎಚ್ಚೆತ್ತು ಇಡೀ ವ್ಯವಸ್ಥೆಯನ್ನು ಪ್ರಶ್ನಿಸುತ್ತಿದ್ದಾರೆ. ಈ ಎಲ್ಲಾ ಬಿಕ್ಕಟ್ಟು ಆರಂಭವಾದದ್ದು ಫ್ಲಾರಿಡಾದಲ್ಲಿ ಇಬ್ಬರ ಪ್ರಮುಖ ಅಭ್ಯರ್ಥಿಗಳು - ರಿಪಬ್ಲಿಕನ್ ಜಾರ್ಜ್ ಬುಶ್ ಮತ್ತು ಡೆಮಾಕ್ರಾಟಿಕ್ ಆಲ್ ಗೋರ್-ನಡುವೆ ಕೊನೆಗೆ ಪ್ರಕಟವಾದ ಫಲಿತಾಂಶದಲ್ಲಿ ಅತ್ಯಲ್ಪ(ಕೇವಲ 300 ಮತಗಳು)

ಚುನಾವಣಾ ಅಕ್ರಮಗಳು ನಡೆದದ್ದು, ಈ ಅಕ್ರಮಗಳಲ್ಲಿ ಆ ರಾಜ್ಯದ ಗವರ್ನರ್ ಆಗಿರುವ ಜಾರ್ಜ್‌ಬುಶ್ ತಮ್ಮನ ಮತ್ತು ಸರ್ಕಾರದ ಪಾತ್ರ

ಅತ್ಯಂತ ಪ್ರಜಾಸತ್ತೆ-ವಿರೋಧಿಯಾದ ಅಧ್ಯಕ್ಷೀಯ ಚುನಾವಣೆ ವ್ಯವಸ್ಥೆ. ಈ ವಿಚಿತ್ರ ವ್ಯವಸ್ಥೆಯ ಪ್ರಕಾರ (ವಿವರಗಳಿಗೆ 'ಅಮೆರಿಕದ ಅಧ್ಯಕ್ಷರ ಆಯ್ಕೆ ಹೇಗೆ?'

## ಅಮೆರಿಕ ಅಧ್ಯಕ್ಷೀಯ ಚುನಾವಣೆ

- ಇವೆಲ್ಲ ಹೊರಬರಲಾರಂಭಿಸಿತು. ಪುನಃ ಎಣಿಕೆಗೆ ಕೂಗು ಎದ್ದು ಕೆಲವು ಜಿಲ್ಲೆಗಳಲ್ಲಿ ಇದನ್ನು ಕೈಗೊಳ್ಳಲಾಯಿತು. ಈಗ ಫ್ಲಾರಿಡಾದ ಆಖೈರು


ಎಂಬ ಬಾಕ್ಸ್ ನೋಡಿ) ಜನ ಚಲಾಯಿಸಿದ ಮತಗಳಲ್ಲಿ ಅತ್ಯಂತ ಹೆಚ್ಚಿನ ಮತಗಳಿಸಿ, ಬಹುಮತ ಪಡೆದು ಚುನಾವಣೆ ಸೋಲಬಹುದು. ಡೆಮಾಕ್ರೆಟಿಕ್

ಪುರುಷರು ಮಾತ್ರ ಮತ ಚಲಾಯಿಸಬಹುದಾಗಿದ್ದ ಕಾಲದ ವ್ಯವಸ್ಥೆ ಇದು. ಅದು ಇಂದಿಗೂ ಉಳಿದುಕೊಂಡು ಬಂದಿದೆ. ಈಗ ಸೆನೆಟರ್ ಆಗಿ ಚುನಾಯಿತರಾಗಿರುವ ಹಿಲೆರಿ ಕ್ಲಿಂಟನ್ ತಾನು ಈ ವ್ಯವಸ್ಥೆ ಬದಲಾಯಿಸಲು ಸಂವಿಧಾನ ತಿದ್ದುಪಡಿ ತರುವುದಾಗಿ ಘೋಷಿಸಿದ್ದಾರೆ. ಆದರೆ ಇನ್ನೂರು ವರ್ಷಗಳ ಕಾಲ ಈ ಪ್ರಜಾಸತ್ತೆ-ವಿರೋಧಿ ಕ್ರಮ ಯಾಕೆ ಜಾರಿಯಲ್ಲಿತ್ತು ಎಂಬುದನ್ನು ಜನ ಈಗ ಪ್ರಶ್ನಿಸುತ್ತಿದ್ದಾರೆ.

ಈ ಇಡೀ ಬಿಕ್ಕಟ್ಟಿನ ತಕ್ಷಣದ



**ಎರಡು ವಾರಗಳಿಂದ ಅಮೆರಿಕದ ಅಧ್ಯಕ್ಷೀಯ ಚುನಾವಣೆ ಫಲಿತಾಂಶ ಕೊಡಲಾಗದೆ ಅಮೆರಿಕ ಇಡೀ ರಾಜಕೀಯ ವ್ಯವಸ್ಥೆ ಬಿಕ್ಕಟ್ಟಿನಲ್ಲಿ ಸಿಲುಕಿ ಬಿದ್ದಿದೆ. ಭಾರೀ ಅಕ್ರಮಗಳು ಹೊರಗೆಬಂದಿವೆ. ನಾವು ಪ್ರಿಂಟ್‌ಗೆ ಹೋಗುವವರೆಗೆ ಈ ಕಾದಾಟದಲ್ಲಿ ಯಾರು ಗೆದ್ದಿದ್ದಾರೆ ಸ್ಪಷ್ಟವಾಗಿಲ್ಲ. ಆದರೆ ಅಮೆರಿಕದ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜಾಸತ್ತೆ ಎಷ್ಟು ಕ್ಷೀಣವಾಗಿದೆ. ಎಷ್ಟು ಹುಳುಕುಗಳಿವೆ ಎಂಬುದು ಸ್ಪಷ್ಟವಾಗಿದೆ. ಇದು ಯಾವಾಗಲೂ ಹೀಗೆ ಇತ್ತು. ಈ ಬಾರಿ ಸ್ಪಷ್ಟವಾಗಿ ಬಯಲಾಗಿದೆ ಅಷ್ಟೆ. 'ಪ್ರಜಾಸತ್ತೆ' 'ಕಾನೂನುಬದ್ಧ ವ್ಯವಸ್ಥೆ' 'ಸ್ವಾತಂತ್ರ್ಯ'ದ ಪಾಠವನ್ನು ಇಡೀ ಜಗತ್ತಿಗೆ ಹೇಳುವ ತನ್ನಂತಹದೇ ರಾಜಕೀಯ ವ್ಯವಸ್ಥೆಯನ್ನು ಇಡೀ ಜಗತ್ತಿನ ಮೇಲೆ ಹೇರುವ ಅಮೆರಿಕದ ಆಳುವ ವರ್ಗಗಳ ಹೂರಣ ಹೊರಬಿದ್ದಿದೆ. ಅದು ನೆಗೆಪಾಟಲಾಗಿದೆ. ಈ ಬಗ್ಗೆ ವಿವರಗಳನ್ನು ಓದಿ.**



ಮತಗಳ ಅಂತರದಿಂದ. ಹಿಂದಿನ ಎಲ್ಲಾ ಅಭಿಮತ ಸಂಗ್ರಹದಲ್ಲಿ ಆಲ್‌ಗೋರ್ ಫ್ಲಾರಿಡಾದಲ್ಲಿ ಮುಂದಿದ್ದು, ಚುನಾವಣೆಯ ದಿನವೂ ಗೋರ್ ಮತಎಣಿಕೆ ನಡೆಯುತ್ತಿದ್ದಂತೆ, ಸಾಕಷ್ಟು ಮುಂದಿದ್ದು ಕೊನೆಯ ಫಲಿತಾಂಶ ಪ್ರಕಟವಾದಾಗ ಬುಶ್ ಗೆದ್ದಿದ್ದರು. ಮೂರು ನಾಲ್ಕು ರಾಜ್ಯಗಳಲ್ಲಿ ಈ ರೀತಿ ಕಡಿಮೆ ಅಂತರವಿದ್ದರೂ, ಅದು ವಿವಾದಿತವಾಗಿಲ್ಲ. ಆದರೆ ಫ್ಲಾರಿಡಾ ಫಲಿತಾಂಶ ನಿರ್ದಿಷ್ಟ ಕಾರಣಗಳಿಗೆ ವಿವಾದಿತವಾಯಿತು. ಫ್ಲಾರಿಡಾದಲ್ಲಿ ಹಲವು

ಫಲಿತಾಂಶ ಕೊಡುವುದು ಹೇಗೆ? ಯಾವ ವಿಧಾನ ಅನುಸರಿಸಬೇಕು? ಹೊರ ಬಂದಿರುವ ಅಕ್ರಮಗಳ ಬಗ್ಗೆ ಏನು ಮಾಡುವುದು? ಈ ಎಲ್ಲಾ ಪ್ರಶ್ನೆಗಳಿಗೆ ರಾಜಕೀಯ ವ್ಯವಸ್ಥೆಯಲ್ಲಿ ಉತ್ತರವಿಲ್ಲದೆ, ಕೋರ್ಟುಗಳ ಕಟ್ಟೆ ಹತ್ತಿದೆ(ವಿವರಗಳಿಗೆ 'ಫ್ಲಾರಿಡಾ ಅಮೆರಿಕದ ಬಿಹಾರವೆ?' ಬಾಕ್ಸ್ ನೋಡಿ)

**ಶರತ್ ಚಂದ್ರ**

**ಬಿಕ್ಕಟ್ಟಿನ ಮೂಲ**

ಆದರೆ ಇಡೀ ಬಿಕ್ಕಟ್ಟಿನ ಮೂಲದಲ್ಲಿರುವುದು ಅಧ್ಯಕ್ಷ ಅಲ್‌ಗೋರ್‌ಗೆ ದೇಶಾದ್ಯಂತ ಎರಡು ಲಕ್ಷಗಳ ಸ್ಪಷ್ಟ ಬಹುಮತವಿದೆ. ಆದರೆ ಬುಶ್ 300 ಮತಗಳ ಅಂತರದಿಂದ ಫ್ಲಾರಿಡಾ ಗೆದ್ದರೆ, ಬುಶ್ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. 'ಚುನಾವಣಾ ಕಾಲೇಜು' ಎಂದು ಹೇಳಲಾಗುವ ಈ ಪರೋಕ್ಷ ಚುನಾವಣೆ ವ್ಯವಸ್ಥೆ ಅಮೆರಿಕದ ರಾಜಕೀಯ ವ್ಯವಸ್ಥೆಯ ಆರಂಭದ ದಿನಗಳದ್ದು. ಆಸ್ತಿ ಇರುವ ಬಿಳಿಯ

ಪರಿಣಾಮವೆಂದರೆ, ಅಮೆರಿಕದ ರಾಜಕೀಯ ವ್ಯವಸ್ಥೆಯಲ್ಲಿ ಅಲ್ಲಿನ ಜನ, ಅಂತರ್ರಾಷ್ಟ್ರೀಯವಾಗಿ ನಂಬಿಕೆ ಕಳೆದು ಕೊಂಡಿರುವುದು. ಈ ರೀತಿ ಎಲ್ಲಾ ಯಾವಾಗಲೂ ಇತ್ತೆ? ಎಂದು ಎಲ್ಲರೂ ಹುಬ್ಬೇರಿಸುತ್ತಿದ್ದಾರೆ. ಪೇಪರ್, ಟಿ.ವಿ. ತುಂಬ ಜನ ಇಡೀ ಬಿಕ್ಕಟ್ಟಿಗೆ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. ಇದರಲ್ಲಿ ಅತ್ಯಂತ ಮೊನಚಾದ ಪ್ರತಿಕ್ರಿಯೆ ಅಮೆರಿಕದ ಖ್ಯಾತ ವ್ಯಂಗ್ಯಕಾರ ಮೆಕೆಲ್ ಮೂರರದ್ದು. ಅವರು ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಕೋಫಿ ಅನ್ನನ್‌ಗೆ ಪತ್ರ ಬರೆದು ಜಿಮ್ಮಿ ಕಾರ್ಟರ್ ನಾಯಕತ್ವದಲ್ಲಿ ವಿಶ್ವಸಂಸ್ಥೆ ತಂಡ ಕಳಿಸಲು ಕೇಳಿದ್ದಾರೆ. (ವಿವರಗಳಿಗೆ 'ವಿಶ್ವಸಂಸ್ಥೆ ವೀಕ್ಷಕರನ್ನು, ಜಿಮ್ಮಿ ಕಾರ್ಟರನ್ನೂ ಫ್ಲಾರಿಡಾಗೆ ಕಳಿಸಿ' ಬಾಕ್ಸ್ ನೋಡಿ) ಫ್ಲಾರಿಡಾದಲ್ಲಿ ಅಕ್ರಮಗಳ ಸಂದರ್ಭದಲ್ಲಿ ಚುನಾವಣೆ ವ್ಯವಸ್ಥೆಯ ಸಮೂಹ ಮಾಧ್ಯಮಗಳ(ಟಿ.ವಿ. ರೇಡಿಯೋ; ಪತ್ರಿಕೆ)ಗಳ ಪಾತ್ರವೂ ತೀವ್ರ ಟೀಕೆಗೆ ಒಳಗಾಗಿದೆ. ಫ್ಲಾರಿಡಾ ಬಿಕ್ಕಟ್ಟಿನಲ್ಲಿ ಅವುಗಳ ಪಾತ್ರ, ಅವುಗಳ ವಿಶ್ವಾಸನೀಯತೆಗೆ ಭಾರಿ ಪೆಟ್ಟು ಕೊಟ್ಟು ನಗೆಪಾಟಲಾಗಿವೆ. (ವಿವರಗಳಿಗೆ ಟಿ.ವಿ., ನೆಟ್‌ವರ್ಕ್‌ಗಳ ಹೂರಣ ಬಯಲಾದಾಗ) ಸುದ್ದಿ, ಅಭಿಮತದ ನಿಖರತೆಗಿಂತ ಗುಲ್ಲು ಹಬ್ಬಿಸುವ ಪ್ರವೃತ್ತಿ ಎಲ್ಲರನ್ನೂ ಆತಂಕಗೊಳಪಡಿಸಿದೆ.

**ಕೊಳೆತು ನಾರುತ್ತಿರುವ ರಾಜಕೀಯ ವ್ಯವಸ್ಥೆ**

ಅಮೆರಿಕದ ರಾಜಕೀಯ ವ್ಯವಸ್ಥೆ ಈಗಾಗಲೇ ಕೊಳತು ನಾರುತ್ತಿದೆ. ಎರಡೂ ಪ್ರಮುಖ ಪಕ್ಷಗಳ ನಡುವೆ ಯಾರು ಗೆದ್ದರೂ ಆಳುವವರು ಅವರಿಗೆ ಹಣದ ಥೈಲಿ ಕೊಟ್ಟ ದೈತ್ಯ ಬಹುರಾಷ್ಟ್ರೀಯ ಕಂಪನಿಗಳು ಎಂದು ಎಲ್ಲರಿಗೂ ಗೊತ್ತು. ಆದ್ದರಿಂದ ಸಾಮಾನ್ಯ ಜನರಿಗೆ ಚುನಾವಣೆಯಲ್ಲಿ ಆಸಕ್ತಿ ಇಲ್ಲ. ಅಲ್ಲದೆ ಅವರನ್ನು ಚುನಾವಣೆ ವ್ಯವಸ್ಥೆಯಿಂದ ಹೊರಗಿಡಲು ವ್ಯವಸ್ಥಿತ ಪ್ರಯತ್ನ (ಅಕ್ರಮಗಳು ಮಾತ್ರವಲ್ಲ) ನಡೆದಿವೆ. ಆದ್ದರಿಂದಲೇ ಅಮೆರಿಕ ಅಭಿವೃದ್ಧಿ ಬಂಡವಾಳಶಾಹಿ ದೇಶಗಳಲ್ಲೇ ಅತ್ಯಂತ ಕಡಿಮೆ ಶೇಕಡಾ ಮತಚಲಾವಣೆ ಹೊಂದಿರುವುದು-ಸುಮಾರು ಶೇಕಡಾ 50. ಇತರ ಅಭಿವೃದ್ಧ ಬಂಡವಾಳಶಾಹಿ ದೇಶಗಳ ಸರಾಸರಿ ಶೇಕಡಾ ಮತಚಲಾವಣೆ ಶೇಕಡ 85 ರಷ್ಟು. ಅತ್ಯಂತ ಅಭಿವೃದ್ಧ ಬಂಡವಾಳಶಾಹಿ ದೇಶವಾಗಿರುವ ಅಮೆರಿಕದಲ್ಲಿ ಇಂತಹ ಪರಿಸ್ಥಿತಿ ವಿಪರ್ಯಾಸವೇ? ಅಲ್ಲ. ಬಂಡವಾಳ ಶಾಹಿ ವ್ಯವಸ್ಥೆಯು ಬೆಳೆದಷ್ಟು, ಪ್ರಬಲವಾದಷ್ಟು ಹೆಚ್ಚು ಹೆಚ್ಚು ಪ್ರಜಾಸತ್ತೆ-ವಿರೋಧಿಯಾಗುತ್ತದೆ ಎಂದು ಸಪ್ಪ

## 'ವಿಶ್ವಸಂಸ್ಥೆ ವೀಕ್ಷಕರನ್ನು ಮತ್ತು ಕಾರ್ಟರನ್ನು ತಕ್ಷಣ ಫ್ಲಾರಿಡಾಗೆ ಕಳಿಸಿ!

**ವಿಶ್ವಸಂಸ್ಥೆಯ ಅಥವಾ ಅಂತರ್ರಾಷ್ಟ್ರೀಯ ವೀಕ್ಷಕರು ಮತ್ತು ಕಾರ್ಟರ್ ಜಗತ್ತಿನ ಯಾವುದೇ ದೇಶದಲ್ಲಿ ಚುನಾವಣೆಗಳಲ್ಲಿ ಭಾರಿ ಅಕ್ರಮಗಳಾದಾಗ ಯಾರೂ ಆಹ್ವಾನಿಸದೆ ಹೋಗುವುದು ನಿಮಗೆ ಗೊತ್ತಿರಬೇಕು. ಆದರೆ ಒಬ್ಬ ಅಮೆರಿಕನ್ ಇವರನ್ನು ಅಮೆರಿಕಾದಲ್ಲಿ ಫ್ಲಾರಿಡಾಗೆ ಬರುವುದಕ್ಕೆ ಪತ್ರ ಬರೆದಿದ್ದಾನೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಈ ಪತ್ರ ಬರೆದವ ೯೦ ರ ದಶಕದಲ್ಲಿ ಅಮೆರಿಕದ ಅತ್ಯುತ್ತಮ ವ್ಯಂಗ್ಯಕಾರ ಎಂದು ಹೆಸರಾದ ಮೈಕೆಲ್ ಮೂರ್. ಅಮೆರಿಕದ ಜೀವನದ ಎಲ್ಲಾ ಹುಳುಕುಗಳನ್ನು ತನ್ನ ವ್ಯಂಗ್ಯದ ಮೊನಚಿನಿಂದ ಬಯಲಿಗೆಳೆಯುವ ಮೂರ್‌ನ ಈ ಪತ್ರವನ್ನು ಮಾತ್ರ ವ್ಯಂಗ್ಯ ಎನ್ನುವುದಕ್ಕಿಂತ ಯಥಾ ಸ್ಥಿತಿಗೆ ಹತ್ತಿರವಾಗಿದೆ ಎನ್ನಬಹುದು. ಆತನ ಪತ್ರದ ಭಾಗಗಳು - ಓದಿ ಆನಂದಿಸಿ!**

*ಅಜ್ಞಾನ ಜಾಗದಿಂದ*
*ನವೆಂಬರ್ 11, 2000*

**ಮಾನ್ಯ ಕೋಫಿ ಅನ್ನನ್‌ರವರೇ,**

*ಕಾಪಾಡಿ! ಇಲ್ಲಿ ಭಾರಿ ಚುನಾವಣಾ ಅಕ್ರಮಗಳು ನಡೆಯುತ್ತಿವೆ. ಇದು 'ಬಾಳೆಹಣ್ಣು ರಿಪಬ್ಲಿಕ್' ಥರಾ ಕಾಣುತ್ತೆ. ಆದರೆ ಇದು ಅಮೆರಿಕದ ಸಂಯುಕ್ತ ಸಂಸ್ಥಾನಗಳ ಭಾಗ...... ಇಲ್ಲಿನ ಸ್ವಾತಂತ್ರ್ಯ ಪ್ರೇಮಿ ಜನತೆಯ ಪರವಾಗಿ, ಜಾಗತಿಕ ಸಮುದಾಯ ಮತ್ತು ವಿಶ್ವಸಂಸ್ಥೆ ಇಲ್ಲಿ ತತ್‌ಕ್ಷಣ ಮಧ್ಯ ಪ್ರವೇಶಿಸಬೇಕು ಎಂದು ಕೋರುತ್ತಿದ್ದೇನೆ.*

...........

*ಜಿಮ್ಮಿ ಕಾರ್ಟರ್ ನಾಯಕರಾಗಿರುವ ಮತ್ತು ರ್‍ವಾಂಡಾ, ಬ್ರೂನೈ, ಬೋಸ್ನಿಯಾ ಮತ್ತು ದಕ್ಷಿಣ ಆಫ್ರಿಕಾದ ಚುನಾವಣಾ ವೀಕ್ಷಕರು, ಸದಸ್ಯರಾಗಿರುವ ವಿಶ್ವಸಂಸ್ಥೆಯ ತಂಡ ನಾವು 'ಫ್ಲಾರಿಡಾ' ಎಂದು ಕರೆಯುವ ರಾಜ್ಯಕ್ಕೆ ತಕ್ಷಣ ಕಳಿಸಿಕೊಡಿ.......*

*ನಮ್ಮ ದೇಶದ ಈ ವಿವಾದಿತ ರಾಜ್ಯವನ್ನು ಆಳುವವರ ಈ ಎಲ್ಲಾ 'ಗೋಲ್ ಮಾಲ್' ನಿಂದ ಪ್ರಯೋಜನ ಪಡೆಯಲಿರುವ ಅಧ್ಯಕ್ಷೀಯ ಅಭ್ಯರ್ಥಿ ಜಾರ್ಜ್‌ಬುಶ್‌ನ ತಮ್ಮ ಎಂದು ನಿಮಗೆ ಗೊತ್ತಿರಬೇಕು. ಈತ ಈಗಾಗಲೇ ತಾನು 'ಅಧ್ಯಕ್ಷ' ಎಂದು ಓಡಾಡುತ್ತಿದ್ದಾನೆ. ಆದರೆ ಆತನಿಗೆ ಪ್ರತಿಸ್ಪರ್ಧಿ ಆಲ್‌ಗೋರ್‌ಗಿಂತ ಎರಡು ಲಕ್ಷ ಮತಗಳು ಕಡಿಮೆ ಬಂದಿವೆ! ಟಿ.ವಿ., ನೆಟ್‌ವರ್ಕ್‌ಗಳು ಅಲ್ ಗೋರ್ ಫ್ಲಾರಿಡಾದಲ್ಲಿ ಬಹುಮತ ಪಡೆದು ಗೆದ್ದಿದ್ದಾರೆ ಎಂದು ಘೋಷಿಸಿಬಿಟ್ಟಿದ್ದವು. ಆದರೆ ಅಣ್ಣ ಬುಶ್(ಅಧ್ಯಕ್ಷೀಯ ಅಭ್ಯರ್ಥಿ) ತಮ್ಮ ಬುಶ್(ಫ್ಲಾರಿಡಾದ ಗವರ್ನರ್) ಗೆ ಫೋನ್ ಮಾಡಿದ ಮೇಲೆ, ಹಠಾತ್ತನೆ ಅಣ್ಣ ಬುಶ್‌ಗೆ ಬಹುಮತ ಬಂತು!*

.......................

*ಇಂಥದ್ದು ಎಲ್ಲೋ ಕೇಳಿದ್ದೇವಲ್ಲ ಎಂದು ನಿಮಗೆ ಅನಿಸಬಹುದು. ನೀವು ಇಂಥದೇ ಕಥೆ ಇಂಡೋನೇಶ್ಯಾ, ಕಾಂಗೋದಲ್ಲಿ ಕೇಳಿದ್ದೀರಿ. ಪಾಪ! ಎಲ್ಲಾ ಕಡೆ ಎಲ್ಲರೂ ತಮ್ಮ 'ಕುಟುಂಬ' ದವರಿಗೆ ಸಹಯಾ ಮಾಡಲು ಪ್ರಯತ್ನಿಸುವುದು ಸ್ವಾಭಾವಿಕ ಅಲ್ಲವೇ? ತಾನು 'ಅಧ್ಯಕ್ಷ' ಎಂದು ಓಡಾಡುತ್ತಿರುವ, ಈ ಬುಶ್‌ನ ಅಪ್ಪ ಬುಶ್ 8 ವರ್ಷದ ಹಿಂದೆ ಅಮೆರಿಕದ ಅಧ್ಯಕ್ಷನಾಗಿದ್ದ. ಆತನನ್ನು ಅಲ್‌ಗೋರ್ ಮತ್ತು ಆತನ ಸಹಚರ ಬಿಲ್‌ಕ್ಲಿಂಟನ್ ಸೋಲಿಸಿದ್ದ. ಅಪ್ಪ ಬುಶ್ ಕುಖ್ಯಾತ ಸಿಐಎ ಡೈರೆಕ್ಟರ್ ಆಗಿದ್ದವ. ಇದೆಲ್ಲಾ ಯಾಕೆ ಹೇಳುತ್ತಿದ್ದೇನೆ ಎಂದಿರಾ? ನೀವು ಯಾರ ಜತೆ ವ್ಯವಹರಿಸಬೇಕಾಗಿದೆ ಅಂತ ಗೊತ್ತಿರಲಿ ಅಂತ.*

............

*ಫ್ಲಾರಿಡಾ ರಾಜ್ಯ ಸರ್ಕಾರ ಏನಾದರೂ ನಿಮ್ಮ ಅಂತರ್ರಾಷ್ಟ್ರೀಯ ಚುನಾವಣಾ ವೀಕ್ಷಕ ತಂಡಕ್ಕೆ ಅನುಮತಿ ಕೊಡದಿದ್ದರೆ, ಈ ರಾಜ್ಯದ ಮೇಲೆ ಭದ್ರತಾ ಸಮಿತಿ ಆರ್ಥಿಕ ದಿಗ್ಬಂಧನ ಹೇರಬೇಕು ಅಂತ ನಾನು ಕೇಳಿಕೊಳ್ಳುತ್ತಿದ್ದೇನೆ. ಈ ರಾಜ್ಯದ ಗೂಂಡಾಗಿರಿಯನ್ನು ನಮಗೆ ಸಹಿಸುವುದು ಕಷ್ಟವಾಗುತ್ತಿದೆ. ಇದೇ ವರ್ಷದಲ್ಲಿ ಅಪಹರಣವನ್ನು ಕಾನೂನುಬದ್ಧ ಕ್ರೀಡೆ ಮಾಡಲು ಪ್ರಯತ್ನಿಸಿದ ಕೀರ್ತಿ ಈ ರಾಜ್ಯದ್ದು. ಈ ರಾಜ್ಯವೇ ಒಬ್ಬ ಚಿಕ್ಕ ಹುಡುಗನನ್ನು ಅಪಹರಿಸಿ, ಅವನ ಅಪ್ಪನಿಗೆ ಹಿಂದಿರುಗಿಸಲು ನಿರಾಕರಿಸಿತ್ತು. ಎಂಟು ತಿಂಗಳವರೆಗೆ ಈ ವಿಚಿತ್ರ ಸರ್ಕಸ್ಸನ್ನು ನಾವು ನೋಡಿ ಸಹಿಸಬೇಕಾಗಿ ಬಂದಿತ್ತು.*

*........ ಇಂಥದೇನಾದ್ರೂ ಬೇರೆ ಯಾವುದೇ ದೇಶದಲ್ಲಿ ನಡೆದಿದ್ದರೆ, ನಾವು ಅವರನ್ನು ಬಾಂಬ್ ದಾಳಿ ಮಾಡಿ ಪುಡಿ-ಪುಡಿ ಮಾಡಿಬಿಡುತ್ತಿದ್ದೆವು. ಆದರೆ ಇದು ನಮ್ಮ ದೇಶದಲ್ಲೇ, ನಡೆಯುತ್ತಿರುವುದರಿಂದ, ಈ ಬಿಕ್ಕಟ್ಟನ್ನು ಶಾಂತಿಯುತವಾಗಿ ಪರಿಹರಿಸಬೇಕು ಅಂತ ಕೋರಿಕೊಳ್ಳುತ್ತಿದೇನೆ.*

*ನೀವೊಬ್ಬರೆ ನಮಗೆ ಗತಿ. ನೀವೇ ನಮ್ಮನ್ನು ರಕ್ಷಿಸಬೇಕು.*

*ಇತಿ ನಿಮ್ಮ*
**ಮೈಕೆಲ್ ಮೂರ್**

*ವಿ.ಸೂ.: ಇದೇನು ಪಕ್ಷಪಾತದ ದೃಷ್ಟಿ ಅಲ್ಲ. ಯಾಕೆಂದರೆ ನಾನು ಅಲ್‌ಗೋರ್‌ಗೆ ಮತ ಕೊಡಲಿಲ್ಲ. ನಿಜವಾಗಿಯೂ ಹೇಳಬೇಕಾದರೆ ನಾನು ಮೂರನೇ ಅಭ್ಯರ್ಥಿ ಗ್ರೀನ್ ಪಾರ್ಟಿಯ ರಾಲ್ಫ್ ನಾಡರ್‌ಗೆ ಮತ ಕೊಟ್ಟಿದ್ದು. ಅದರಿಂದಾಗಿ ಭಯದಿಂದ ಅಜ್ಞಾನ ಜಾಗದಲ್ಲಿ ಭೂಗತನಾಗಿ ಅಡಗಿ ಕೂತಿದ್ದೇನೆ. ಯಾಕೆಂದರೆ ನಾವು ರಿಪಬ್ಲಿಕನ್ ಬುಶ್ ಗೆಲ್ಲಿಸಿದ್ದೇವೆಂದು ಉದಾರವಾದಿಗಳಿಗೆ ಮಹಾಕೋಪ ಬಂದಿದೆ. ನಮ್ಮಂಥವರನ್ನೆಲ್ಲಾ ಅವರು ಬೇಟೆಯಾಡುತ್ತಿದ್ದಾರೆ ಅಂತ ನನಗೆ ಸುದ್ದಿ ಬಂದಿದೆ. ನನಗೆ ನನ್ನೂರು ಮಿಶಿಗನ್‌ಗೆ ಸುರಕ್ಷಿತವಾಗಿ ತಲುಪಲು ಸಹಾಯ ಮಾಡಿ ಅಂತಲೂ ನೀವು ಕಳಿಸುವ ತಂಡಕ್ಕೆ ಹೇಳುತ್ತೀರಾ?*

ಇದರರ್ಥ ಬುಶ್-ಗೋರ್ ಯಾರು ಬಂದರೂ ಏನೂ ವ್ಯತ್ಯಾಸವಾಗುವುದಿಲ್ಲ ಎಂತಲ್ಲ. ರಿಪಬ್ಲಿಕನ್ ಪಕ್ಷ 'ಫ್ಯಾಸಿಸ್ಟ್ ಗ್ಯಾಂಗ್'ನ ಹಿಡಿತದಲ್ಲಿದ್ದು ಹೆಚ್ಚು ಪ್ರತಿಗಾಮಿ ಮತ್ತು ಆಕ್ರಾಮಕ ಬಲಪಂಥೀಯ ಧೋರಣೆ ಹೊಂದಿದೆ. ಅಲ್ಲದೆ ಜನ ಸ್ಪಷ್ಟವಾಗಿ ಡೆಮಾಕ್ರೆಟಿಕ್ ಪಕ್ಷಕ್ಕೆ ಒಲವು ತೋರಿದ್ದಾರೆ. ('ಬುಶ್ ಮಹಾ ಹರಾಮಿ'- ಸಂದರ್ಶನವನ್ನು ಬಾಕ್ಸ್‌ನಲ್ಲಿ ನೋಡಿ) ಈ ಎರಡು ಪಕ್ಷಗಳ ವರ್ಗ ಗುಣವನ್ನು ಎತ್ತಿ ಹೇಳುತ್ತಲೇ, ಅಮೆರಿಕದ ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಪ್ರಗತಿಪರ ಶಕ್ತಿಗಳು ಗೋರ್‌ಗೆ ಚುನಾವಣೆಯಲ್ಲಿ ಬೆಂಬಲಿಸಿದ್ದವು. ಹೆಚ್ಚು ಅಪಾಯಕಾರಿಯಾದ ರಿಪಬ್ಲಿಕನ್ ಬುಶ್‌ರನ್ನು ಅಧಿಕಾರದಿಂದ ಹೊರಗಿಡಲು, ಸಣ್ಣ ಅಸಂಘಟಿತ ಎಡಪಕ್ಷಗಳು ರಾಲ್ಫ್ ನಾಟರ್ ಯ ಬೆಂಬಲಕ್ಕೆ ನಿಂತದ್ದು, ಬುಶ್‌ರನ್ನು ಅಧಿಕಾರಕ್ಕೆ ತರಲು ಸಹಾಯ ಮಾಡಿದಂತಾಗಿದೆ.

# ಅಮೆರಿಕದ ಅಧ್ಯಕ್ಷರ ಆಯ್ಕೆ ಹೇಗೆ?

ಅಮೆರಿಕದ ಅಧ್ಯಕ್ಷರ ಆಯ್ಕೆ ನೇರ ಜನಮತದಿಂದ ಅಲ್ಲ. ಅಂದರೆ ಅಮೆರಿಕದ ಮತದಾರರು ನೇರವಾಗಿ ಅಧ್ಯಕ್ಷೀಯ ಚುನಾವಣೆಯಲ್ಲಿ ಮತ ಚಲಾಯಿಸಿದರೂ, ಆ ನೇರ ಮತಗಳ ಆಧಾರದ ಮೇಲೆ ಅಂದರೆ ಅತ್ಯಂತ ಹೆಚ್ಚಿನ ಮತ ಗಳಿಸಿದವರು ಅಧ್ಯಕ್ಷರಾಗಿ ಚುನಾಯಿತರಾಗುವುದಿಲ್ಲ. ಅದರ ಬದಲು 'ಚುನಾವಣಾ ಕಾಲೇಜು' ಎಂಬ ವಿಚಿತ್ರ ಪರೋಕ್ಷ ವ್ಯವಸ್ಥೆ ಇದೆ.



ಕೃಪೆ: ಜನವಾಹಿನಿ

ಆ ವ್ಯವಸ್ಥೆ ಹೀಗಿದೆ: ಅಮೆರಿಕದಲ್ಲಿ 50 ರಾಜ್ಯಗಳಿದ್ದು ಪ್ರತಿ ರಾಜ್ಯಕ್ಕೆ ಅದರ ಜನಸಂಖ್ಯೆಗೆ ಅನುಸಾರವಾಗಿ ಮತಗಳನ್ನು ಹಂಚಿದ್ದಾರೆ. ಒಟ್ಟು ಇಂತಹ ಮತಗಳು 538. ಕ್ಯಾಲಿಫೋರ್ನಿಯದಂತಹ ದೊಡ್ಡ ರಾಜ್ಯಕ್ಕೆ 54 ಮತಗಳು ಅತ್ಯಂತ ಚಿಕ್ಕ ರಾಜ್ಯಗಳಿಗೆ ಕನಿಷ್ಟ 3 ಮತಗಳಿರುತ್ತವೆ. ನ್ಯೂಯಾರ್ಕ್‌ಗೆ 33 ಮತಗಳು, ಟೆಕ್ಸಾಸ್‌ಗೆ 32 ಮತಗಳು, ಫ್ಲಾರಿಡಾಗೆ 25 ಮತಗಳು ಇವೆ. ಪ್ರತಿ ರಾಜ್ಯದಲ್ಲಿ ಅತ್ಯಂತ ಹೆಚ್ಚು ಮತಗಳಿಸಿದ ಅಭ್ಯರ್ಥಿ ಆ ರಾಜ್ಯಕ್ಕೆ ಕೊಡಲಾದ 'ಚುನಾವಣಾ ಕಾಲೇಜ್' ಮತಗಳನ್ನು ಗಳಿಸುತ್ತಾನೆ. ಕ್ಯಾಲಿಫೋರ್ನಿಯಾದಲ್ಲಿ ಅಲ್ ಗೋರ್ ಹೆಚ್ಚಿನ ಮತಗಳಿಸಿದ್ದು ಅವರಿಗೆ ಎಲ್ಲಾ 54 ಮತಗಳು ದೊರೆಯುತ್ತವೆ. ಟೆಕ್ಸಾಸ್‌ನಲ್ಲಿ ಬುಶ್ ಹೆಚ್ಚಿನ ಮತ ಗಳಿಸಿದ್ದು ಎಲ್ಲಾ 32 ಮತಗಳು ಅವರಿಗೆ ದೊರೆಯುತ್ತವೆ. ಈ ರೀತಿ ಎಲ್ಲಾ ರಾಜ್ಯಗಳ ಮತಗಳನ್ನು ಕೊಟ್ಟ ಮೇಲೆ ಬಹುಮತಗಳಿಸಿದವರು ಅಂದರೆ 272 ಮತ ಗಳಿಸಿದವರು ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ.

ಈ ವಿಚಿತ್ರ ವ್ಯವಸ್ಥೆ ಮತಗಳ ಅಂತರ ಹತ್ತಿರವಾಗಿದ್ದಾಗ ವಿಕೃತಿಗಳಿಗೆ ಕಾರಣವಾಗುತ್ತದೆ. ಉದಾಹರಣೆಗೆ ಈ ಬಾರಿ ಅಲ್‌ಗೋರ್‌ಗೆ ಸ್ಪಷ್ಟವಾಗಿ ನೇರ ಮತಗಳಲ್ಲಿ ಬುಶ್‌ಗಿಂತ ಸ್ಪಷ್ಟವಾಗಿ ಎರಡು ಲಕ್ಷ ಹೆಚ್ಚು ಮತ ಸಿಕ್ಕಿದೆ. ಆದರೆ 'ಚುನಾವಣಾ ಕಾಲೇಜು' ಮತಗಳನ್ನು ಲೆಕ್ಕ ಹಾಕಿದರೆ (ಬುಶ್ ಫ್ಲಾರಿಡಾದಲ್ಲಿ ಹೆಚ್ಚಿನ ಮತ ಗಳಿಸಿದರೆ ಫ್ಲಾರಿಡಾದ ಎಲ್ಲಾ 25 ಮತಗಳನ್ನು ಗಳಿಸಿದರೆ) ಬುಶ್ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ನೇರ ಜನರ ಮತಗಳು ಹೆಚ್ಚಿದ್ದು, 'ಚುನಾವಣಾ ಕಾಲೇಜು' ಮತಗಳಲ್ಲಿ ಸೋತದ್ದು ಇದು ಮೊದಲ ಬಾರಿಯಲ್ಲ.

**ಟಿ.ವಿ. ನೆಟ್‌ವರ್ಕ್‌ಗಳು ನಗೆ ಪಾಟಲಾದ್ದು**

ಟಿ.ವಿ. ಅಮೆರಿಕದ ರಾಜಕೀಯದಲ್ಲಿ ಅದರಲ್ಲೂ ಅಧ್ಯಕ್ಷರ ಚುನಾವಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅಧ್ಯಕ್ಷೀಯ ಚುನಾವಣೆ ಪ್ರಚಾರ ಆರಂಭವಾಗುತ್ತಿದ್ದಂತೆ 'ಅಭಿಮತ ಸಂಗ್ರಹ' ನಡೆಸಿ ತಮ್ಮ ಮಧ್ಯಪ್ರವೇಶ ಆರಂಭಿಸುತ್ತವೆ. ಅಭಿಮತ ಸಂಗ್ರಹದಲ್ಲೇ, ಭಾರಿ 'ಗೋಲ್‌ಮಾಲ್' ನಡೆಯುತ್ತವಂತೆ. ಅಭಿಮತ ಸಂಗ್ರಹದ ಮೂಲಕ ಟಿ.ವಿ.ಗಳು ಜನರನ್ನು ತಮಗೆ ಬೇಕಾದ ಹಾಗೆ ತಿರುಗಿಸಲು ಪ್ರಯತ್ನಿಸುತ್ತವೆ. ಚುನಾವಣಾ ಪ್ರಚಾರವೂ ನಡೆಯುವುದು ಟಿ.ವಿ. ಯಲ್ಲಿ ಜಾಹೀರಾತುಗಳ ಮೂಲಕ. ಅಧ್ಯಕ್ಷೀಯ ಅಭ್ಯರ್ಥಿಗಳ ಚರ್ಚೆಗೆ ವೇದಿಕೆ ಸಹ ಟಿ.ವಿ.ಯೇ.

ಚುನಾವಣಾ ದಿನ ಸಹ 'ಎಕ್ಸಿಟ್ ಪೋಲ್'ಗಳನ್ನು ನಡೆಸಿ ರಾಜ್ಯವಾರು ಫಲಿತಾಂಶ ಬೀರಲು ಆರಂಭಿಸುತ್ತವೆ. ಅಮೆರಿಕದ ಪೂರ್ವ ಕರಾವಳಿಯ 'ಸಮಯ' ಪಶ್ಚಿಮ ಕರಾವಳಿಯ ಸಮಯಕ್ಕಿಂತ ಮೂರು ಗಂಟೆ ಮುಂದಿದೆ. ಪೂರ್ವ ಕರಾವಳಿಯ ಚುನಾವಣೆ ಮುಗಿಯುತ್ತಿದ್ದಂತೆ ಅಲ್ಲಿನ 'ಚುನಾವಣಾ ಫಲಿತಾಂಶ ಭವಿಷ್ಯ' ಆರಂಭಿಸುತ್ತವೆ. ಪಶ್ಚಿಮ ಕರಾವಳಿಯಲ್ಲಿ ಚುನಾವಣೆ ಇನ್ನೂ ಮುಗಿದಿರುವುದಿಲ್ಲ. ಇದಲ್ಲದೆ ಮಧ್ಯಾಹ್ನದಿಂದಲೇ ಸಿಕ್ಕಿರುವ ಸೀಮಿತ 'ಟ್ರೆಂಡ್' ಗಳ ಆಧಾರದ ಮೇಲೆ 'ಫಲಿತಾಂಶ' ಪ್ರಕಟಿಸಿಬಿಡುತ್ತವೆ. ಹೆಚ್ಚಾಗಿ ಅವುಗಳ ಭವಿಷ್ಯವಾಣಿ ನಿಜವಾಗುತ್ತವೆ. ಆದರೆ ಈ ಬಾರಿ ಟಿ.ವಿ. ನೆಟ್‌ವರ್ಕ್‌ಗಳು ಭಾರಿ ರೀತಿಯಲ್ಲಿ ಎಡವಿ, ನಗೆಪಾಟಲಾದ್ದು ಮಾತ್ರವಲ್ಲ ತೀವ್ರ ಟೀಕೆಗೂ ಒಳಗಾಗಿವೆ.

ಮಧ್ಯಾಹ್ನ ಹೊತ್ತಿಗೆ ಫ್ಲಾರಿಡಾವನ್ನು ಗೋರ್ ಗೆದ್ದಿದ್ದಾರೆ ಎಂದು ಎಲ್ಲಾ ಟಿ.ವಿ. ನೆಟ್‌ವರ್ಕ್‌ಗಳು ಘೋಷಿಸಿದವು. ಕೆಲವೇ ಗಂಟೆಗಳಲ್ಲಿ 'ಇಲ್ಲ ಬುಶ್ ಗೆದ್ದಿದ್ದಾರೆ' ಎಂದವು. ಇನ್ನೂ ಕೆಲವು ಗಂಟೆಗಳಲ್ಲಿ 'ಇಲ್ಲ. ಯಾರೂ ಗೆದ್ದಿದ್ದಾರೆ ಎಂದು ಹೇಳಲು ಆಗುತ್ತಿಲ್ಲ. ಅಂತರ ಭಾರೀ ಕಡಿಮೆ ಇದೆ'. ಟಿ.ವಿ. ನೆಟ್‌ವರ್ಕ್‌ಗಳ 'ಭವಿಷ್ಯ ಹೇಳುವ ತರಾತುರಿ'ಯನ್ನು ಎಲ್ಲರೂ ತೀವ್ರವಾಗಿ ಟೀಕಿಸಿದ್ದಾರೆ.

# 'ಬುಶ್ ಮಹಾ ಹರಾಮಿ' ಹರ್‌ಜೀತ್ ಸಿಂಗ್

ಇದು ಅಮೆರಿಕಾದಲ್ಲಿ ಟ್ಯಾಕ್ಸಿ ಡ್ರೈವರ್ ಆಗಿ ಕೆಲಸ ಮಾಡುತ್ತಿರುವ ಹರಜೀತ್ ಸಿಂಗ್‌ರ ಜತೆ ಸಂದರ್ಶನ - ಅಮೆರಿಕದ ಅಧ್ಯಕ್ಷೀಯ ಚುನಾವಣೆ ಬಿಕ್ಕಟ್ಟು ಬಗ್ಗೆ.

ಐಕ್ಯರಂಗ: ನೀವು ಎಷ್ಟು ವರ್ಷದಿಂದ ಅಮೆರಿಕದಲ್ಲಿ ಕೆಲಸ ಮಾಡುತ್ತಿದ್ದೀರಿ? ನೀವು ಅಮೆರಿಕದ ಪ್ರಜೆಯಾಗಿದ್ದೀರಾ?

ಹರಜೀತ್: ನಾನು ಇಲ್ಲಿಗೆ ಬಂದು ಇಪ್ಪತ್ತೈದು ವರ್ಷ ಆಯ್ತು. ಇತ್ತೀಚೆಗೆ ಅಮೆರಿಕನ್ ಪ್ರಜೆಯಾದೆ.

ಐಕ್ಯರಂಗ: ನೀವು ಇತ್ತೀಚಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಯಾರಿಗೆ ಓಟು ಮಾಡಿದಿರಿ?

ಸಿಂಗ್: ನಾನು ಓಟ್ ಮಾಡಲಿಲ್ಲ. ಯಾರಿಗೆ ಪುರುಸೊತ್ತು ಇರುತ್ತದೆ ಹೇಳಿ?

ಐ: ಇಲ್ಲಿ ಚುನಾವಣೆ ದಿನ ರಜ ಎಲ್ಲಾ ಬಂದ್ ಅಲ್ವಾ?

ಸಿಂಗ್.: ಇಲ್ಲಿ ನನ್ನಂತಹ ಟ್ಯಾಕ್ಸಿ ಡ್ರೈವರ್‌ಗೆ ಬಿಡಿ, ಯಾರಿಗೂ ರಜೆ ಇಲ್ಲ. ಬೇಕಾದರೆ ಸಂಬಳ ಕಳಕೊಂಡು ಹೋಗಿ ಓಟ್ ಮಾಡಬೇಕು. ಆದ್ದರಿಂದಲೋ ಏನೋ ಇಲ್ಲಿ ಅರ್ಧಜನ ಓಟು ಹಾಕಿದರೆ ಹೆಚ್ಚು. ಈ ಬಾರಿಯೂ ಅರ್ಧದಷ್ಟೇ ಜನ ಓಟು ಮಾಡಿದ್ದು. ಇಲ್ಲಿ ಇಂಡಿಯಾದ ಉಲ್ಟಾ. ನಮ್ಮಲ್ಲಿ ಬಡವರಲ್ಲಿ ಹೆಚ್ಚಿನವರು ಓಟು ಮಾಡ್ತಾರಲ್ಲ. ಇಲ್ಲಿ ಬಿಳಿಯರು, ಶ್ರೀಮಂತರು ಓಟು ಮಾಡ್ತಾರೆ. ಅವರಿಗೆ ಸಮಯ ಇರ್ತದೆ. ಬಾಸ್‌ಗಳು ತಾನೆ?

ಐ. ಬುಶ್-ಗೋರ್ ಕಾದಾಟ ನಡೀತಿದೆಯಲ್ಲ, ಇವರಲ್ಲಿ ಯಾರು ಸರಿ ಅಂತೀರಿ? ಫ್ಲಾರಿಡಾದಲ್ಲಿ ಬುಶ್ ಚುನಾವಣಾ ಅಕ್ರಮ ಮಾಡಿದ್ದಾರೆ ಅಂತಿರಾ?

ಸಿಂಗ್: ಈ ಬುಶ್ ಮಹಾ ಹರಾಮಿ ಸಾರ್. ಅವನು ಮಾತ್ರವಲ್ಲ, ಅವನ ತಮ್ಮನೂ ಮಹಾ ಹರಾಮಿ. ಎಲ್ಲಾ ಥರದ ಗೋಲ್ ಮಾಲ್ ಮಾಡಿದ್ದಾರೆ. ಇಲ್ಲದಿದ್ದರೆ ಕೈನಿಂದ ಎಣಿಕೆಗೆ ಅಷ್ಟೆಲ್ಲಾ ಯಾಕೆ ವಿರೋಧ ಮಾಡ್ತಾರೆ. ಅವರದ್ದೆಲ್ಲಾ ಗೋಲ್ ಮಾಲ್ ಹೊರಬರ್ತದಂತ ಭಯ. ಇವರು ಮಾತ್ರವಲ್ಲ ಅವರ ಅಪ್ಪ ಬುಶ್ ಇನ್ನೂ ದೊಡ್ಡ ಹರಾಮಿ. ಅಂವ ಸಿಐಎ ಡೈರೆಕ್ಟರ್ ಆಗಿದ್ದವನು ಗೊತ್ತ್ತು ತಾನೆ? ಸಿಐಎ ಅಂದರೆ ಏನು ಅಂದ್ಕೊಂಡಿದ್ದೀರಿ? ಸಿಐಎ-ಮಾಫಿಯಾ ಎಲ್ಲಾ ಒಂದೇ. ಆತನಿಗೆ ಆಡಳಿತದಲ್ಲಿ, ಪೋಲೀಸಿನಲ್ಲಿ, ಗೂಢಾಚಾರ ಪಡೆ, ಮಾಫಿಯಾದಲ್ಲಿ ಭಾರಿಸಂಪರ್ಕ ಇದೆ. ಆತ ಅದನ್ನೆಲ್ಲಾ ಬಳಸಿ ಏನೂ ಬೇಕಾದರೂ ಮಾಡಬಲ್ಲ, ಮಾಡಿರ್‍ತಾನೆ.

ಐ: ಫ್ಲಾರಿಡಾದ ಈ ಚುನಾವಣಾ ಅಕ್ರಮ ಅಪರೂಪದ ಘಟನೆ ಅಲ್ವಾ?

ಸಿಂಗ್: ಅಯ್ಯೋ ಎಲ್ಲಿದ್ದೀರಾ ನೀವು? ಫ್ಲಾರಿಡಾದಲ್ಲಿ ಮಾತ್ರವಲ್ಲ ಹಲವು ರಾಜ್ಯಗಳಲ್ಲಿ ಈ ಬಾರಿ ಮಾತ್ರವಲ್ಲ ಇಂತಹ ಅಕ್ರಮ ನಡೀತಾ ಇರ್ತದೆ. ಈ ಬಾರಿ ಹೊರಬಂದಿದೆ ಅಷ್ಟೆ. ಅಂತರ ಬಹಳಕಡಿಮೆ ಇರುವುದರಿಂದ. ಇಲ್ಲದಿದ್ದರೆ ಕರಿಯರು, ಲ್ಯಾಟಿನೋ ಇತರ ಅಲ್ಪಸಂಖ್ಯಾತರು ಇರುವ ಪ್ರದೇಶಗಳ ಮತಎಣಿಕೆಗೆ ಸೇರಿಸದಿರುವುದು, ಅವರನ್ನು ಬೆದರಿಸುವುದು, ಅವರ ಚುನಾವಣಾ ನೊಂದಣಿ ತಿರಸ್ಕರಿಸುವುದು ಇವೆಲ್ಲಾ ಸಾಮಾನ್ಯ ಇಲ್ಲಿ.

ಐ.: ನೀವು ಯಾರು ಬರಬೇಕು ಅಂತೀರಿ? ಬುಶ್ ಬಂದರೆ ಒಳ್ಳೆಯದಾ? ಗೋರ್ ಬಂದರೆ ಒಳ್ಳೆಯದಾ?

ಸಿಂಗ್: ಅದರ ಬಗ್ಗೆ ಏನೂ ಅನುಮಾನವಿಲ್ಲ. ಗೋರ್ ಬರಬೇಕು. ಯಾಕೆ ಅಂತಿರಾ? ಬುಶ್ ಮಾತ್ರ ಅಲ್ಲ , ರಿಪಬ್ಲಿಕನರೆಲ್ಲಾ ಹರಾಮಿಗಳು. ಶ್ರೀಮಂತರ ಪರ. ಜನಗಳಿಗೆ ಇದ್ದ ಸ್ವಲ್ಪ ಸವಲತ್ತುಗಳು-ಮೆಡಿಕಲ್, ಸೋಶಿಯಲ್ ಸೆಕ್ಯೂರಿಟಿ, ಉದ್ಯೋಗ ಎಲ್ಲಾ ಕಿತ್ತು ಹಾಕಬೇಕು ಅಂತಾರೆ. ಡೆಮಾಕ್ರಟರು ಜನಗಳಿಗೆ ಇದ್ದ ಸವಲತ್ತುಗಳನ್ನು ಉಳಿಸಿಕೊಳ್ಳಬೇಕು ಅಂತಾರೆ. ಅಧಿಕಾರಕ್ಕೆ ಬಂದ ಮೇಲೆ ಮಾತ್ರ ಎಲ್ಲಾ ಒಂದೇ ಥರ ಆಡ್ತಾರೆ. ದೊಡ್ಡ ಕಂಪನಿಗಳ ಕೈಗೊಂಬೆಯಾಗ್ತಾರೆ. ಜನಗಳನ್ನು ಮರೆತುಬಿಡ್ತಾರೆ.

# ಫ್ಲಾರಿಡಾ ಅಮೆರಿಕದ 'ಬಿಹಾರ'ವೇ?

ಫ್ಲಾರಿಡಾ ಅಮೆರಿಕದ ದಕ್ಷಿಣ-ಪೂರ್ವದ ಒಂದು ರಾಜ್ಯ. ಕ್ಯೂಬಾಗೆ ಅತಿ ಹತ್ತಿರವಾದ ಮಿಯಾಮಿ ಇರುವ ರಾಜ್ಯ. ಫ್ಲಾರಿಡಾ ಅಪರಾಧಗಳು ಹೆಚ್ಚು ಇರುವ ರಾಜ್ಯಗಳಲ್ಲೊಂದು. ಈ ಬಾರಿಯ ಅಧ್ಯಕ್ಷೀಯ ಚುನಾವಣೆಗಳಲ್ಲಿ ಫ್ಲಾರಿಡಾ ಕುಖ್ಯಾತವಾಗಿದೆ-ಚುನಾವಣಾ ಅಕ್ರಮಗಳಿಗೆ. ಇಂಡಿಯಾದ ಪತ್ರಿಕೆಗಳಲ್ಲಿ ಒಂದು 'ಫ್ಲಾರಿಡಾ ಅಮೆರಿಕದ ಬಿಹಾರ' ಎಂದು ಬಿಟ್ಟಿತ್ತು.

ಫ್ಲಾರಿಡಾದಲ್ಲಿ ನಡೆದದ್ದಾದರೂ ಏನು? ಈ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ತೀವ್ರ ಅಕ್ರಮ ನಡೆದಿದೆ ಎಂದು ಆಪಾದಿಸಲಾಗಿದ್ದು, ಅಲ್ಲಿನ ಆಡಳಿತ ಪುನಃ ಮತ ಎಣಿಕೆಗೆ ಆಜ್ಞೆ ಮಾಡಿದೆ. ಈ ನಾಲ್ಕು ಜಿಲ್ಲೆಗಳಲ್ಲಿ ಹಲವು ರೀತಿಯ ಅಕ್ರಮಗಳ ಬಗ್ಗೆ ವರದಿಯಾಗಿದೆ. ದೊಡ್ಡ ಪ್ರಮಾಣದಲ್ಲಿ ಕರಿಯಲು ಮತ್ತು ಲ್ಯಾಟಿನೋಗಳನ್ನು ಮತ ಚಲಾಯಿಸದಂತೆ ಬೆದರಿಸಲಾಯಿತು. ಇವರು ಹೆಚ್ಚಿನ ಸಂಖ್ಯೆಯಲ್ಲಿರುವ ಮತಗಟ್ಟೆಗಳ ಮತಗಳನ್ನು ಎಣಿಕೆಗೆ ತೆಗೆದುಕೊಂಡಿಲ್ಲ. ಇದು ಕರಿಯರ ಸಂಘಟನೆ ಯೊಂದು ನಡೆಸಿದ ತನಿಖೆಯಿಂದ ಗೊತ್ತಾಗಿದ್ದು.

ಇವೆಲ್ಲಕ್ಕಿಂತ ಮುಖ್ಯವಾಗಿ ಚುನಾವಣಾ ಪತ್ರದಲ್ಲೇ ಅಕ್ರಮಗಳು ಪತ್ತೆಯಾದವು. ಅಮೆರಿಕದ ಚುನಾವಣಾ ವ್ಯವಸ್ಥೆ ಪ್ರಕಾರ ಅಭ್ಯರ್ಥಿಗಳ ಹೆಸರಿನ ಮುಂದೆ ಒಂದು ತೂತು 'ಪಂಚ್' ಮಾಡಬೇಕು. ಅಭ್ಯರ್ಥಿಗಳ ಹೆಸರು ಇರುವ ಕಾಲಂ ಮತ್ತು ಪಂಚ್ ಮಾಡಲು ಇರುವ ಕಾಲಂ ಪತ್ರಗಳಲ್ಲಿ ಏರುಪೇರಾಗಿದ್ದು ಗೋರ್‌ನ ಮತಗಳು ಇನ್ನೊಂದು ಪಕ್ಷದ ಅಭ್ಯರ್ಥಿ ಪ್ಯಾಟ್ ಬುರ್‌ನಾನ್‌ಗೆ ಹೋಗುವಂತೆ(ಕಂಪ್ಯೂಟರ್ ಈ ಕಾರ್ಡುಗಳನ್ನು ಓದುವ ರೀತಿಯಿಂದ) ಆಗಿತ್ತು. ಪ್ಯಾಟ್ ಬುಕನಾನ್ ಈ ಬಾರಿ ರಿಫಾರ್ಮ್ ಪಾರ್ಟಿಯ ಅಭ್ಯರ್ಥಿಯಾಗಿದ್ದ ಈತ ಹಿಟ್ಲರ್‌ನ 'ಫ್ಯಾನ್' ಆಗಿದ್ದು, ನೂರಾರು ಜ್ಯೂಗಳು ನಾವು 'ಗೋರ್' ಗೆ ಓಟು ಮಾಡಲು ಹೋದರೆ ತಪ್ಪು ಚುನಾವಣಾ ಪತ್ರದಿಂದ ಅದು ಬುಕನಾನ್‌ಗೆ ಹೋಗುವಂತೆ ಆಗಿದೆ ಎಂದು ಪ್ರದರ್ಶನ ನಡೆಸಿದರು. ಇನ್ನೊಂದು ಜಿಲ್ಲೆಯಲ್ಲಿ ಚುನಾವಣಾ ಪತ್ರ ಹೇಗಿತ್ತೆಂದರೆ ಗೋರ್ ಮತ ಇನ್ನೊಂದು ಚಿಕ್ಕ ಪಕ್ಷದ ಅಭ್ಯರ್ಥಿಗೆ ಹೋಗುವಂತೆ ಇತ್ತು. ಈ ಅಭ್ಯರ್ಥಿ ಇಡೀ ದೇಶದಲ್ಲಿ ಗಳಿಸಿದ ಮತದ ಅರ್ಧ ಈ ಜಿಲ್ಲೆಯೊಂದರಲ್ಲೇ ಗಳಿಸಿದ್ದಾನಂತೆ! ಇಂತಹ ಪತ್ರಗಳು ಡೆಮಾಕ್ರೆಟಿಕ್ ಬಹುಮತ ಇರುವ ಮತಗಟ್ಟೆಗಳಲ್ಲೇ ಇತ್ತು ಎಂಬುದು ಗುರುತರ ಆಪಾದನೆ. ಚುನಾವಣಾ ಪತ್ರಗಳನ್ನು ಮುದ್ರಿಸಿ ಹಂಚುವ ವ್ಯವಸ್ಥೆ ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿ. ರಿಪಬ್ಲಿಕನ್ ಅಭ್ಯರ್ಥಿಯ ತಮ್ಮ ಫ್ಲಾರಿಡಾ ಗವರ್ನರ್ ಆಗಿದ್ದು ಅಲ್ಲಿನ ರಿಪಬ್ಲಿಕನ್ ಸರ್ಕಾರ ದೊಡ್ಡ ಪ್ರಮಾಣದಲ್ಲಿ ವ್ಯವಸ್ಥಿತವಾಗಿ ಚುನಾವಣಾ ಪತ್ರಗಳು ಅಕ್ರಮ ನಡೆಸಿದೆ ಎಂಬುದು ಆಪಾದನೆ. ಇದೇ ರೀತಿ ಮತ ಎಣಿಕೆಯಲ್ಲೂ ಸರ್ಕಾರ ಕೈಯಾಡಿಸಿದೆ ಎಂದು ಆಪಾದನೆ.

ಇದರಿಂದಾಗಿ ಫ್ಲಾರಿಡಾ ಇಡೀ ರಾಜ್ಯದಲ್ಲಿ ಬುಶ್-ಗೋರ್ ನಡುವೆ ಕೇವಲ 300 ಮತಗಳ ವ್ಯತ್ಯಾಸ ಬಂದಾಗ, ಚುನಾವಣಾ ಅಕ್ರಮಗಳ ಬಗ್ಗೆ ವಿವಾದ ಇನ್ನಷ್ಟು ತೀವ್ರವಾಯಿತು. ಈ ನಾಲ್ಕು ಜಿಲ್ಲೆಗಳಲ್ಲಿ ಪುನರ್ ಎಣಿಕೆ ನಡೆಸಲು ಈ ಜಿಲ್ಲೆಗಳ ಆಡಳಿತ ನಿರ್ಧರಿಸಿತು. ಇದನ್ನು ರಿಪಬ್ಲಿಕನ್ ತೀವ್ರವಾಗಿ ವಿರೋಧಿಸಿದರು. ಈ ವಿವಾದ ಕೋರ್ಟಿನ ಕಟ್ಟೆ ಹತ್ತಿತು. ನವೆಂಬರ್ 27 ರ ಒಳಗೆ ಈ ಪುನರ್ ಎಣಿಕೆ ಮುಗಿಯುವಂತೆ ರಾಜ್ಯದ ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಇದರಿಂದಾಗಿ ರಾಜ್ಯದ ಫಲಿತಾಂಶಗಳನ್ನು ಘೋಷಿಸುವುದನ್ನು ತಡೆ ಹಿಡಿಯಲಾಗಿದೆ.

ಇನ್ನೂ 3-4 ರಾಜ್ಯಗಳಲ್ಲಿ ಅಂತರ ಇದೇ ರೀತಿ ಕಡಿಮೆ ಇದ್ದು ಇಂತಹ ಅಕ್ರಮಗಳು ನಡೆದಿರುವುದು ಎಂದು ಶಂಕಿಸಲಾಗಿದೆ. ಇವೆಲ್ಲಾ ನೋಡಿದರೆ ಫ್ಲಾರಿಡಾವನ್ನು ಬಿಹಾರಕ್ಕೆ ಹೋಲಿಸುವುದು ನ್ಯಾಯವಲ್ಲ. ಬಿಹಾರದಲ್ಲೂ ಮತ ಎಣಿಕೆಯಲ್ಲಿ ಅಕ್ರಮಗಳು ಇಷ್ಟರವರೆಗೆ ಕೇಳಿ ಬಂದಿಲ್ಲ. ಫ್ಲಾರಿಡಾದಲ್ಲಿ ಚುನಾವಣೆಯ ಎಲ್ಲಾ ಹಂತಗಳಲ್ಲಿ ಅಕ್ರಮ ನಡೆಯುತ್ತಿರುವಂತೆ ಕಾಣುತ್ತದೆ.

ಜೂನ್ 5, 2000 ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಹಾಸನ ಜಿಲ್ಲಾಧಿಕಾರಿಯವರಿಂದ ಒಂದು ಘೋಷಣೆ ಹಾಸನ ನಗರವನ್ನು 'ಪ್ಲಾಸ್ಟಿಕ್' ರಹಿತವಾಗಿಸಿ ಸ್ವಚ್ಛನಗರ ಮಾಡುತ್ತೇವೆ, ಪರಿಸರ ವಾದಿಗಳಿಗೆ(ನಗರಕ್ಕೆ ಸೀಮಿತ) ಖುಷಿಯೋ ಖುಷಿ! ನಮ್ಮ ಅಧಿಕಾರಶಾಹಿಗೆ ನಗರ ಪರಿಸರ ಮಾಲಿನ್ಯ ಮಾತ್ರ ತೊಂದರೆ ಕೊಡುತ್ತದೆ. ಮಾಲಿನ್ಯ ನಿಯಂತ್ರಣ ಮಂಡಳಿಗಳು ಅಘೋಷಿತವಾಗಿ ನಗರಕ್ಕೆ ಮಾತ್ರ ಸೀಮಿತವಾಗಿವೆ. ಸರ್ಕಾರಿ ಕೃಪಾಪೋಷಿತ ಪರಿಸರವಾದಿಗಳಿಗೆ ಅವರ ಸುತ್ತಮುತ್ತಲಿನ ಗಲೀಜು ಮಾತ್ರ ಕಣ್ಣಿಗೆ ಬೀಳುತ್ತದೆ. ಅದೂ ಬೇಕೆನಿಸಿದಾಗ! ಹೊರ ವಲಯದಲ್ಲಿನ ಮಾಲಿನ್ಯದ ಬಗ್ಗೆ ಕೇರೇ ಇಲ್ಲ. ಇದೆಲ್ಲದರ ಪರಿಣಾಮ ಮುಗ್ಧ ಹಳ್ಳಿಗರ ಮೇಲೆ ಅಲ್ಲಿನ ಜಾನುವಾರುಗಳ ಮೇಲೆ ಬೀರುತ್ತಿರುವುದು ವಿಪರ್ಯಾಸವಲ್ಲವೇ? ಇಷ್ಟೆಲ್ಲ ಮಾತುಗಳನ್ನು ಹಾಸನ ನಗರದಿಂದ ಕೇವಲ 2. ಕಿ.ಮಿ. ದೂರದಲ್ಲಿರುವ 'ಬಿಟ್ಟಗೌಡನ ಹಳ್ಳಿ' ಗ್ರಾಮವನ್ನು ನೋಡಿದಾಗ ಹೇಳಬೇಕೆನಿಸುತ್ತದೆ. ನಮ್ಮ ಬೇಜವಾಬ್ದಾರಿ ಅಧಿಕಾರಿಗಳಿಂದಾಗಿ ಬಿಟ್ಟಗೌಡನ ಹಳ್ಳಿ ಗ್ರಾಮದ ಮುಗ್ಧ ಜನತೆ ಮತ್ತು ಪರಿಸರದ ಮೇಲೆ ಉಂಟಾಗಿರುವ ದುಷ್ಪರಿಣಾಮ ಒಂದೆರಡಲ್ಲ...



# ಮಾಲಿನ್ಯದ ಮಡುವಿನಲ್ಲಿ ಬಿಟ್ಟಗೌಡನ ಹಳ್ಳಿ

**ಇದು ಪ್ರಾರಂಭವಾದದ್ದು ಹೀಗೆ...**

ಬಿಟ್ಟಗೌಡನ ಹಳ್ಳಿ 300 ಕ್ಕೂ ಹೆಚ್ಚು ನಿವಾಸಿಗಳನ್ನು ಹಾಗೂ 2 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ್ದು ಹಾಸನ-ಮಡಿಕೇರಿ ಹೆದ್ದಾರಿಯು ಈ ಗ್ರಾಮದ ಮಧ್ಯೆ ಹಾಯ್ದು ಹೋಗುತ್ತವೆ. ಈ ಗ್ರಾಮದ ಪಕ್ಕದಲ್ಲೇ ಅದೂ ಹೆದ್ದಾರಿಯ ಪಕ್ಕದಲ್ಲೇ ವಿಷಯುಕ್ತ ಕಸದ ರಾಶಿ ಬಿದ್ದಿದೆ. ಹಲವಾರು ತಿಂಗಳಿಂದ ದಿನಕ್ಕೆ13 ರಿಂದ 20 ಟ್ರಾಕ್ಟರ್‌ಗಳಂತೆ ನಗರದ ವಿಷಯುಕ್ತ ಕಸವನ್ನು ಸುರಿಯುತ್ತಿದ್ದು ಈ ಕಸದಲ್ಲಿ ಎಂದೂ ಕರಗದ, ಕೃಷಿಯೋಗ್ಯ ಭೂಮಿಯನ್ನು ಹಾಳು ಮಾಡುವ 'ಪ್ಲಾಸ್ಟಿಕ್' ವಸ್ತುಗಳು ಹೇರಳವಾಗಿರುವುದು ವಿಶೇಷ. ಇನ್ನೂ ಒಂದು ಅಪಾಯಕಾರಿ ವಿಷಯವೆಂದರೆ ಆಸ್ಪತ್ರೆ ತ್ಯಾಜ್ಯ ವಸ್ತುಗಳು ಉಪಯೋಗಿಸಿ ಬಿಸುಟ ಸಿರಿಂಜ್‌ಗಳು, ಸೂಜಿ, ಬ್ಲೇಡ್‌ಗಳು, ಬ್ಯಾಂಡೇಜ್, ಪೈಪ್‌ಗಳು, ಶಸ್ತ್ರ ಚಿಕಿತ್ಸೆಯ ನಂತರ ಎಸೆಯಲಾಗುವ ಅಪಾಯಕಾರಿ ವಸ್ತುಗಳು ಅಷ್ಟೇ ಏಕೆ ಕೆಲವು ಭ್ರೂಣಗಳನ್ನು ತಂದು ಎಸೆದಿರುವ ಉದಾಹರಣೆಗಳಿವೆ. ಇದರ ಜೊತೆಗೆ ಸಾಮಾನ್ಯವೆಂಬಂತೆ ಸತ್ತ ನಾಯಿಗಳು, ಮೀನು ಮತ್ತು ಮಾಂಸ ಮಾರುಕಟ್ಟೆಯ ತ್ಯಾಜ್ಯ ವಸ್ತುಗಳು ಹಾಗೂ ಕಾರ್ಖಾನೆ ಕೀಟನಾಶಕ ಗೊಬ್ಬರದ ಅಂಗಡಿ ಮತ್ತು ಔಷಧಿ ಅಂಗಡಿಗಳಿಂದ ಎಸೆದ ಅತ್ಯಂತ ಅಪಾಯಕಾರಿ ವಿಷಯುಕ್ತ ರಾಸಾಯನಿಕಗಳು ಬೇಕಾಬಿಟ್ಟಿಯಾಗಿ ಚೆಲ್ಲಾಡಿರುವುದನ್ನು ಇಲ್ಲೆಲ್ಲಾ ಕಾಣಬಹುದು.

ಈ ಕಸ ಚೆಲ್ಲಿರುವ ಜಾಗ ಸುಮಾರು 10 ಎಕರೆ ಜಾಗವನ್ನು ಆಕ್ರಮಿಸಿದ್ದು ಅದರ ಪಕ್ಕದಲ್ಲೇ ಇಳಿಜಾರಿನಲ್ಲಿ ಒಂದು ಕೆರೆ ಇದೆ. ಮಳೆಗಾಲದಲ್ಲಿ ಆ ಕೆರೆಗೆ ಹರಿದು ಹೋಗುವ ವಿಷಯುಕ್ತ ನೀರನ್ನು ಅಂದಾಜು ಮಾಡಲಾಗುವುದಿಲ್ಲ.

ಪ್ರಾರಂಭದಲ್ಲಿ ಇದನ್ನೆಲ್ಲ ಮನಸ್ಸಿಗೆ ತಂದುಕೊಳ್ಳದ ಅಲ್ಲಿಯ ಮುಗ್ಧಜನ, ದಿನೇ ದಿನೇ ಊರಿನಲ್ಲಿ ನೊಣ-ಸೊಳ್ಳೆಗಳ ರಾಜ್ಯಭಾರ ಹೆಚ್ಚಾದಂತೆ ಜನ ಜಾನುವಾರು ಖಾಯಿಲೆ ಬೀಳುವುದು ಪ್ರಾರಂಭವಾದಾಗ ಕಾರಣ ಹುಡುಕದೇ ವಿಧಿ ಇರಲಿಲ್ಲ. ಈಗ ಅಲ್ಲಿನ ಮಕ್ಕಳಿಗೆ ಅತಿಬೇಧಿ, ಮಲೇರಿಯಾ, ರಾಸುಗಳಿಗೆ ಗೆರಸು ರೋಗ



ಬೆಟ್ಟದಂತಾಗಿರುವ ಕಸದ ರಾಶಿ

ಸಾಮಾನ್ಯವಾಗಿದೆ. ವಾತಾರಣವೇ ಗಬ್ಬೆದ್ದು ದುರ್ವಾಸನೆಯುಕ್ತ ಗಾಳಿ ಇಡೀ ಊರನ್ನೇ ಆವರಿಸಿವೆ. ಇಷ್ಟೆಲ್ಲಾ ಆದರೂ ಜಿಲ್ಲೆಯ ಯಾವುದೇ ಅಧಿಕಾರಿಗಳ ಪರಿಸರವಾದಿಗಳ ಮೂಗಿಗೆ ಆ ವಾಸನೆ ಬಡಿಯದೇ ಇದ್ದದ್ದು ಆ ಊರಿನ ದುರಂತ.

ಮಳೆಯ ನೀರಿನಿಂದ ಕೆರೆ ಸೇರಿದ ಅಪಾಯಕಾರಿ ರಾಸಾಯನಿಕಗಳನ್ನು ಕುಡಿವ ಜಾನುವಾರಗಳು ಗುರುತಿಲ್ಲದ ರೋಗಗಳಿಗೆ ತುತ್ತಾಗಿವೆ ಮತ್ತು ಆ ಕಸದ ಕೊಡುಗೆಯಾದ ನೊಣಗಳು ಆಹಾರ ಪದಾರ್ಥಗಳ ಮೇಲೆಲ್ಲಾ ಹಾರಾಡಿ ಮಲಿನಗೊಳ್ಳುತ್ತಿವೆ. ಒಟ್ಟಾರೆ ಅಲ್ಲಿ ಈಗಾಗಲೇ ಉಂಟಾಗಿರುವ ದುಷ್ಪರಿಣಾಮಗಳು ಕಸ ತೆಗೆದ ಮೇಲೂ ಹಲವಾರು ತಲೆಮಾರುಗಳಿಗೆ ಮುಂದುವರೆಯುವ ಸಾಧ್ಯತೆಯಿದೆ.

ಈ ವಿಚಾರವನ್ನು ಮೊದಲು ಬೆಳಕಿಗೆ ತಂದದ್ದು ಬಿಟ್ಟಗೌಡನ ಹಳ್ಳಿಯ ಡಿವೈಎಫ್‌ಐ ಘಟಕ, ಅಲ್ಲಿನ ಸ್ಥಳೀಯ ಘಟಕವು ಜಿಲ್ಲಾ ಡಿವೈಎಫ್‌ಐ ಗೆ ನೀಡಿದ ಮಾಹಿತಿ ಅನುಸರಿಸಿ, ಡಿವೈಎಫ್‌ಐ ನ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್, ಅಧ್ಯಕ್ಷರಾದ ಡಿ.ಟಿ.ಶಿವಣ್ಣ ಹಾಗೂ ಜಿಲ್ಲಾ ಜಂಟಿ ಕಾರ್ಯದರ್ಶಿ ಗಿರೀಶ್ ಮೊದಲು ಭೇಟಿ ನೀಡಿದಾಗ ಆ ಸ್ಥಳದ ಪರಿಶೀಲನೆ ನಡೆಸುವುದಿರಲಿ, ಅದರ ಬಳಿ ಸಾಗುವುದೇ ಅಸಾಧ್ಯವಾಗಿತ್ತು. ನಾವೆಂದೂ ಕಲ್ಪಿಸಿಕೊಳ್ಳಲಸಾಧ್ಯವಾದ ದುರ್ವಾಸನೆ ಅಲ್ಲಿ ಬೇರೂರಿತ್ತು. ಅಂತಹ ಪರಿಸ್ಥಿತಿಯಲ್ಲಿ ಪರಿಶೀಲನೆ ನಡೆಸಿದ ತಂಡ ಕೂಡಲೇ ಸ್ಥಳೀಯ ಘಟಕದ ಸುರೇಶ್, ಸ್ವಾಮಿ, ವೆಂಕಟೇಶ್, ರವಿಗಳವರೊಡನೆ ಸಮಾಲೋಚಿಸಿ ಜಿಲ್ಲಾಧಿಕಾರಿಗೆ ಮನವಿ ನೀಡುವುದೆಂದು ನಿರ್ಧರಿಸಿ, ಕೂಡಲೇ ನಗರಕ್ಕೆ ಧಾವಿಸಿ ಜಿಲ್ಲಾಧಿಕಾರಿಯವರಿಗೆ ಪರಿಸ್ಥಿತಿಯ ಸಂಪೂರ್ಣ ವಿವರದೊಂದಿಗೆ ಮನವಿ ಪತ್ರ ಕೊಡಲಾಯಿತು. ಆದಾಗ್ಯೂ ಜಿಲ್ಲಾಡಳಿತದಿಂದ ಯಾವುದೇ ಪ್ರತ್ಯುತ್ತರ ಬಾರದೆ ಇದ್ದುದರಿಂದ ಈ ವಿಷಯವನ್ನು ಜಿಲ್ಲಾ ಮಟ್ಟದಲ್ಲಿ ಗಮನ ಸೆಳೆಯಲು ಆ ಸ್ಥಳದಲ್ಲೇ ಒಂದು ಪತ್ರಿಕಾಗೋಷ್ಠಿ ನಡೆಸಿದಾಗ ಅಲ್ಲಿಗೆ ಬಂದ ಪತ್ರಕರ್ತರು ಆ ಸ್ಥಳ ನೋಡಿ ಅಲ್ಲಿ ದಾರಿಯಲ್ಲಿ ಎಲ್ಲೆಂದರಲ್ಲಿ ಬಿದ್ದಿದ್ದ ಸಿರೆಂಜ್, ಸೂಜಿ, ಬ್ಲೇಡ್‌ಗಳನ್ನು ನೋಡಿ ಪರಿಸ್ಥಿತಿಯ ಅರಿವಾಗಿ ಬಹುತೇಕ ಎಲ್ಲಾ ಪತ್ರಿಕೆಗಳಲ್ಲಿ ಛಾಯಾಚಿತ್ರ ಸಮೇತ ವರದಿ ಮಾಡಿದಾಗಲೂ ಜಿಲ್ಲಾಡಳಿತ ಮತ್ತು ನಗರಸಭೆ ಮಲಗೇ ಇತ್ತು. ಇದನ್ನೆಲ್ಲಾ ಕಂಡು ರೋಸಿಹೋದ ಅಲ್ಲಿನ ಡಿವೈಎಫ್‌ಐ ಸದಸ್ಯರು ಕೊನೆಗೆ ತುಳಿದದ್ದು, ಹೋರಾಟದ ಹಾದಿ.

ಮೊದಲು ಅವರು ಅಲ್ಲಿಯ ಪರಿಸ್ಥಿತಿಯ ಬಗ್ಗೆ ಕರಪತ್ರ ಮುದ್ರಿಸಿ ಇಡೀ ಗ್ರಾಮದ ಜನತೆಯನ್ನು ಒಗ್ಗೂಡಿಸುವಲ್ಲಿ ಸಫಲರಾದರು. ಆ ಊರಿಗೆ ಹೊಲಸು ಹೊತ್ತು ಬರುವ ಎಲ್ಲಾ ನಗರಸಭೆ ಟ್ರಾಕ್ಟರ್‌ಗಳನ್ನು ತಡೆಯುವುದೆಂದು ನಿರ್ಧರಿಸಿ ಸಜ್ಜಾದರು. ಅದರ ಹಿಂದಿನ ರಾತ್ರಿ ಆ ಊರಿಗೆ ಬಂದ ಪೋಲೀಸ್ ತುಕಡಿ ಚಳುವಳಿಯ ದಿಕ್ಕು ತಪ್ಪಿಸಿ ಹೋರಾಟವನ್ನು ಮುರಿಯುವ ತಂತ್ರ ಹೂಡಿತು. ಚಳುವಳಿಗಾರರನ್ನು ದಿಕ್ಕು ತಪ್ಪಿಸಲು ಪ್ರಚಾರದ ಆಮಿಷ ಒಡ್ಡಿದಾಗ ಚಳುವಳಿಗಾರರಿಗೆ ಈ ಅನ್ಯಾಯದ ಹಿಂದಿರುವ ಕಾಣದ ಕೈಗಳು ಸ್ಪಷ್ಟವಾಗತೊಡಗಿದವು. ಅಂತೂ ಚಳುವಳಿಕಾರರು ಪೋಲೀಸರ ಮಧ್ಯಸ್ಥಿಕೆಗೆ ಬಗ್ಗದೇ ವಾಹನ ತಡೆ ಚಳುವಳಿ ಪ್ರಾರಂಭಿಸಿದ ದಿನ ನೇರವಾಗಿ ಅಲ್ಲಿಗೆ ಬಂದ ನಗರ ಸಭೆ ಆಯುಕ್ತ ಪರಮೇಶ್ ಪರಿಸ್ಥಿತಿಯ ಗಂಭೀರತೆಯ ಅರಿವಾಗಿ ಎರಡು ದಿನ ಗಡುವು ಕೇಳಿದಾಗ ಹೋರಾಟವನ್ನು ಮುಂದೂಡ ಬೇಕಾಯಿತು. ಅದೇ ದಿನ ಆಯುಕ್ತರು ಮಾತುಕತೆಗೆ ಕರೆದಿದ್ದರಿಂದ ನಗರಸಭೆಯಲ್ಲಿ ವಾದ ಪ್ರತಿವಾದಗಳ ನಂತರ ನಗರಸಭೆಯವರು ಕಸವನ್ನು ಆ ಸ್ಥಳದಿಂದ ತೆಗೆಯುವುದು ಹಾಗೂ ಸ್ಥಳ ಬದಲಾಯಿಸುವುದು ಅಸಾಧ್ಯವೆಂದು ತಿಳಿಸಿ ಅಲ್ಲಿ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುವುದು ಹಾಗೂ ಅದನ್ನೆಲ್ಲ ಗುಂಡಿ ತೆಗೆಸಿ ಮುಚ್ಚಿಸಿ ವೈಜ್ಞಾನಿಕವಾಗಿ ಅದನ್ನು ವಿಲೇವಾರಿ ಮಾಡಲು ಕೂಡಲೇ ಜಿಲ್ಲಾಧಿಕಾರಿಗಳ ಬಳಿ ಚರ್ಚಿಸಿ 6.5 ಲಕ್ಷ ಬಿಡುಗಡೆಗೊಳಿಸಿ ಕಣ್ಣೀರು ಒರೆಸುವ ನಾಟಕವಾಡಿದರು. ಆದರೆ ಇದರಿಂದ ಗ್ರಾಮದ ಸಮಸ್ಯೆ ಬಗೆಹರಿಯುವುದಿಲ್ಲ ಹಾಗೂ ಯಾವುದೇ ರೀತಿಯ ವೈಜ್ಞಾನಿಕ ವಿಲೇವಾರಿಯೂ ಈಗ ಸಾಧ್ಯವಾಗದ ಪರಿಸ್ಥಿತಿ ತಲುಪಿದ್ದು ಅಲ್ಲದೆ ಈಗಾಗಲೇ ಉಂಟಾಗಿರುವ ಅನಾಹುತದ ಪರಿಣಾಮವಾಗಿ ಆ ಕಸವನ್ನು ಇನ್ನು ಮುಂದೆ ಅಲ್ಲಿ ಹಾಕದಿರುವುದೇ ಒಳ್ಳೆಯದು ಎಂದು ಡಿವೈಎಫ್‌ಐ ವಾದಿಸಿದಾಗ ಗ್ರಾಮಸ್ಥರು ಆ ಕಸವನ್ನು ಇನ್ನು ಮುಂದೆ ಅಲ್ಲಿಗೆ ಹಾಕಕೂಡದೆಂದು ತಿಳಿಸಿ ಅಧಿಕಾರಿಗಳ ತೀರ್ಮಾನವನ್ನು ಪ್ರತಿಭಟಿಸಿ ಕಛೇರಿಯಿಂದ ಹೊರನಡೆದರು. ಇನ್ನೊಮ್ಮೆ ಜಿಲ್ಲಾಧಿಕಾರಿ ಕನಿರಾಂರವರನ್ನು ಭೇಟಿ ಮಾಡಲು ನಿರ್ಧರಿಸಿ ಮರುದಿನ 30ಜನ ಸ್ಥಳೀಯರೊಂದಿಗೆ ಡಿವೈಎಫ್‌ಐನ ಜಿಲ್ಲಾ ಸಮಿತಿ ನಿಯೋಗ ವೊಂದನ್ನು ರಚಿಸಿಕೊಂಡು ಜಿಲ್ಲಾ ಧಿಕಾರಿಗಳ ಭೇಟಿಗೆ ಪ್ರಯತ್ನಸಿದಾಗ ಅಲ್ಲಿ ನಡೆದದ್ದೇ ಬೇರೆ!

ಆ ಉರಿಬಿಸಿಲಿನಲ್ಲಿ ದಣಿದು ಜಿಲ್ಲಾಧಿಕಾರಿಗಳ ಬರುವಿಕೆಗೆ ಕಾಯುತ್ತಿದ್ದ ಜನ ಅವರು ಬಂದ ಮೇಲೆ ನಿಯೋಗವನ್ನು ಕಛೇರಿ ಒಳಗೆ ಬಿಡಲು ಅನುಮಾನಿಸಿದ ಜಿಲ್ಲಾಧಿಕಾರಿ ಬಿ.ಪಿ.ಕನಿರಾಂ ರವರು ಒಳಗೆ ಹೋದ ತಕ್ಷಣ ಮೊದಲೇ ನಿರ್ಧರಿಸಿದ್ದರೇನೋ ಎಂಬಂತೆ ಒಳಹೋದ ನಿಯೋಗದ ಅಹವಾಲನ್ನು ಕೇಳದೇ ತಾಳ್ಮೆ ಕಳೆದುಕೊಂಡು ಒಮ್ಮಲೇ ರೇಗಿ ತೀರ ಅಸಂಬದ್ಧವಾಗಿ ಖಾರವಾಗಿ ಬೇಜವಾಬ್ದಾರಿ ತನದಿಂದ ವರ್ತಿಸಿದರು. ಈ ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತಕ್ಕೆ ಮನಸ್ಸಿಲ್ಲ ಎಂಬುದು. ಒಬ್ಬ ಜಿಲ್ಲಾ ದಂಡಾಧಿಕಾರಿ ಈ ರೀತಿಯೂ ಇರಬಹುದೆ, ಈ ರೀತಿ ಮಾತನಾಡಬಹುದೆ ಎನ್ನುವುದನ್ನು ಜಿಲ್ಲಾಧಿಕಾರಿಗಳ ಅಂದಿನ ಮಾತಿನ ವೈಖರಿಯನ್ನೇ ನೋಡಿ ತಿಳಿಯಬೇಕು. ಸುಮಾರು 20ನಿಮಿಷಗಳ ಜಗಳದ ನಂತರ ತಣ್ಣಗಾದ ಜಿಲ್ಲಾಧಿಕಾರಿಗಳು ಮಾತನಾಡಿ ಯಾವುದೇ ಭರವಸೆ ತೀರ್ಮಾನಗಳಿಲ್ಲದೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಹೊರಬೀಳಬೇಕಾಯ್ತು. ಜೊತೆಗೆ ಇಷ್ಟಕ್ಕೂ ಮುಂದೆ ನೀವು ಹೋರಾಟ ಪ್ರಾರಂಭಿಸಿದರೆ ಪೋಲೀಸ್ ಕಾರ್ಯಾಚರಣೆ ನಡೆಸಬೇಕಾಗುತ್ತದೆ ಎಂಬ ಬೆದರಿಕೆಯೊಂದಿಗೆ ಆ ಮಾತುಕತೆ ಮುರಿದುಬಿತ್ತು.

ಅಷ್ಟರಲ್ಲಿ ಎಚ್ಚೆತ್ತುಕೊಂಡಿದ್ದ ಸ್ಥಳೀಯ ಪುಡಾರಿಗಳು ಆ ಗ್ರಾಮದಲ್ಲಿ ಗೊಂದಲವೆಬ್ಬಿಸಿ ಡಿವೈಎಫ್‌ಐನ ವಿರುದ್ಧವೇ ಅಪಪ್ರಚಾರ ಮಾಡಿ ಚಳುವಳಿಯ ದಿಕ್ಕು ತಪ್ಪಿಸಿ ರಾಜಕೀಯ ಲಾಭಪಡೆಯಲು ಯತ್ನಿಸಿ ವಿಫಲರಾದರು. ಕೊನೆ ಪ್ರಯತ್ನ ಎಂಬಂತೆ ಗ್ರಾಮಸ್ಥರು ಸ್ಥಳೀಯ ಬಿಜೆಪಿ ಶಾಸಕ ಹನುಮೇಗೌಡರಲ್ಲಿ ಮನವಿ ಮಾಡಿಕೊಂಡಾಗಲೂ ಅವರು ಪೊಳ್ಳು ಭರವಸೆ ನೀಡಿ ತಮ್ಮೆದುರೇ ನಾಟಕವಾಡಿದಾಗ ಡಿವೈಎಫ್‌ಐ ಅದನ್ನು ಪ್ರತಿಭಟಿಸದೇ ಬೇರೆ ದಾರಿಯಿರಲಿಲ್ಲ.

ಆಯಾ ಜಿಲ್ಲಾಡಳಿತದ ಸರ್ವಾಧಿಕಾರಿ ಧೋರಣೆಯಿಂದ ಸದ್ಯಕ್ಕೆ ಆ ಸಮಸ್ಯೆಗೆ ಯಾವುದೇ ಶಾಶ್ವತ ಪರಿಹಾರ ಇನ್ನೂ ಸಿಕ್ಕಿಲ್ಲ. ಆದರೆ ಡಿವೈಎಫ್‌ಐ ಇದುವರೆಗಿನ ಹೋರಾಟದ ಫಲವಾಗಿ ಸದ್ಯಕ್ಕೆ ಅಲ್ಲಿ ಸ್ವಚ್ಛತಾಕಾರ್ಯ ಜರುಗಿದೆ. ನಗರ ಸಭೆಯವರು ಪ್ರತಿದಿನ ಕಡಿಮೆ ಕಸ ಸುರಿಯುವಂತೆ ಆಗಿದೆ. ಹಾಗೂ ಇಡೀ ಜಿಲ್ಲಾಡಳಿತವೇ ಅಲ್ಲಿನ ವಿಷಯಕ್ಕೆ ತಲೆ ಕೆಡಿಸಿಕೊಂಡು ಚಡಪಡಿಸುವಂತಾಗಿದೆ. ಡಿವೈಎಫ್‌ಐನ ಮುಂದಿನ ಚಟುವಟಿಕೆಗಳ ಮೇಲೆ ನಿಗಾ ಇರಿಸಲಾಗಿದೆ.

ಈ ಮಧ್ಯೆ ಕಾನೂನಿನ ತೊಡಕಿನಿಂದಾಗಿ ಸದ್ಯಕ್ಕೆ ಹೋರಾಟವನ್ನು ಮುಂದೂಡಿ ಮುಂದಿನ ಹೋರಾಟಕ್ಕೆ ಅಲ್ಲಿಯ ಜನ ಡಿವೈಎಫ್‌ಐ ನೇತೃತ್ವದಲ್ಲಿ ಸಜ್ಜಾಗುತ್ತಿದ್ದಾರೆ. ಆರಂಭದಲ್ಲಿ ಸ್ವಚ್ಛತಾಕಾರ್ಯವನ್ನು ತ್ವರಿತಗತಿಯಲ್ಲಿ ಪ್ರಾರಂಭಿಸಿದ ಜಿಲ್ಲಾಡಳಿತ ಇತ್ತೀಚೆಗೆ ಗಮನ ಕೊಡುವುದನ್ನು ಬಿಟ್ಟಿದೆ. ಅಲ್ಲಿಂದ ಕಸ ತೆಗಿಸದೇ ಹೋರಾಟ ನಿಲ್ಲಿಸೆವು ಎಂಬ ಹಠದೊಂದಿಗೆ ಗ್ರಾಮಸ್ಥರಲ್ಲಿ ಅಸಮಾಧಾನ ಹೊಗೆಯಾಡುತ್ತಿದೆ. ಅದು ಸ್ಫೋಟಗೊಂಡಾಗ ಮಾತ್ರ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಾಣಬಹುದಾಗಿದೆ. ಹೋರಾಟನ್ನು ವ್ಯಾಪಕ ಹಾಗೂ ತೀವ್ರಗೊಳಿಸಲು ಸಿದ್ಧತೆ ನಡೆದಿದೆ.

ವರದಿ: ಧರ್ಮೇಶ್
ಫೋಟೋ: ನವೀನ್ ಕುಮಾರ್

## ಜಿಲ್ಲಾಧಿಕಾರಿ ಬಿ.ಪಿ.ಕನಿರಾಂ ನುಡಿಮುತ್ತು

**ಡಿವೈಎಫ್‌ಐ:** ಬಿಟ್ಟಗೌಡನಹಳ್ಳಿಯ ಜನ ನಗರದ ಕಸದಿಂದ ಸಾಯುತ್ತಿದ್ದಾರೆ.

**ಕನಿರಾಂ :** ಸಾಯಲಿ ಬಿಡ್ರಿ, ನಾವೇನು ಮಾಡುವುದಕ್ಕಾಗುತ್ತದೆ. ದೇಶದಲ್ಲಿ ಏಡ್ಸ್‌ನಿಂದ ಜನ ಸಾಯುತ್ತಿದ್ದಾರೆ. ಏನುಮಾಡುವುದು. ಇಲ್ಲಿ ಜನ (ಕೈಯನ್ನು ಅಸಭ್ಯವಾಗಿ ಅಲ್ಲಾಡಿಸುತ್ತಾ) ದಿನಕ್ಕೆ ಮೂರು ಮೂರು ಸಲ ಮಾಡಿ ಏಡ್ಸ್ ಹತ್ತಿಸಿಕೊಂಡರೆ ನಾವೇನು ಮಾಡುವುದು?

**ಡಿವೈಎಫ್‌ಐ:** ಅದಕ್ಕೂ ನಮಗೂ ಏನು ಸಂಬಂಧ ಸಾರ್, ನೀವು ನಮ್ಮ ಸಮಸ್ಯೆ ಬಗೆಹರಿಸಿ

**ಕನಿರಾಂ:** ನೀವ್ಯಾರ್ರಿ, ನಿಮಗೇನು ಕೆಲಸ, ಡಿವೈಎಫ್‌ಐ ಗೂ ಇದಕ್ಕೂ ಏನು ಸಂಬಂಧ. ...... ನಾವು ಅದನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುತ್ತಿದ್ದೇವೆ. ತಜ್ಞರನ್ನು ಕರೆಸಿ ಅಲ್ಲಿ ಆಗಿರಬಹುದಾದ ಸಮಸ್ಯೆಗಳನ್ನು ಚರ್ಚಿಸುತ್ತೇವೆ. ಅಲ್ಲಿಯವರೆಗೂ ನೀವು ಸುಮ್ಮನಿರಿ.

**ಡಿವೈಎಫ್‌ಐ:** ಸಾರ್ ವೈಜ್ಞಾನಿಕ ರೀತಿಯ ವಿಲೇವಾರಿ ನಡೆದಿಲ್ಲ ಹಾಗೂ ಈ ಪರಿಸ್ಥಿತಿಯಲ್ಲಿ ಅದು ಸಾಧ್ಯವಿಲ್ಲ.

**ಕನಿರಾಂ:** 'ವಿಜ್ಞಾನ' ಎಂದರೆ ನಿಮಗೆ ಗೊತ್ತೇನ್ರಿ, ಏನ್ರಿ ಓದಿದ್ದೀರಿ ನೀವು. ಹೆಚ್ಚಿಗೆ ಕೂಗಾಡಿದರೆ ಪೋಲೀಸ್ ಕರೆಸಬೇಕಾಗುತ್ತದೆ.

(ಇದು ಅಂದು ನಡೆದ ಮಾತುಕತೆಯ ಕೆಲವು ತುಣುಕುಗಳಷ್ಟೆ, ಇನ್ನೂ ಇಲ್ಲಿ ಬರೆಯಲಾಗದ ಮಾತುಗಳದೆಷ್ಟೊ)

ಇತಿಹಾಸದ ಪುಟಗಳಿಂದ

## ಬಡತನ ಮತ್ತು ಓದಿನ ಹಸಿವು

# ಜನತೆಯ ನಡುವೆಯಿಂದ

ಮೌನವಾಗಿ ನಾನು ಅಚ್ಚರಿಪಡುತ್ತಿದ್ದೆ. ಯಾವ ವಿಷಯ ಯೋಚಿಸುತ್ತಿರುವೆ ಎಂದು ಒಬ್ಬ ವ್ಯಕ್ತಿಯನ್ನು ಕೇಳುವುದೇ ಹೇಗೆ? ಅಂತಹ ಪ್ರಶ್ನೆಗೆ ಅವನು ಉತ್ತರವೀಯುವುದಾದರೂ ಹೇಗೆ? ಒಬ್ಬ ವ್ಯಕ್ತಿ ಏಕಕಾಲದಲ್ಲೇ ಎಷ್ಟೋ ವಿಷಯ ಯೋಚಿಸಬಹುದು - ಅವನ ಕಣ್ಣುಗಳು ಈಗ ಕಾಣುತ್ತಿರುವುದನ್ನು ಅಥವಾ ನಿನ್ನೆ ಕಂಡುದನ್ನು, ಇಲ್ಲವೆ ಕಳೆದ ವರ್ಷ ನೋಡಿದುದನ್ನು, ಈ ಎಲ್ಲಾ ಚಿತ್ರಗಳು ಅಸ್ಪಷ್ಟವಾಗಿರುತ್ತವೆ. ಸಿಕ್ಕುಸಿಕ್ಕಾಗಿರುತ್ತವೆ, ಸದಾ ಚಲಿಸುತ್ತಿರುತ್ತವೆ ಸದಾಬದಲಾಗುತ್ತಿರುತ್ತವೆ.

'ಮಾಸ್ಕೋ ಕರಪತ್ರ'ದಲ್ಲಿದ್ದ ಲೇಖನಗಳು ಒಂದೇ ಸಂಜೆಗೆ ಸಾಲುತ್ತಿದ್ದವು. ಮಲಗುವ ಮನೆಯಲ್ಲಿ ಮಂಚದ ಕೆಳಗೆ ರಾಶಿ ಹಾಕಿದ್ದ ಮಾಸಪತ್ರಿಕೆಗಳನ್ನು ಓದಬಹುದೆಂದು ನಾನು ಸಲಹೆ ಮಾಡಿದೆ.

ಮಂಚದ ಕೆಳಗಿದ್ದ ಸಂಪುಟಗಳಿಂದ ನನಗೆ ದೊಡ್ಡ ಸಹಾಯವಾಯಿತು. ಅವುಗಳಿಂದಾಗಿ, ನಿಯತಕಾಲಿಕಗಳನ್ನು ಅಡುಗೆ ಮನೆಗೆ ಒಯ್ದು ರಾತ್ರಿ ಹೊತ್ತು ಓದುವ ಹಕ್ಕನ್ನು ನಾನು ಗಳಿಸಿದೆ.

ನನ್ನ ಅದೃಷ್ಟವೆನ್ನಬೇಕು, ದಾದಿ ಕುಡಿತದ ಗೀಳಿಗಾಗಿ ಹೊರಹೋದೊಡನೆ, ಮುದುಕಿ ನಿದ್ದೆ ಹೋಗಲೆಂದು ಮಲಗುವ ಮನೆಗೆ ತೆರಳುತ್ತಿದ್ದಳು. ನಾನು ಪುಸ್ತಕ ಓದುವುದಕ್ಕೆ ವಿಕ್ಟರನ ಆಕ್ಷೇಪವಿರಲಿಲ್ಲ. ಎಲ್ಲರೂ ನಿದ್ದೆ ಹೋದ ಬಳಿಕ ಆತ ಸದ್ದಿಲ್ಲದೆ ಪೋಷಾಕು ಧರಿಸಿ, ಬೆಳಗಿನವರೆಗೂ ಮಾಯವಾಗುತ್ತಿದ್ದ. ನನ್ನ ಒಡತಿ ಯಾವಾಗಲೂ ಮೊಂಬತ್ತಿಯನ್ನು ಇನ್ನೊಂದು ಕೊಠಡಿಗೆ ಒಯ್ಯುತ್ತಿದ್ದಳು. ಹೀಗಾಗಿ ನನ್ನಲ್ಲಿ ಯಾವ ದೀಪವೂ ಇರುತ್ತಿರಲಿಲ್ಲ. ಮೊಂಬತ್ತಿ ಕೊಳ್ಳಲು ನನ್ನ ಹತ್ತಿರ ಹಣವಿರಲಿಲ್ಲವಾದ್ದರಿಂದ, ಮೊಂಬತ್ತಿಗಳಿಂದ ಕರಗಿ ಸುರಿಯುತ್ತಿದ್ದ ಮೇಣವನ್ನು ಗುಟ್ಟಾಗಿ ಸಂಗ್ರಹಿಸಿ, ಸಾರ್ಡಿನುಗಳ ಖಾಲಿ ಡಬ್ಬದಲ್ಲಿ ಹಾಕಿಡುತ್ತಿದ್ದೆ. ದೇವರ ದೀಪದ ಎಣ್ಣೆಯಿಂದ ಅದನ್ನು ಮುಚ್ಚಿ, ನೂಲನ್ನು ತಿರುವಿ ಒಂದು ಬತ್ತಿ ಮಾಡುತ್ತಿದ್ದೆ. ಈ ರೀತಿಯಾಗಿ, ಹೊಗೆ ಬರುತ್ತಿದ್ದ ಒಂದು ದೀಪ ಸಿದ್ಧವಾಗುತ್ತಿತ್ತು. ಅದನ್ನು ಒಲೆಯ ಮೇಲ್ಗಡೆ ಇರಿಸುತ್ತಿದ್ದೆ.

ಗಾತ್ರದ ಸಂಪುಟಗಳ ಪುಟ ಮಗುಚಿದಾಗಲೆಲ್ಲ, ಜ್ಯೋತಿಯ ಪುಟ್ಟ ಕೆಂಪು ನಾಲಗೆ ಹೊಯ್ದಾಡಿ, ನಂದಿಹೋಗುವ ಭೀತಿ ತೋರುತ್ತಿತ್ತು. ಬತ್ತಿ ವಾಸನೆ ಬರುತ್ತಿದ್ದ ಮೇಣದಲ್ಲಿ ಮುಳುಗುತ್ತಲೇ ಇತ್ತು. ಹೊಗೆ ನನ್ನ ಕಣ್ಣಗಳನ್ನು ಕುಕ್ಕುತ್ತಿತ್ತು. ಆದರೆ ಈ ತೊಂದರೆಗಳಿಗಿಂತಲೂ, ಚಿತ್ರಗಳನ್ನು ವೀಕ್ಷಿಸಿ ಅವುಗಳ ಕೆಳಗಿದ್ದ ವಿವರಣೆಗಳನ್ನು ಓದುವುದರಲ್ಲಿ ನಾನು ತೋರುತ್ತಿದ್ದ ಹರ್ಷ ಅದೆಷ್ಟೋ ಪಾಲು ಮಿಗಿಲಾಗಿತ್ತು.

ಐಶ್ವರ್ಯವಂತ ಶಹರಗಳಿದ್ದ, ಎತ್ತರದ ಪರ್ವತಗಳಿದ್ದ, ಸುಂದರ ಕಡಲದಂಡೆಗಳಿದ್ದ ಈ ಪ್ರಪಂಚವನ್ನು ಕುರಿತ ನನ್ನ ನೋಟ ಹೆಚ್ಚು ಹೆಚ್ಚು ವಿಶಾಲವಾಗುತ್ತ ನಡೆಯಿತು, ಬದುಕು ಅತ್ಯಾಶ್ಚರ್ಯಕರ ರೀತಿಯಲ್ಲಿ ವಿಸ್ತಾರಗೊಂಡಿತು.

ಚಿತ್ರಗಳ ಕೆಳಗಿನ ವಿವರಗಳು, ಬೇರೆ ಭೂಮಿಗಳನ್ನು ಕುರಿತು, ಬೇರೆ ಜನರನ್ನು ಕುರಿತು, ಸರಳವಾಗಿ ಹೇಳಿದವು. ಗತಕಾಲದ ಹಾಗೂ ವರ್ತಮಾನ ಕಾಲದ ಅನೇಕ ಘಟನೆಗಳ ಬಗೆಗೆ ಅವು ತಿಳಿಸಿದವು. ಅವುಗಳಲ್ಲೆಷ್ಟೋ ನನಗೆ ಅರ್ಥವಾಗಲಿಲ್ಲ. ಇದರಿಂದ ನನಗೆ ಕೆಡುಕೆನಿಸಿತು. ಕೆಲವೇಳೆ 'ಪ್ರಜ್ಞಾವಾದ' 'ನಿರಂತರವಾದ', ಚಾರ್ಟಿಸ್ಟ್' ಇಂತಹ ವಿಚಿತ್ರ ಪದಗಳು ನನ್ನ ಮೆದುಳನ್ನು ಇರಿಯುತ್ತಿದ್ದವು. ಸಾಕೋ ಸಾಕೆನಿಸುವಷ್ಟು ಅವು ಹಿಂಸೆ ಕೊಡುತ್ತಿದ್ದವು. ಬೇರೆಲ್ಲವನ್ನೂ ಹಿಂದಕ್ಕೆ ತಳ್ಳಿ ಮನಸ್ಸನ್ನೆಲ್ಲ ತಾವೇ ಆಕ್ರಮಿಸುತ್ತಿದ್ದವು. ಈ ಪದಗಳ ಅರ್ಥವನ್ನು ಕಂಡು ಹಿಡಿಯಲಾರದೇ ಹೋದನೆಂದರೆ, ಎಂದೆಂದೂ ಬೇರೇನೂ ಅರ್ಥವಾಗದು ಎಂದು ನನಗೆ ಅನಿಸುತಿತ್ತು. ಎಲ್ಲ ರಹಸ್ಯಗಳ ಹೊಸ್ತಿಲಲ್ಲಿ ಕಾವಲಿರುತ್ತಿದ್ದುದೇ ಆ ಪದಗಳು. ಎಷ್ಟೋ ಸಾರೇ ಮಾಂಸಕ್ಕೆ ಚುಚ್ಚಿದ ಲೋಹದ ಚೂರುಗಳಂತೆ, ಇಡೀ ವಾಕ್ಯಗಳೇ ನನ್ನ ನೆನಪಿನಲ್ಲಿ ಉಳಿಯುತ್ತಿದ್ದವು. ಬೇರೇನನ್ನು ಕುರಿತು ಯೋಚಿಸುವುದಕ್ಕೂ ಅವು ಅಸ್ಪದಕೊಡುತ್ತಿರಲಿಲ್ಲ.

ಕೆಲ ವಿಚಿತ್ರ ಸಾಲಗಳನ್ನು ಓದಿದುದು ನನಗೆ ನೆನಪಿದೆ


ಮರಳುಕಾಡ ಮೇಲಿನಿಂದ ಸಾಗಿರುವನು ಅಟ್ಟಿಲಾ,
ಉಕ್ಕಿನುಡುಪು ಧರಿಸಿಹ, ಹೂಣರ ನಾಯಕ
ಗೋರಿಯಷ್ಟೆ ಕರಿಯವ, ಅದರಷ್ಟೇ ಸೀರವ.

"ಹೂಣರು? ಅವರು ಯಾರೋ-ದೆವ್ವಕ್ಕೆ ಮಾತ್ರ ಗೊತ್ತು. ಪ್ರಾಯಶಃ ಬರೆ ಕೆಲ ಬಿಕ್ಷುಕರಿರಬಹುದು"

ಅಸಮ್ಮತಿಸೂಚಕವಾಗಿ ತನ್ನ ತಲೆಯನ್ನು ಆತ ಅಲುಗಿಸಿದ

ನಿನ್ನ ತಲೆ ತುಂಬಾ ಕಸ ಸೇರ್ಕೊಂಡಿದೆ ಪೆಶ್ಕೋವ್. ಇದು ಏನೇನೂ ಒಳ್ಳೆಯದಲ್ಲ" ಒಳ್ಳೆಯದೋ ಕೆಟ್ಟದೋ, ಅರ್ಥವನ್ನಂತೂ ನಾನು ತಿಳಿಯುವುದು ಅಗತ್ಯವಿತ್ತು.

ಔಷಧದ ಅಂಗಡಿಗೆ ಹೋಗಿ, ಸ್ನೇಹಪರವಾದ



ಕೆಮಿಸ್ಟನನ್ನು ಕೇಳಬೇಕೆಂದು ತೀರ್ಮಾನಿಸಿದೆ. ಅವನಿಗೆ ತಿಳುವಳಿಕೆಯನ್ನು ಸೂಚಿಸುವ ಮುಖಭಾವವಿತ್ತು. ತನ್ನ ದೊಡ್ಡ ಮೂಗಿನ ಮೇಲೆ, ಬಂಗಾರದ ಚೌಕಟ್ಟಿನ ಕನ್ನಡಕವನ್ನು ಆತ ಧರಿಸಿದ್ದ.

ಕೆಮಿಸ್ಟನಾದ ಪಾವೆಲ್ ಗೋಲ್ಡ್‌ಬರ್ಗ್ ಅಂದ

'ಹೂಣರು, ಕಿರ್ಗಿಜ್ ಜನರ ಹಾಗೆ ಅಲೆಯುವ ಜನಾಂಗ. ಈಗ ಅವರು ಇಲ್ಲವೇ ಇಲ್ಲ. ಅವರ ವಂಶವೇ ಅಳಿದುಹೋಯಿತು.'

ನನಗೆ ನಿರಾಸೆಯಾಯಿತು. ಅಸಮಾಧಾನವೆನಿಸಿತು. ಹಾಗಾದುದು ಹೂಣರ ವಂಶ ಅಳಿಯತೆಂದಲ್ಲ. ನನ್ನನ್ನು ಅಷ್ಟೊಂದು ಹಿಂಸೆಗೆ ಗುರಿಮಾಡಿದ್ದ ಈ ಪದದ ಅರ್ಥ ಇಷ್ಟೊಂದು ಸರಳವೆನಿಸಿತಲ್ಲ, ನನ್ನ ಮಟ್ಟಿಗೆ ಯಾವ ಮಹತ್ವವೂ ಅದಕ್ಕೆ ಇಲ್ಲದೆ ಹೋಯಿತಲ್ಲ - ಎಂಬ ಕಾರಣದಿಂದ.

ಆದರೆ ಹೂಣರಿಗೆ ನಾನು ಅಬಾರಿಯಾದೆ. ಅವರಿಗೆ ಸಂಬಂಧಿಸಿದ ನನ್ನ ಈ ಅನುಭವದ ಬಳಿಕ, ಪದಗಳು ನನಗೆ ತೊಂದರೆ ಕೊಡುವುದು ನಿಂತಿತು. ಅಟ್ಟಿಲಾನ ಕೃಪೆಯಿಂದಾಗಿ, ಕೆಮಿಸ್ಟ್ ಗೋಲ್ಡ್‌ಬರ್ಗನ ಪರಿಚಯ ನನಗಾಯಿತು.

ಪಾಂಡಿತ್ಯಪೂರ್ಣ ಪದಗಳೆಲ್ಲದರ ಸರಳ ಅರ್ಥ ಈ ಮನುಷ್ಯನಿಗೆ ಗೊತ್ತಿತ್ತು. ಪ್ರತಿಯೊಂದು ರಹಸ್ಯದ ಕೀಲಿಕೈಯೂ ಅವನ ಬಳಿ ಇತ್ತು. ಎರಡು ಬೆರಳುಗಳಿಂದ ತನ್ನ ಕನ್ನಡಕವನ್ನು ಆತ ಸರಿಪಡಿಸುತ್ತಿದ್ದ. ದಪ್ಪಗಿನ ಗಾಜುಗಳ ಮೂಲಕ ನನ್ನ ಕಣ್ಣುಗಳೊಳಕ್ಕೆ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದ. ನನ್ನ ತಲೆಯೊಳಕ್ಕೆ ಸಣ್ಣ ಮೊಳೆಗಳನ್ನು ಹೊಡೆಯುವವನಂತೆ ನನ್ನೊಡನೆ ಮಾತನಾಡುತ್ತಿದ್ದ.

"ನನ್ನ ಕಿರಿಯ ಸ್ನೇಹಿತನೇ, ಪದಗಳು ಮರದ ಮೇಲಿರುವ ಎಲೆಗಳ ಹಾಗೆ. ಎಲೆಗಳು ಯಾಕೆ ಹಾಗಿದೆ ಅನ್ನೋದನ್ನು ತಿಳಿಯೋದಕ್ಕೆ, ಮರ ಹೇಗೆ ಬೆಳಿತದೆಂತ ಮೊದಲು ತಿಳಿಕೋಬೇಕು. ನೀನು ಅಭ್ಯಾಸ ಮಾಡ್ಬೇಕು. ಪುಸ್ತಕಗಳು ಸುಂದರವಾದೊಂದು ಉದ್ಯಾನವಿದ್ದ ಹಾಗೆ ನನ್ನ ಕಿರಿಯ ಸ್ನೇಹಿತೆ. ಸೊಗಸಾದದ್ದು, ಉಪಯುಕ್ತವಾದದ್ದು-ಎಲ್ಲಾ ಈ ಉದ್ಯಾನದಲ್ಲಿ ಸಿಗ್ತವೆ"

ಯಾವಾಗಲೂ ಎದೆಯುರಿಯಿಂದ ನರಳುತ್ತಿದ್ದ ದೊಡ್ಡವರಿಗಾಗಿ ಸೋಡಾ ಮತ್ತು ಮ್ಯಾಗ್ನೀಸಿಯಾ ತರಲು, ಎಳೆಯ ಕೂಸುಗಳಿಗಾಗಿ ಸುವಾಸನೆ ಎಣ್ಣೆ ಹಾಗೂ ಔಷಧಿಗಳನ್ನು ತರಲು, ಕೆಮಿಸ್ಟರ ಅಂಗಡಿಗೆ ಆಗಾಗ್ಗೆ ನಾನು ಓಡುತ್ತಿದ್ದೆ. ಕೆಮಿಸ್ಟನ ಸರಳಬೋಧನೆಗಳಿಂದ ಸ್ಫೂರ್ತಿಗೊಂಡು ಪುಸ್ತಕಗಳ ಬಗೆಗೆ ಹೆಚ್ಚು ಗಂಭೀರವಾದ ಧೋರಣೆಯನ್ನು ನಾನು ತಳೆದೆ. ಮುಂದೆ, ನನಗೆ ಅದರ ಅರಿವಿಲ್ಲದೆಯೇ, ಕುಡುಕನಿಗೆ ವೋಡ್ಕಾ ಅವಶ್ಯಕವೆನಿಸುವಂತೆ, ನನ್ನ ಪಾಲಿಗೆ ಪುಸ್ತಕಗಳು ಅನಿವಾರ್ಯವಾದವು.

ತೀರಾ ಭಿನ್ನವಾದ ಬದುಕನ್ನು, ಮಹಾಬಯಕೆಗಳಿಂದ ಭಾವೋದ್ವೇಗಗಳಿಂದ ಕೂಡಿದ್ದು ಪಾತಕ ಇಲ್ಲವೆ ಸಾಹಸದೆಡೆಗೆ ಜನರನ್ನು ಒಯ್ಯುವ ಬದುಕನ್ನು ಪುಸ್ತಕಗಳು ನನಗೆ ತೋರಿಸಿ ಕೊಟ್ಟುವು. ನನ್ನ ಸುತ್ತಲಿನ ಜನರು, ಪಾತಕಕ್ಕಾಗಲೀ ಸಾಹಸದ ಕೆಲಸಕ್ಕಾಗಲೀ ಅಸಮರ್ಥರೆಂಬುದನ್ನು ನಾನು ಗಮನಿಸಿದೆ. ಪುಸ್ತಕಗಳು ಬರೆದುದಕ್ಕಿಂತಲೂ ಬೇರೆಯೇ ಆಗಿ ಅವರು ಜೀವಿಸುತ್ತಿದ್ದರು. ಅವರ ಜೀವನಗಳಲ್ಲಿ ಸ್ವಾರಸ್ಯವಾದುದನ್ನೇನಾದರೂ ಕಂಡುಹಿಡಿಯುವುದು ಕಷ್ಟವಾಗಿತ್ತು. ಅಂತೂ ಒಂದು ವಿಷಯ ನನಗೆ ತಿಳಿದಿತ್ತು - ಅವರಂತೆ ಜೀವಿಸಲು ನಾನು ಇಷ್ಟಪಡಲಿಲ್ಲ.

○

# ಕ್ರಾಂತಿಯ ಸಂರಕ್ಷಣೆಗೆ 'ಕಹಿ ನೆನಪುಗಳ ಭೋಜನ'

*'ಚೀನಾ ಎಂದರೇನು? ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವೇ?" 1972 ರ ಮಾರ್ಚ್ ತಿಂಗಳಲ್ಲಿ ಅಮೆರಿಕದಲ್ಲಿ ಮತ್ತು ಕೆನಡದಲ್ಲಿ ಏಕಕಾಲಕ್ಕೆ ಪ್ರಕಟಿಸಲ್ಪಟ್ಟ 'ಚೀನಾ! ಜನತಾ ಗಣರಾಜ್ಯದ ಒಳಗಡೆ" ಎಂಬ ಪುಸ್ತಕದ ರಕ್ಷಾಪುಟದ ಹಿಂಬದಿಯ ಪುಟದಲ್ಲಿ ಈ ವಾಕ್ಯಗಳಿವೆ. 1971 ರಲ್ಲಿ ವಿದ್ಯಾರ್ಥಿಗಳು, ಇತಿಹಾಸಕಾರರು, ರಾಜಕೀಯ ವಿಜ್ಞಾನಿಗಳು ಮತ್ತು ಸಮಾಜಶಾಸ್ತ್ರಜ್ಞರನ್ನು ಒಳಗೊಂಡ 'ಕಾಳಜಿ ಹೊಂದಿದ ಏಶ್ಯನ್ ವಿಧ್ವಾಂಸರ ಸಮಿತಿ'ಯ 15 ಮಂದಿ ಸದಸ್ಯರು ಚೀನಾ ಗಣರಾಜ್ಯಾದ್ಯಂತ ಒಂದು ತಿಂಗಳ ಕಾಲ ಪ್ರವಾಸ ಮಾಡಿದ ನಂತರ ರಚಿಸಿದ 433 ಪುಟಗಳ ಕೃತಿಯಿಂದ ಕೆಲವು ವಾಕ್ಯಗಳನ್ನಷ್ಟೇ ಈ ಕೆಳಗೆ ಉಲ್ಲೇಖಿಸಲಾಗಿದೆ. ಚೀನಾದ ಕ್ರಾಂತಿಗಿಂತ ಮೊದಲು ಅಲ್ಲಿನ ಜನಸಾಮಾನ್ಯರ ಜೀವನದ ಪರಿಸ್ಥಿತಿ ಹೇಗಿತ್ತೆಂಬುದನ್ನು ಹೊಸ ಪೀಳಿಗೆಗಳಿಗೆ ನಿರಂತರವಾಗಿ ಕಲಿಸುವ ಮೂಲಕ ಕ್ರಾಂತಿಯನ್ನು ಸಂರಕ್ಷಿಸುತ್ತಿರುವ ಚೀನಾದ ಜನಸಾಮಾನ್ಯರ ಸಂಪ್ರದಾಯವು ವಿಶಿಷ್ಟವಾದದ್ದು. ಮುಂದಿನ ವಾಕ್ಯಗಳು ಪುಸ್ತಕದ 23ನೇ ಪುಟದಿಂದ.*

*"ಒಂದು ದಿನ ನಾವು ಯೆನಾನ್‌ನ ರಸ್ತೆಗಳಲ್ಲಿ ಅಡ್ಡಾಡುತ್ತಿದ್ದಾಗ, ಚಿಕ್ಕ ಮಕ್ಕಳ ಒಂದು ಗುಂಪು ಒಂದು ನೋಟೀಸು ಬೋರ್ಡನ್ನು ನೋಡುತ್ತಿರುವುದನ್ನು ಗಮನಿಸಿದೆವು. ಅದರ ಪುಟ್ಟ ಮುಖಗಳಲ್ಲಿ ದುಗುಡ ದುಮ್ಮಾನಗಳು ತುಂಬಿದ್ದವು. ಬೋರ್ಡಿನ ಮೇಲೆ ಚೀನಾದ ಹಿಂದಿನ ಮತ್ತು ಈಗಿನ ಛಾಯಾ ಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಆದರೆ ಅವುಗಳಲ್ಲಿ ಹಳೆಯ ಚೀನಾದ ಚಿತ್ರಗಳೇ ಅವರನ್ನು ಆಕರ್ಷಿಸಿದ್ದವು. ಹಸಿವಿನಿಂದ ಸುಕ್ಕುಕಟ್ಟಿದ ಮುಖಗಳು ಅಥವಾ ಕೊಲೆ ಮಾಡಲ್ಪಟ್ಟು ಚರಂಡಿಗಳಲ್ಲಿ ಬಿದ್ದಿರುವ ತಮ್ಮ ದೇಶಬಾಂಧವರ ದೇಹಗಳನ್ನು ದಿಟ್ಟಿಸಿ ನೋಡುತ್ತಿರುವ ಜಪಾನಿ ಸೈನಿಕನ ಚಿತ್ರಗಳನ್ನು ನೋಡುವಾಗ ಅವರ ಕಣ್ಣುಗಳಲ್ಲಿ ಆಘಾತದ ಭಾವನೆಗಳನ್ನು ನಾವು ನೋಡಿದೆವು. ತಮ್ಮ ಪ್ರಾಯದ ಮಕ್ಕಳು ಜನನಿಬಿಡ, ಕೊಳಕು ಕಾರ್ಖಾನೆಗಳಲ್ಲಿ ಅಪಾಯಕಾರಿ ಕೆಲಸಗಳನ್ನು ಮಾಡುವುದನ್ನೂ, ಪುಟ್ಟ ಬಾಲಕಿಯರನ್ನು ರಸ್ತೆಗಳಲ್ಲಿ ಮಾರಾಟ ಮಾಡುವುದನ್ನೂ ಅವರು ನೋಡಿದರು. ನಾವು ನಮ್ಮಷ್ಟಕ್ಕೆ ಹೊರಟು ಹೋದೆವು. ಆದರೆ ಮುಂದಿನ ದಿನಗಳಲ್ಲಿ ನಾವು ಸಂದರ್ಶಿಸಿದ ಇತರ ಸ್ಥಳಗಳಲ್ಲಿಯೂ ಇಂತಹ ಪ್ರದರ್ಶನಗಳು ಸಾಮಾನ್ಯವಾಗಿರುವುದನ್ನು ನಾವು ನೋಡಿದೆವು.*

*ಇದು ಚೀನಾದ ತಲೆಮಾರಿನ ಅಂತರ. ಚೀನಾದ ಮಕ್ಕಳು ಎಂದೂ ತಮ್ಮ ಹೆತ್ತವರು ಅನುಭವಿಸಿದ್ದಂತಹ ಕಷ್ಟಗಳನ್ನು ಎದುರಿಸುವ ಪರಿಸ್ಥಿತಿ ಇರಲಿಲ್ಲ. ಯುದ್ಧದ ವರ್ಷಗಳ ಅಥವಾ ಪ್ರಕೃತಿ ವಿಕೋಪಗಳ ಸಂಕಷ್ಟಗಳನ್ನಾಗಲೀ, ಭೂಮಾಲಕರಿಂದ ಒಕ್ಕಲೆಬ್ಬಿಸಲ್ಪಡುವ ಯಾತನೆಗಳನ್ನಾಗಲೀ, ಭೂಮಿ ಇಲ್ಲದೆ, ಮನೆ ಇಲ್ಲದೆ, ಬರಡು ಚೀನಾದಾದ್ಯಂತ ದಿಕ್ಕುದೆಸೆ ಇಲ್ಲದೆ ಅಡ್ಡಾಡುವುದಾಗಲೀ ಅವರ ಜೀವನದಲ್ಲಿ ಎಂದೂ ಅನುಭವವಾಗಿರಲಿಲ್ಲ.*

*ಇಂದು ಚೀನಾದಲ್ಲಿ ಮಕ್ಕಳಿಗೆ "ಕಹಿ ನೆನಪುಗಳನ್ನು" ಕಲಿಸುವ ಈ ಮೂಲಕ ಈ ಅಂತರಕ್ಕೆ ಸೇತುವೆ ಹಾಕಲಾಗುತ್ತಿದೆ. ದೃಶ್ಯ ಮತ್ತು ಶ್ರವಣದ ಮೂಲಕ ಹಾಗೂ ತಮ್ಮ ಅನುಭವಗಳನ್ನು ಪುನರ್‌ನಿರ್ಮಿಸುವ ಮೂಲಕ ಚೀನಾದ ಹಿರಿಯರು ಯುವ ಪೀಳಿಗೆಗೆ ಜೀವಂತ ವಸ್ತುಸಂಗ್ರಹಾಲಯಗಳಾಗುತ್ತಾರೆ.*

*ಈ ರೀತಿಯಲ್ಲಿ ನೆನಪುಗಳನ್ನು ಜೀವಂತವಾಗಿಡುವುದರಲ್ಲಿ 'ಕಹಿ ನೆನಪುಗಳ ಭೋಜನ' ಎಂಬ ವಿಧಾನವೂ ಒಂದಾಗಿದೆ. ವರ್ಷದ ಕೆಲವು ದಿನಗಳಲ್ಲಿ ಹಿಂದೆ ಬರಗಾಲದ ಸಮಯಗಳಲ್ಲಿ ಚೀನೀಯರು ತಿನ್ನಬೇಕಾಗಿ ಬಂದ ಎಲೆಗಳು, ಮರಗಳ ತೊಗಟೆಗಳು ಮತ್ತು ಕಹಿ ಬೇರುಗಳನ್ನು ಬೇಯಿಸಿ, ಮಕ್ಕಳಿಗೆ ಬಡಿಸುತ್ತಾರೆ. ಮಕ್ಕಳು ಅದನ್ನು ತಿನ್ನುತ್ತಿರುವಾಗ, ಒಬ್ಬ ಅಜ್ಜ, ಅಜ್ಜಿ ತಂದೆ ಅಥವಾ ತಾಯಿ ಗತಕಾಲದ ಕಣ್ಣೀರ ಕತೆಗಳನ್ನು ಹೇಳುತ್ತಾರೆ. ತಚ್ಯಾಯ್ ಒಬ್ಬಾಕೆ ಕೆಂಪುಗಲ್ಲದ, ಒಳ್ಳೆಯ ಆರೈಕೆ ಪಡೆದ ಬಾಲಕಿ, ನಮ್ಮೊಡನೆ ಹೇಳಿದಳು "ಭೂಮಾಲಕರ ಕಣಜಗಳು ತುಂಬಿರುವಾಗ ನನ್ನ ಹೆತ್ತವರು ಹುಲ್ಲು ಮತ್ತು ಎಲೆಗಳನ್ನು ತಿನ್ನಬೇಕಾಗಿತ್ತು ಎಂಬುದನ್ನು ನೆನಪಿಸಿಕೊಳ್ಳುವಾಗ ನನಗೆ ಅತ್ಯಂತ ದುಃಖವಾಗುತ್ತದೆ". ನಾವು ಭೇಟಿಯಾದ ಚೀನೀಯರು ಇಂತಹ ವಿಷಯಗಳ ಕುರಿತು ಮಾತನಾಡಿದಾಗ ಅವರ ಅಂತರಾಳದ ಭಾವನೆಗಳನ್ನು ನಾವು ಅರ್ಥಮಾಡಿಕೊಂಡೆವು.*

*ರೈತರು ಮತ್ತು ವೃದ್ಧರು ಶಾಲೆಗಳಿಗೂ, ವಸತಿ ಪ್ರದೇಶಗಳಲ್ಲಿರುವ ಅಭ್ಯಾಸ ತರಗತಿಗಳಿಗೂ ಭೇಟಿ ನೀಡುತ್ತಿದ್ದರು. ವಿಮೋಚನಾಪೂರ್ವದ ದಿನಗಳಲ್ಲಿ ತಮ್ಮ ಏಕಮಾತ್ರ ಉಡುಗೆಯಾದ ತೇಪೆ ಹಾಕಿದ ಚಿಂದಿ ಬಟ್ಟೆಯನ್ನು ಮಕ್ಕಳಿಗೆ ತೋರಿಸುತ್ತಿದ್ದರು. ಮತ್ತು ತಮ್ಮ ಸಹೋದರ ಸಹೋದರಿಯರನ್ನು ಹೇಗೆ ಗುಲಾಮಗಿರಿಗೆ ಮಾರಾಟ ಮಾಡಲಾಯಿತು, ಯಾರು ಉಪವಾಸದಿಂದ ಸತ್ತರು ಎಂಬುದನ್ನು ವಿವರಿಸುತ್ತಿದ್ದರು.*

ಬಿ.ಮಾಧವ

# ಹೆಣ್ಣುಗಳ ಗೋಳಿನ ಅನಾವರಣ - 'ಮುನ್ನುಡಿ'

**ಬೋಳುವಾರರ 'ಮುತ್ತುಚೇರ' ಕಥೆಯೀಗ 'ಮುನ್ನುಡಿ' ಚಿತ್ರವಾಗಿ ತೆರೆಕಂಡಿದೆ. ಇದೊಂದು ಪ್ರಗತಿಪರ, ಅತ್ಯುತ್ತಮ ಕಥೆ. ಮುಸ್ಲಿಂ ಸಮುದಾಯದ ನಡುವಿನ ಸ್ಥಿತಿಯ ಮಾನವೀಯ ಮಿಡಿತದ ಚಿತ್ರಣದ ಅನಾವರಣ. ಹೀಗೆ ಮುಸ್ಲಿಂ ಸಮುದಾಯದ ಎಲ್ಲರೂ ಸಹ ಚಿತ್ರನೋಡಿ, ಆತ್ಮವಿಮರ್ಶೆಗೆ ತೊಡಗಿ ಹಲವಾರು ಸುಧಾರಣೆಗಳತ್ತ ಹೆಜ್ಜೆ ಇಡಲು ಪ್ರೇರೇಪಿಸಬಲ್ಲದ್ದು ಕೂಡ.**

**ಆದರೆ ಈ ನಡುವೆ...**

**ತಮ್ಮ ತಟ್ಟೆಯಲ್ಲಿ ಹೆಣವಿದ್ದರೂ ಇನ್ನೊಬ್ಬರ ನೊಣವನ್ನೇ ಎತ್ತಿ ಆಡಿ ಹಿಂಸಾಸುಖ ಅನುಭವಿಸುವುದರಲ್ಲಿ, ಪ್ರಗತಿಪರ ಯತ್ನಗಳಿಗೆ ವಿಷ ಹಿಂಡುವಲ್ಲಿ ಪರಿಣತರಾದ ಸಂಘ ಪರಿವಾರದ ಮನಸ್ಸುಗಳು ತರಂಗ, ತುಷಾರ ಪತ್ರಿಕೆಗಳಲ್ಲಿ ವಿಪರೀತ ಪ್ರಚಾರ ನೀಡಿ ವಿಕೃತವಾಗಿ ವಿಜೃಂಭಿಸಿವೆ. ಇಂತಹ ಮತೀಯವಾದಿ ಯತ್ನಗಳ ಪರಿಣಾಮ, ಮುಸ್ಲಿಂ ಸಮುದಾಯವು ಪ್ರಗತಿಪರ ಚಿಂತನೆಯತ್ತ ಹೊರಬಹುದಾಗಿದ್ದ ಪ್ರಕ್ರಿಯೆಯನ್ನು ತಡೆದಿದ್ದು, ಅತ್ತ ಮುಸ್ಲಿಂ ಮೂಲಭೂತವಾದಿ ಮನಸ್ಸುಗಳು ಸಹ ಸಂಘ ಪರಿವಾರದ ಕ್ರಿಯೆಗೆ ಪ್ರತಿಕ್ರಿಯಿಸಿ ಗುಟುರು ಹಾಕುತ್ತಿವೆ. ಇದರ ಎರಡೂ ಪರಿಣಾಮಗಳೂ ಒಂದೆ. ಪಾತಕ ಪ್ರಪಂಚದಲ್ಲೇ ಜನ ಕೊಳೆಯುವುದು. ಅಮಾನವೀಯತೆಯ ಆಶ್ರಯದಲ್ಲೇ ಜೀವ ಸವೆಸುವುದು.**



ಬೊಳುವಾರು ಮಹಮ್ಮದ್ ಕುಂಞ ಇವರ ಸಣ್ಣ ಕಥೆಯಾಧಾರಿತ, ಶೇಷಾದ್ರಿ ನಿರ್ದೇಶನದ 'ಮುನ್ನುಡಿ' ಚಲನಚಿತ್ರವು ಈಗಲೂ ಭಾರತದ ಕರಾವಳಿ ತೀರದ ಊರೊಂದರಲ್ಲಿ ಚಲಾವಣೆಯಲ್ಲಿರುವ ಮಹಿಳಾ ಶೋಷಣೆಯ ವಿಕೃತ ಪದ್ಧತಿಯೊಂದರ ಅನಾವರಣ ಮಾಡುತ್ತದಲ್ಲದೆ, ಅದಕ್ಕೆ ಕಾರಣೀಭೂತವಾದ ಅನೇಕ ಅಂಶಗಳನ್ನು ಗಂಭೀರವಾಗಿ ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡುತ್ತದೆ.

ಕಡಲ ತೀರದ ಈ ಹಳ್ಳಿ ಬಂದರು ಪಟ್ಟಣವೊಂದರ ಸಮೀಪದಲ್ಲಿದೆ.ಅರಬೀ ವ್ಯಾಪಾರಿಗಳು ಮರದ ದಿಮ್ಮಿಗಳ ವ್ಯಾಪಾರಕ್ಕೆಂದು ಹಡಗುಗಳಲ್ಲಿ ಪ್ರತಿ ಬೇಸಗೆಯಲ್ಲೂ ಬಂದು ಮೂರೋ ನಾಲ್ಕೋ ತಿಂಗಳ ಕಾಲ ಬಂದರ ಪಟ್ಟಣದ ಭಾರಿ ಹೋಟೆಲುಗಳಲ್ಲಿ ಉಳಿದು, ವ್ಯಾಪಾರ ಹೊಂದಾಣಿಕೆಯಾಗಿ ಸರಕು ಸಾಗಾಣೆ ವ್ಯವಸ್ಥೆಯಾದ ಮೇಲೆ ಅರಬಿ ಸ್ಥಾನಕ್ಕೆ ಹಿಂತಿರುಗುತ್ತಾರೆ. ಆ ಬಂದರು ಪಟ್ಟಣದಲ್ಲಿ ಮರದ ಮಿಲ್ಲುಗಳನ್ನು ಇಟ್ಟುಕೊಂಡಿರುವ ವ್ಯಾಪಾರಿಗಳು. ಅವರ ಮಿಲ್ಲುಗಳಲ್ಲಿ ಕೆಲಸ ಮಾಡುವ ಕಾರ್ಮಿಕರು

**ಕೃಷ್ಣ ಅಪೂರ್ವ**

ಸರಿಯಾದ ಖಾಯಂ ನೌಕರಿಯಿಲ್ಲದೆ ಅಲೆದಾಡುವ ಯುವಕರು, ಭೂಮಿಕಾಣಿ ಇಲ್ಲದೆ ಬೇರೆ ದುಡಿಮೆ ಇಲ್ಲದ ಗಂಡಸರು. ಕುಟುಂಬದ ನಿರ್ವಹಣೆಗಾಗಿ ಒಂದೋ ಶ್ರೀಮಂತರ ಮನೆ ಕೆಲಸ ಮಾಡಬೇಕಾದ ಇಲ್ಲವೇ ಬೀಡಿ ಕಟ್ಟಬೇಕಾದ ಹೆಂಗಸರು. ಇಂಥ ಧಾರುಣ ಪ್ರಪಂಚವೊಂದು ಕಡಲ ತೀರದ ಈ ಹಳ್ಳಿಯಲ್ಲಿ ನೆಲೆ ನಿಂತಿದೆ. ಈ ನಿರ್ಗತಿಕ ಪ್ರಪಂಚದಿಂದ ದೂರವಾಗಿ ಹೇಗಾದರೂ ವಿದೇಶದ ವೀಸಾ ಗಿಟ್ಟಿಸಿ ಸಂಪತ್ತು ಹೊತ್ತು ತರಬೇಕೆಂದು ಯುವಕರು ಕನಸು ಕಾಣುತ್ತಿದ್ದಾರೆ. ಅರಬಿಗಳಿಗೆ ಮರದ ದಿಮ್ಮಿ ಮಾರುವ ಮಿಲ್ಲು ಮಾಲಕರು ವೀಸಾ ಕೊಡಿಸುವ ದಾತಾರರೂ ಹೌದು. ತಮ್ಮ ಮಿಲ್ಲಿನ ದಿಮ್ಮಿಗಳನ್ನೇ ಅರಬಿಯು ಖರೀದಿಸುವಂತೆ ಮಾಡಲು, ಅರಬಿಗಳಿಗೆ ವಾಸ್ತವ್ಯ ಕಾಲದಲ್ಲಿ ಹೆಣ್ಣುಗಳನ್ನು ಒದಗಿಸಿಕೊಡುವ ಕೃತ್ಯವೂ ಧರ್ಮ ಸಮ್ಮತವೆನ್ನುವಂತೆ ಅವನ್ನು 'ನಿಕಾಹ್' ಮತ್ತು 'ತಲಾಕ್' ಗಳ ಚೌಕಟ್ಟಿನಲ್ಲಿ ಅಳವಡಿಸುವ ಸಾಹುಕಾರರು ಮತ್ತು ಹಣ ಪಿಪಾಸು ಖಾಜಿಗಳು, ಅರಬಿಯನ್ನು ವಿವಾಹವಾಗಿ ಸಂಪತ್ತಿನ ಸಾಗರದಲ್ಲಿ ಓಲಾಡುವ ಕನಸು ಕಾಣುವ ಎಳೆಯ ಹೆಣ್ಣುಗಳು, ಮೂರೋ, ನಾಲ್ಕೋ ತಿಂಗಳು ಅರಬಿಯೊಡನೆ ದಾಂಪತ್ಯ ಹೊಂದಿ ಬಳಿಕ ಆತನಿಂದ ವಿಚ್ಛೇದನಗೊಂಡು ಆತಂಕಗೊಳ್ಳುವವರು, ಮರುವರ್ಷ ಮತ್ತೆ ಯಾವ ಅರಬಿ ಬಂದಾನೆಂದು ಕಾಯುವವರು, ಮದುವೆ ಆಗಲು ಇನ್ಯಾರ್ಯಾರು ಹೆಣ್ಣುಗಳು ಬಾಕಿ ಇದ್ದಾರೆ ಎಂದು ತಲಾಶೆ ಮಾಡುವ ತಲೆ ಹಿಡುಕರು - ಹೀಗೆ ಒಂದು ಘೋರವಾದ ಹೀನ ಪ್ರಪಂಚವೇ ಕಡಲ ತೀರದ ಈ ಹಳ್ಳಿಯಲ್ಲಿದೆ. ಇದು ಹಿನ್ನೆಲೆ.

ರುಕಿಯಾಳನ್ನು ಮದುವೆಯಾದ ಅರಬಿ ತಲಾಕ್ ಕೊಡದೆ ಮತ್ತೆ ಬರುವೆನೆಂದು ಹೇಳಿ ಹೋಗಿದ್ದಾನೆ. ರುಕಿಯಾಳ ಹೆಣ್ಣು ಮಗಳು ಬೆಳೆದು ನಿಲ್ಲುತ್ತಾಳೆ. ಅರಬಿ ಬರುವುದೇ ಇಲ್ಲ.ತಲಾಕ್ ಕೊಟ್ಟಿದ್ದರೆ ರುಕಿಯಾಗೆ ಇನ್ನೊಬ್ಬ ಅರಬಿಯೊಂದಿಗೆ ಮರು ಮದುವೆಯಾಗಬಹುದಿತ್ತು. ವಿಚ್ಛೇದ ಆಗಿದೆಯೆಂದು ಸುಳ್ಳೇ ಪ್ರಚಾರ ಮಾಡಿ ಮರು ಮದುವೆಯಾಗುವವಳು ರುಕಿಯಾ ಅಲ್ಲ. ಏಜೆಂಟ ಹಸನಬ್ಬ ಒತ್ತಾಯಿಸುತ್ತಲೇ ಇದ್ದರೂ, ಈಕೆಯ ಬಿರುನುಡಿಗೆ ಕೈಲಾಗದೆ ಸೋತಿದ್ದಾನೆ. ನಿಕಾ ಮಾಡಿಕೊಂಡು ಹೋದ ಅರಬಿ ಕೊಟ್ಟಿದ್ದ ಅಷ್ಟಿಷ್ಟು ಹಣ ಖಾಲಿಯಾಗಿದೆ. ಇನ್ನಾರೂ ಆಶ್ರಯವಿಲ್ಲದ ರುಕಿಯಾ ಮಿಲ್ಲು ಸಾಹುಕಾರನ ಮನೆಗೆ ಮನೆಗೆಲಸಕ್ಕೆ ಹೋಗುತ್ತಾಳೆ. ಮಗಳು ಮನೆಯಲ್ಲಿ ಬೀಡಿ ಕಟ್ಟಿ ಒಂದಿಷ್ಟು ಗಳಿಸುತ್ತಾಳೆ. ತಲೆಹಿಡುಕ ಹಸನಬ್ಬನಿಗೂ ಕಷ್ಟ. ಆತನ ಮಗಳೂ ಬೆಳೆದು ನಿಂತಿದ್ದಾಳೆ. ತಾನು ಇತರರ ಹೆಣ್ಣು ಮಕ್ಕಳನ್ನು ಅರಬಿಗಳಿಗೆ ಮದುವೆ ಮಾಡಿಸಿಕೊಟ್ಟಂತೆ ಮಾಡಲು ಅವನ ಮನಸ್ಸು ಒಪ್ಪುತ್ತಿಲ್ಲ. ಅವನ ಜೀವನ ಸಾಗಬೇಕಾದರೂ ಯಾರಾದರೂ ಹೆಣ್ಣು ಮಕ್ಕಳನ್ನು ಅರಬಿಗಳಿಗೆ ಗಂಟು ಹಾಕಬೇಕಾದ ಪರಿಸ್ಥಿತಿ ಅವನಿಗೆ. ಅರಬಿಯಲ್ಲದ ಅರ್ಹನಾದ ಯುವಕನೊಬ್ಬನಿಗೆ ಮಗಳನ್ನು ತಂದೆಯ ಸಮ್ಮುಖ ಮದುವೆ ಮಾಡಿಸುವ ಕನಸು ರುಕಿಯಾಗೆ. ಹೆಣ್ಣುಗಳ ವ್ಯಾಪಾರವನ್ನು ವಿರೋಧಿಸುವ ಯುವಕ ಉಬ್ಬೆದುವಿನ ಅಕ್ಕನೂ ಕೆಲ ವರ್ಷಗಳ ಹಿಂದೆ ಅರಬಿಯ ಮದುವೆಯಾಗಿ ತಲಾಕ್ ಪಡೆದು ಮರುಮದುವೆಗೆ ಕಾಯುತ್ತಿದ್ದಾಳೆ. ಉಬ್ಬೆದುವಿಗೆ ಈ ಕೊಳಕು ಪ್ರಪಂಚದಿಂದ ಒಮ್ಮೆ ತಪ್ಪಿಸಿ ಹೇಗಾದರೂ ವಿದೇಶಕ್ಕೆ ಹೋಗಿ ಸಂಪಾದಿಸಬೇಕೆಂಬ ಆಸೆ. ಆದರೆ ಅಕ್ಕ ಅರಬಿಯೊಬ್ಬನನ್ನು ಮರು ಮದುವೆಯಾಗುವುದನ್ನು ಒಪ್ಪಲಾರ. ಸಾಹುಕಾರನ ಮಿಲ್ಲಿನಲ್ಲಿ ಕಾರ್ಮಿಕನೊಬ್ಬನಿಗೆ ಹೊಳೆಯಾಚೆಗಿರುವ ತಂದೆ ತಾಯಿಗಳಿಲ್ಲದ ಹಾಗೂ ತನಗೆ ಬಂಧುವಾಗಿರುವ ಹೆಣ್ಣು ಮಗಳೊಬ್ಬನ್ನು ಅರಬಿಯೊಬ್ಬನಿಗೆ ನಿಕಾ ಮಾಡಿಸಿ ಒಂದಿಷ್ಟುಹಣ ಗಳಿಸುವ ಆಸೆ. ಈ ಸೀಸನ್ನಿನಲ್ಲಿ ಮೂವರು ಅರಬಿಗಳು ಬಂದರು ಪಟ್ಟಣಕ್ಕೆ ಬಂದಿದ್ದಾರೆ. ಅವರನ್ನು ತೃಪ್ತಿಗೊಳಿಸುವುದು ಮಿಲ್ಲಿನ ಸಾಹುಕಾರನ ಹಾಗೂ ತಲೆಹಿಡುಕ ಹಸನಬ್ಬನ ಕರ್ತವ್ಯವಾಗಿದೆ. ರುಕಿಯಾಳ ಮಗಳನ್ನು ಮದುವೆ ಮಾಡಿಸಲು ಹಸನಬ್ಬ ವಿಫಲನಾಗಿದ್ದಾನೆ. ಉಬ್ಬೆದುವಿನ ವಿರೋಧ ಕಂಡು ಪ್ರಥಮ ಪ್ರಯತ್ನದಲ್ಲಿ ಉಬ್ಬೆದುವಿನ ಅಕ್ಕನನ್ನು ಒಲಿಸಲು ಕೂಡಾ ವಿಫಲನಾಗಿದ್ದಾನೆ. ಹೊಳೆಯಾಚೆಯ ಅನಾಥ ಹೆಣ್ಣು ಮಗಳನ್ನು ಅರಬಿಗೆ ನಿಕಾ ಮಾಡಿಸಲು ಯಶಸ್ವಿಯಾಗುತ್ತಾನೆ.

ಅರಬಿಯ ದೌರ್ಜನ್ಯದ ವರ್ತನೆಗೆ ಹೆದರಿದ ಬಡ ಹೆಣ್ಣು ಮಗಳು ಮರುದಿನವೇ ಕಾಣೆಯಾಗುತ್ತಾಳೆ. ಆದರೆ ಅರಬಿಯನ್ನು ತೃಪ್ತಿ ಪಡಿಸುವುದಕ್ಕೋಸ್ಕರ ಸಾಹುಕಾರ ಮತ್ತು ಹಸನಬ್ಬ ಸೇರಿ ಉಬ್ಬೆದುವಿಗೆ ವೀಸಾದ ಭರವಸೆ ನೀಡಿ ಆತನ ಅಕ್ಕನನ್ನು ಜೊತೆ ಮಾಡಿಸುತ್ತಾರೆ. ಬಂದಿರುವ ಇನ್ನೊಬ್ಬ ಅರಬಿಗಾಗಿ ರುಕಿಯಾಳ ಮಗಳನ್ನು ಜೋಡಿಸಲು ರುಕಿಯಾಳನ್ನು ಮಾತಿನಲ್ಲಿ ಒಲಿಸಲು ಹಸನಬ್ಬ ಮತ್ತೆ ವಿಫಲನಾಗುತ್ತಾನೆ. ತನ್ನ ಮನೆಗೆ ಕೆಲಸಕ್ಕೆ ಬರುವ ರುಕಿಯಾಗೆಸಾಹುಕಾರ ಮರುದಿನ ನಿಕಾ ತಾನೇ ತನ್ನ ಮನೆಯಲ್ಲಿ ನಿಶ್ಚಯಿಸಿರುವುದಾಗಿ ಹೇಳುತ್ತಾನೆ. ಬಡವಳಾದ ರುಕಿಯಾ ಅಸಹಾಯಕತೆಯಿಂದ ಮೂಕಳಾಗಿದ್ದಾಳೆ. ಹೆಣ್ಣಿನ ಕಬೂಲ್(ಒಪ್ಪಿಗೆ) ಕೇಳಲು ಖಾಜಿ ಮತ್ತು ಹಸನಬ್ಬ ರುಕಿಯಾಳ ಮನೆಗೆ ಬಂದು ಪ್ರಶ್ನಿಸಿದಾಗ, ಮೌನವೇ ಉತ್ತರವಾಗಿತ್ತಾದರೂ, ಅದನ್ನು ಒಪ್ಪಿಗೆಯೆಂದು ವ್ಯಾಖ್ಯಾನಿಸಿ ಇಬ್ಬರೂ ಘೋಷಿಸುತ್ತಾ ಹೋಗುತ್ತಾರೆ.

ಅರಬಿಯ ದೌರ್ಜನ್ಯಕ್ಕೆ ಹೆದರಿ ಹೊಳೆಗ ಬಿದ್ದ ಅನಾಥ ಹೆಣ್ಣು ಮಗಳ ಹೆಣ ತೇಲಿ ಬರುತ್ತದೆ. ಹಳ್ಳಿಯ ಜನ ಎಲ್ಲ ನೊಂದು ದೌಡಾಯಿಸಿದ್ದಾರೆ. ಅರಬಿ ಜೊತೆ ತನಗೆ ನಿಕಾ ಬೇಡ ಎಂದು ರುಕಿಯಾ ಮಗಳು ಬೇಡುತ್ತಾಳೆ. ಮರುದಿನ ಸಾಹುಕಾರನ ಮನೆಯಲ್ಲಿ ಅರಬಿ ಹಾಜರಿದ್ದು ನಿಕಾ ಸಿದ್ಧತೆಯಾಗಿದೆ. ರುಕಿಯಾ ಓಡೋಡಿ ಬಂದು 'ನಮ್ಮ ಹೆಣ್ಣಿಗೆ ಕಬೂಲು ಇಲ್ಲ ತಡೆಯಿರಿ' ಎಂದು ಕೂಗಾಡುತ್ತಾಳೆ. ಅಲ್ಲಿ ಸೇರಿದ ಖಳರು ಅವಳನ್ನು ತಳ್ಳುತ್ತಿದ್ದಂತೆಯೇ ಅವಳು ಕೈಗೆ ಸಿಕ್ಕ ಕಷ್ಟ ಕತ್ತಿಯನ್ನು ಹಿಡಿದೆತ್ತಿ ನಿಲ್ಲುತ್ತಾಳೆ.

ಕನಸು, ವಾಸ್ತವ, ಅಸಹಾಯಕತೆ, ಪ್ರತಿರೋಧ ಹೀಗೆ ಹಲವು ಭಾವನಾತ್ಮಕ ಸನ್ನಿವೇಶಗಳ ಮೂಲಕ ಒಂದು ಕೆಟ್ಟ ಪದ್ಧತಿಯೊಂದರ ವಿಶ್ಲೇಷಣೆಯನ್ನು ದೃಶ್ಯಗಳಲ್ಲಿ ಕಟ್ಟಿ ಕೊಡುವ ಪ್ರಯತ್ನ 'ಮುನ್ನುಡಿ' ಸಿನಿಮಾದಲ್ಲಿದೆ. ಇದು ಕೇರಳದ ನಿರ್ದಿಷ್ಟ ಪಟ್ಟಣವೊಂದರಲ್ಲಿ ವಿಶೇಷವಾಗಿ ಕಾಣಬರುವ ವಿಕೃತಿಯಾದರೂ ಆ ಪದ್ಧತಿಯೊಂದಿಗೆ ಒಳಮಿಳಿತವಾಗಿರುವ ಹೆಣ್ಣಿನ ಶೋಷಣೆ, ಹೆಣ್ಣಿನ ಅಸಹಾಯಕತೆ, ಬಡತನದ ಧಾರುಣತೆಯನ್ನು ತಮ್ಮ ಏಣಿ ಮೆಟ್ಟಿಲುಗಳಾಗಿ ಬಳಸುವ ಸಾಹುಕಾರರು, ಧಾರ್ಮಿಕ ವೇಶ ತೊಟ್ಟ ದಲ್ಲಾಳಿಗಳು, ದೀನರೂ ಅದೇ ವೇಳೆಗೆ ಕ್ರೂರಿಗಳೂ ಆದ ತಲೆ ಹಿಡುಕರು - ಭಾರತದ ಸಮಾಜದಲ್ಲಿ ಎಲ್ಲ ಕಡೆ ಕಾಣುವಂತದ್ದು. ಈ ವಿಚಾರಗಳ ಹಿಂದಿನ ಆರ್ಥಿಕ, ಸಾಮಾಜಿಕ ನೆಲೆಗಳನ್ನು ಗುರುತಿಸುವ ಪ್ರಯತ್ನವೂ ಈ ಸಿನಿಮಾದಲ್ಲಿದೆ.

ರುಕಿಯಾ ಪಾತ್ರದಲ್ಲಿ ತಾರಾ ಹಾಗೂ ಹಸನಬ್ಬ ಪಾತ್ರದಲ್ಲಿ ದತ್ತಣ್ಣ ಅತ್ಯುತ್ತಮ ಅಭಿನಯ ನೀಡಿದ್ದಾರೆ ಉಳಿದ ಪಾತ್ರಗಳೂ ಉತ್ತಮ. ದಕ್ಷಿಣ ಕನ್ನಡದ ಬ್ಯಾರಿಗಳ ಹಾಡುಗಳ ಟ್ಯೂನುಗಳು, ದಪ್ಪು ಆಟ ಇತರ ಸಂಪ್ರದಾಯಗಳನ್ನು ಹಾಗೂ ದಕ್ಷಿಣ ಕನ್ನಡದ ಜನ ಆಡುವ ಕನ್ನಡ ಭಾಷೆಯನ್ನು ಚಿತ್ರದಲ್ಲಿ ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ. ಛಾಯಾಗ್ರಹಣವು ಉತ್ತಮ. ನಿರ್ದೇಶಕ ಶೇಷಾದ್ರಿಯವರು ಪ್ರಥಮ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ.

ಧಾರ್ಮಿಕ ವಿಧಿ ವಿಧಾನಗಳನ್ನು ಧರ್ಮಶಾಸ್ತ್ರದ ಆಶಯಗಳ ಚೌಕಟ್ಟಿನಲ್ಲಿ ವ್ಯಾಖ್ಯಾನಿಸಿರುವ ಹಿರಿಯ ಖಾಜಿ ಒಬ್ಬ ಇದ್ದಂತೆ, ವ್ಯವಹಾರದ ದೃಷ್ಟಿಯಿಂದ ವ್ಯಾಖ್ಯಾನಿಸುವ ಕಿರಿಯ ಖಾಜಿ ಇನ್ನೊಬ್ಬ ಇದ್ದಾನೆ ಈ ಚಿತ್ರದಲ್ಲಿ. ಆದರೆ ಹೆಣ್ಣುಗಳ ಗೋಳನ್ನು ಇಲ್ಲವಾಗಿಸುವಲ್ಲಿ ಎರಡೂ ವ್ಯಾಖ್ಯಾನಗಳು ವಿಫಲವಾಗುತ್ತವೆ. ಅರಬಿಗೆ ಮದುವೆ ಮಾಡಿಸುವಾಗ ಪ್ರತಿಭಟನಾಕಾರಯುವಕರ ಗುಂಪು ಬಂದಾಗ, ನಿಕಾಗೆ ಸಿದ್ಧರಾಗಿ ಬಂದಿದ್ದ ದಲ್ಲಾಳಿ ಜನ ಎಲ್ಲ ಕೈ ಬಿಟ್ಟು ಕೊನೆಗೆ 'ಕುರಾನ್' ಗ್ರಂಥವನ್ನು ಕೆಳಗಿಟ್ಟು ಓಡುವುದು, ಅದನ್ನು ಹಿರಿಯ ಖಾಜಿ ಕೈಗೆತ್ತಿಕೊಳ್ಳುವುದು - ಸಿನಿಮಾದ ಪ್ರಬಲವಾದ ಸಂಕೇತವಾಗಿದೆ.

ನಿರಾಶ್ರಿತರು, ಉಗ್ರಗಾಮಿಗಳು,ಕಾಶ್ಮೀರ ಭೂಗತ ಜಗತ್ತು ಮೊದಲಾದ ಸಮಸ್ಯೆಗಳ ವಿಶ್ಲೇಷಣೆಯೆಂದು ಹೇಳಿ ಭ್ರಾಮಕ ಚಿತ್ರಣಗಳನ್ನು ನೀಡುವ ಬಾಲಿವುಡ್ ಸಿನಿಮಾಗಳ ಎದುರು, ವಾಸ್ತವವನ್ನು ಕಟ್ಟಿಕೊಡುವ 'ಮುನ್ನುಡಿ' ಮಹತ್ವದ ಚಿತ್ರವಾಗಿದೆ. ಇದೇ ವಸ್ತುವನ್ನು ಒಳಗೊಂಡ ಬೊಳುವಾರು ಅವರ 'ಮುತ್ತುಚ್ಚೇದ' ಕಥೆಯನ್ನು ಫಕೀರ್ ಮಹಮದ್ ಕಟಪಾಡಿ ಅವರ 'ಸರಕುಗಳು' ಕಾದಂಬರಿಯನ್ನು ಈ ಸಂದರ್ಭದಲ್ಲಿ ಗಮನಿಸಬೇಕಾದುದು ಅಗತ್ಯ.

### ಸಾದರ ಸ್ವೀಕಾರ

| | | |
|---|---|---|
| ದಲಿತಲೋಕ(ನಾಟಕ) | ಲೇಖಕರು ಎಸ್.ಮಾಲತಿ | ರೂ.10 |
| ಕೋಮುವಾದದ ರಾಜಕೀಯ | ಲೇ : ಜಿ.ರಾಜಶೇಖರ, ಕೆ.ಪಣಿರಾಜ, ಮಹಮ್ಮದ್ ಕಟಪಾಡಿ | ಬೆಲೆ ರೂ.25 |
| ಫಲಜ್ಯೋತಿಷ್ಯ ನಂಬುವಿರಾ? | ಲೇ.: ಡಾ.ಬಾಲಚಂದ್ರರಾವ್. | ಬೆಲೆ ರೂ.40 |
| ದಯಾ ಮರಣ | ಲೇ. ಡಾ.ಸಿ.ಜಿ.ಕೇಶವಮೂರ್ತಿ | ಬೆಲೆ ರೂ.25 |
| ಮೋಟಾರು ವಾಹನ ಕಾನೂನು | ಲೇ. ಸಿ.ಬಸವರಾಜು | ರೂ.20 |
| ತೊಟ್ಟಿಕ್ಕುವ ಪದ್ಯಗಳು | ಲೇ. ಡಾ.ರೈ.ಮಣಿಪಾಲ | ರೂ.25 |
| ಅನನ್ಯ ನೆನಪುಗಳು | ಲೇ. ಡಾ. ಸಿ.ಆರ್ ಚಂದ್ರಶೇಖರ್ | ರೂ.40 |
| ನಮ್ಮ ಪರಿಸರ | ಲೇ. ಡಾ.ಪಿ. ಶಿವರಾಮ ರೈ | ರೂ.40 |
| ವಿಚಿತ್ರ ಗಿಳಿ | ಲೇ. ನವಗಿರಿನಂದ | ರೂ. 25 |
| ಮಲ್ಲಿಗೆಯ ಮಳೆ | ಲೇ. ನವಗಿರಿನಂದ | ರೂ. 25 |
| ಚೌಕಾಸಿಯ ಪಾಠ | ಲೇ. ನವಗಿರಿನಂದ | ರೂ.25 |
| ಚಂದಮಾಮನ ಮನೆಗೆ | ಲೇ. ನವಗಿರಿನಂದ | ರೂ.25 |

**ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ ಪ್ರೈ. ಲಿ.**
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-560 001

PRB DECR 319-79/79 AIKYARANGA WEEKLY Reg.No.17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ